ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು
ಧಾರ್ಮಿಕ, ಸಾಮಾಜಿಕ, ರಾಜಕೀಯ ಅಧ್ಯಯನ

ಕನ್ನಡ ಸಾಹಿತ್ಯದಲ್ಲಿ ಎಂ. ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯ ಹಂಪಿ ಇದಕ್ಕೆ ಅರ್ಪಿಸಿದ ನಿಬಂಧ

ನಿಬಂಧಕಾರರು

ಬಾಲಕೃಷ್ಣ ಕೆ.

ಪಾರ್ವತಿ ನಿಲಯ, ಕೊರಮೇರು

ಅಂಚೆ : ಇಚಲಂಪಾಡಿ, ಪುತ್ತೂರು ತಾಲೂಕು - ೫೭೪೨೨೯

ಮಾರ್ಗದರ್ಶಕರು

ಡಾ। ಎಸ್. ಡಿ. ಶೆಟ್ಟಿ

ನಿರ್ದೇಶಕರು

ಡಾ। ಹಾ. ಮಾ. ನಾ. ಸಂಶೋಧನ ಕೇಂದ್ರ

ಶ್ರೀ ಧ. ಮ. ಕಾಲೇಜು, ಉಜಿರೆ

ಡಾ। ಹಾ. ಮಾ. ನಾ. ಸಂಶೋಧನ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ

ಅಕ್ಟೋಬರ್ - ೨೦೦೮

539

ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು
ಧಾರ್ಮಿಕ, ಸಾಮಾಜಿಕ, ರಾಜಕೀಯ ಅಧ್ಯಯನ

ಕನ್ನಡ ಸಾಹಿತ್ಯದಲ್ಲಿ ಎಂ. ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯ ಹಂಪಿ ಇದಕ್ಕೆ ಅರ್ಪಿಸಿದ ನಿಬಂಧ

ನಿಬಂಧಕಾರರು

ಬಾಲಕೃಷ್ಣ ಕೆ.
ಪಾರ್ವತಿ ನಿಲಯ, ಕೊರಮೇರು
ಅಂಚೆ : ಇಚಿಲಂಪಾಡಿ, ಪುತ್ತೂರು ತಾಲೂಕು - ೫೭೪೨೨೯

ಮಾರ್ಗದರ್ಶಕರು
ಡಾ| ಎಸ್. ಡಿ. ಶೆಟ್ಟಿ
ನಿರ್ದೇಶಕರು
ಡಾ| ಹಾ. ಮಾ. ನಾ. ಸಂಶೋಧನ ಕೇಂದ್ರ
ಶ್ರೀ ಧ. ಮ. ಕಾಲೇಜು, ಉಜಿರೆ

ಡಾ| ಹಾ. ಮಾ. ನಾ. ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ
ಅಕ್ಟೋಬರ್ - ೨೦೦೮

ದೃಢೀಕರಣ

'ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು, ಧಾರ್ಮಿಕ, ಸಾಮಾಜಿಕ, ರಾಜಕೀಯ ಅಧ್ಯಯನ' ಇದು ನಾನು ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆಯ ಡಾ। ಹಾ. ಮಾ. ನಾ. ಸಂಶೋಧನ ಕೇಂದ್ರದಲ್ಲಿ ಡಾ। ಎಸ್. ಡಿ. ಶೆಟ್ಟಿಯವರ ಮಾರ್ಗದರ್ಶನದಲ್ಲಿ ಎಂ. ಫಿಲ್. ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ. ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಇತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ.

Blakrishna

(ಬಾಲಕೃಷ್ಣ ಕೆ.)

ಉಜಿರೆ

1/10/08

ಪ್ರಮಾಣ ಪತ್ರ

ಶ್ರೀಯುತ ಬಾಲಕೃಷ್ಣ ಕೆ. ಇವರು 'ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು, ಧಾರ್ಮಿಕ, ಸಾಮಾಜಿಕ, ರಾಜಕೀಯ ಅಧ್ಯಯನ' ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಮತ್ತು ಉದ್ದೇಶಗಳಿಗಾಗಲಿ ಅವರು ಒಪ್ಪಿಸಿಲ್ಲ.

ಉಜಿರೆ

1/10/08

ಡಾ| ಎಸ್. ಡಿ. ಶೆಟ್ಟಿ
ಮಾರ್ಗದರ್ಶಕರು
ನಿರ್ದೇಶಕರು
ಡಾ| ಹಾ. ಮಾ. ನಾ. ಸಂಶೋಧನ ಕೇಂದ್ರ
ಶ್ರೀ. ಧ. ಮ. ಕಾಲೇಜು, ಉಜಿ

ಅನುಕ್ರಮಣಿಕೆ

◆◆◆



ಕರ್ನಲ್ ಮೆಕೆನ್ಜಿ

(೧೭೫೪ - ೧೮೨೧)



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಭೂಪಟ




ತುಳುನಾಡನ್ನು ಆಳಿದವರು
(ಕೈಫಿಯತ್ತುಗಳನ್ನು ಆಧರಿಸಿ)
ಶಿವಮೊಗ್ಗ
1. ಭೈರರವರು
2. ಚೌಟರು
3. ಅಜಿಲರು
4. ಬಂಗರು
ಚಿಕ್ಕಮಗಳೂರು
1
2
3
4
ಹಾಸನ
ಕೇರಳ
ಕೊಡಗು

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

'ತುಳುನಾಡು' ಎಂದೇ ಕರೆಯಲ್ಪಡುವ ಈ ಪ್ರದೇಶವು ಕರ್ನಾಟಕ ರಾಜ್ಯದ ದಕ್ಷಿಣಕನ್ನಡ ಜಿಲ್ಲೆಯೆಂದು ಸ್ಥೂಲವಾಗಿ ಹೇಳಬಹುದು. ಇತಿಹಾಸದ ಆರಂಭದಿಂದ ಮೊದಲ್ಗೊಂಡು ಮೈಸೂರು ಅರಸರ ಕಾಲದವರೆಗೂ ಇದು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳನ್ನು ಘಟ್ಟದ ಮೇಲಿನ ಕೆಲವು ಭಾಗಗಳಾದ ಶಿವಮೊಗ್ಗ, ಚಿಕ್ಕಮಂಗಳೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು. ಸಾಂಪ್ರದಾಯಿಕ ಹಿನ್ನಲೆಗಳ ಪ್ರಕಾರ ಇದು ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ, ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯಿಂದ ಉತ್ತರದಲ್ಲಿ ಕಲ್ಯಾಣಪುರದವರೆಗೆ ಇರುವ ಪ್ರದೇಶವು ತುಳುನಾಡೆಂದು ಕರೆಯಲಾಗುತ್ತಿತ್ತು.

ಹೀಗೆ ತುಳುನಾಡು ಎಂದು ಖ್ಯಾತವಾಗಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯಿದೆ. ಭಾರತೀಯ ಸಂಸ್ಕೃತಿಯಲ್ಲಿ ದ.ಕ. ಜಿಲ್ಲೆಯ ಕೊಡುಗೆ ಗುರುತರವಾದದ್ದು. ವಿವಿಧ ಭಾಷೆಯ ಜನಾಂಗಗಳು ಇದ್ಯಾಗ್ಯೂ ಇಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಕಾಣಬಹುದಾಗಿದೆ. ಇದು ಇಲ್ಲಿನ ವಿಶೇಷತೆ. ದ.ಕ. ಜಿಲ್ಲೆಗೆ ಪ್ರಾಚೀನ ಇತಿಹಾಸ ಇರುವುದರಿಂದ ಇಲ್ಲಿನ ಧಾರ್ಮಿಕ, ರಾಜಕೀಯ, ಐತಿಹ್ಯ, ಪೌರಾಣಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಇಂದು ಅಧ್ಯಯನ ಯೋಗ್ಯ ಸಂಗತಿಗಳು.

ವಿಜಯನಗರ ಪೂರ್ವಕಾಲೀನ ಕನ್ನಡ ನಾಡಿನ ಅಧ್ಯಯನಕ್ಕೆ ಶಾಸನ ಸಾಹಿತ್ಯ ನೆರವಾದರೆ, ಉತ್ತರ ಕಾಲೀನ ಅಧ್ಯಯನಕ್ಕೆ ಹೆಚ್ಚಿನದಾಗಿ ಮತ್ತು ಹೆಚ್ಚು ವ್ಯಾಪಕ ರೀತಿಯಲ್ಲಿ ಕೈಫಿಯತ್ತುಗಳು ನೆರವಾಗುತ್ತವೆ. ಇವುಗಳಲ್ಲಿ ಐತಿಹ್ಯ ಮತ್ತು ವದಂತಿಗಳನ್ನು ಮೇಳವಿಸಿಕೊಂಡ ಚರಿತ್ರೆಯ ನಿರೂಪಣೆಯಿದೆ.

ಸುಮಾರು ಎರಡು ಶತಮಾನಗಳ ಹಿಂದೆ ಆಂಗ್ಲದ ಆಡಳಿತ ಸಂದರ್ಭದಲ್ಲಿ ಇಲ್ಲಿ ಸರ್ವೇ ಅಧಿಕಾರಿಯಾಗಿದ್ದ ಕರ್ನಲ್ ಮೆಕೆಂಝಿಯ (ಎಪ್ರಿಲ್ ೪ - ೧೭೯೯) ಪ್ರಯತ್ನದಿಂದ ಬರೆಸಲ್ಪಟ್ಟ ಈ ಕೈಫಿಯತ್ತುಗಳು ಭೌಗೋಳಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮೊದಲಾದ ಕ್ಷೇತ್ರಗಳ ವಿವರಗಳನ್ನೊದಗಿಸುವ ಅಮೂಲ್ಯ ದಾಖಲೆಗಳಾಗಿವೆ. ಸಂಶೋಧನಾ ಕ್ಷೇತ್ರದಲ್ಲಿ ಮೆಕೆಝಿಯದು ಬಹುದೊಡ್ಡ ಹೆಸರು. ಮೆಕೆಂಝಿ ಸಂಗ್ರಹವೊಂದೇ (Meckanzie Collections) ಪ್ರಸಿದ್ಧವಾಗಿರುವ ಆತನ ಅಪೂರ್ವ ಸಂಗ್ರಹಗಳು ಭಾರತೀಯ ಸಂಶೋಧಕರಿಗೆ ಬಹುದೊಡ್ಡ ಕೊಡುಗೆಯಾಗಿದೆ. ಆತ ಕಂಪನಿ ಸರಕಾರದ ಅಧಿಕಾರಿಯಾಗಿದ್ದಾಗ ಮಧ್ಯಭಾರತದಿಂದ ಹಿಡಿದು ದಕ್ಷಣದ ಎಲ್ಲ ಭಾಗಗಳಲ್ಲಿ ಸಂಚರಿಸಿ ೧೫೬೮ ಸಾಹಿತ್ಯ ಸಂಬಂಧ ಹಸ್ತಪ್ರತಿಗಳು, ೨೦೭೦ ಸ್ಥಳೀಯ ಪತ್ರಾವಳಿ (ಕೈಫಿಯತ್ತು) ೮೦೭೬ ಶಿಲಾಶಾಸನಗಳ ಪ್ರತಿಗಳು, ೨೧೫೦ ಭಾಷಾಂತರಗಳು, ೨೭೦೦ ನಕ್ಷೆ ಮತ್ತು ರೇಖಾ ಚಿತ್ರಗಳು, ೬೧೨೮ ಪ್ರಾಚೀನ ನಾಣ್ಯಗಳು ಮತ್ತು ೧೪೬ ಪುರಾತನ ವಿಗ್ರಹಗಳನ್ನು ಸಂಗ್ರಹಿಸಿದ್ದನೆಂದು ಒಂದು ವರದಿ ತಿಳಿಸುತ್ತದೆ. (ತಿ. ತಾ. ಶರ್ಮ ಚಾ. ದಾ. ಪು. IX) ಒಂದು ಸಂಸ್ಥೆ ಮಾಡಲಾರದ ಕೆಲಸವನ್ನು ಏಕವ್ಯಕ್ತಿ ಮಾಡಿ ತೋರಿಸುವುದು ಪವಾಡ ಸದೃಶ ಕಾರ್ಯವಾಗಿದೆ. ಭಾರತೀಯ ಪುರಾತತ್ವ ಇಲಾಖೆಯು ಆತನಿಗೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಸಾಲದು. ತನ್ನ ಬದುಕೆಲ್ಲ ಹೆಚ್ಚಾಗಿ ಸಂಗ್ರಹ ಕಾರ್ಯಗಳಲ್ಲಿಯೇ ಕಳೆದು ಸನ್ ೧೮೨೧ರಲ್ಲಿ

ಆತ ತೀರಿಕೊಂಡನು. ಶಾಸನಗಳು ಅನುಲಕ್ಷಿಸಿದ್ದ ಅನೇಕ ವಿಷಯಗಳನ್ನು, ಘಟನೆಗಳನ್ನು ಆತನ ಕೈಫಿಯತ್ತು ನಮ್ಮ ಕಣ್ಣುಮುಂದೆ ಬಿಚ್ಚಿಡುತ್ತದೆ. ಸುಮಾರು ಎರಡು ಶತಮಾನಗಳ ನಂತರ ದ.ಕ. ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇದು ನೆರವಾಗುತ್ತದೆ.

ಕೈಫಿಯತ್ತುಗಳು ದಕ್ಷಿಣ ಕನ್ನಡ ಇತಿಹಾಸದ ಮೇಲೆ ಹೊಸ ಬೆಳಕನ್ನು ಬೀರುತ್ತವೆ. ಅನೇಕ ರಾಜರ ಚರಿತ್ರೆಯನ್ನು ಒಳಗೊಂಡ ಕೈಫಿಯತ್ತುಗಳಲ್ಲಿ ಸಣ್ಣ - ಸಣ್ಣ ಘಟನೆಗಳ ಬಗೆಗೂ ಸುದೀರ್ಘ ವಿವರಗಳನ್ನು ಒದಗಿಸುತ್ತವೆ. ಚೌಟರು, ಅಜಿಲರು, ಭೈರರಸರು ಮೊದಲಾದ ರಾಜ ಮನೆತನಗಳ ಬಗ್ಗೆ ಕೈಫಿಯತ್ತುಗಳಲ್ಲಿ ಸಾಕಷ್ಟು ವಿವರಗಳು ದಾಖಲಾಗಿರುವುದನ್ನು ಗಮನಿಸಬಹುದು. ಧರ್ಮಗಳ ಬಗೆಗೆ ಉಲ್ಲೇಖಿಸುತ್ತಾ ಶೈವ, ಜೈನ, ವೈದಿಕ ಈ ಮೂರು ಧರ್ಮಗಳಿಗೆ ಸಂಬಂಧಿಸಿದ ವಿವರ ಮತ್ತು ಆ ಧರ್ಮಗಳ ಒಳಗಡೆಯಲ್ಲಿರುವ ವಿವಿಧ ಜಾತಿ ಉಪಜಾತಿಗಳ ಮೇಲೂ ಕೈಫಿಯತ್ತು ಬೆಳಕು ಚೆಲ್ಲುತ್ತದೆ. ವಿಶೇಷವಾಗಿ ಒಂದು ಸ್ಥಳದ ಐತಿಹ್ಯಗಳ ವಿವರ ಕೈಫಿಯತ್ತಿನಲ್ಲಿ ಕತೆಯು ಕೃತಯುಗದ ದಕ್ಷ ಪ್ರದೀಪರಾಯನಿಂದ ಆರಂಭವಾಗಿ ಕುಮಾರ ಜನನವನ್ನು ಒಳಗೊಂಡು ಕೊನೆಗೆ ಸ್ಥಳೀಯ ಯಾವುದಾದರೊಂದು ಕ್ಷೇತ್ರಕ್ಕೆ ಸಂಬಂಧಿಸಿ ಕೊನೆಯಾಗುವುದನ್ನು ಇದರಲ್ಲಿ ಕಾಣಬಹುದು. ಕೆಲವು ಕೈಫಿಯತ್ತುಗಳು ಮಠಗಳ ಬಗ್ಗೆ ವಿವರಿಸುತ್ತ ಅಲ್ಲಿ ದೇವರ ಪ್ರತಿಷ್ಠಾಪನೆ, ಮಠದ ಗುರುಗಳು, ಮತ್ತು ಅಲ್ಲಿಯ ಪರಂಪರೆಯನ್ನು ತಿಳಿಸಿದರೆ ಇನ್ನು ಕೆಲವು ಕೈಫಿಯತ್ತುಗಳು ದೇವಾಲಯವನ್ನು ಸ್ಥಾಪಿಸುವುದರ ಹಿನ್ನಲೆ, ಅಲ್ಲಿನ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ನೀಡುತ್ತವೆ. ಆ ಕಾಲದ ಸಾಮಾಜಿಕ ಸ್ಥಿತಿಯನ್ನು ತಿಳಿದುಕೊಳ್ಳುವಲ್ಲಿ ಕೈಫಿಯತ್ತು ಪ್ರಧಾನ ಪಾತ್ರ ವಹಿಸುತ್ತದೆಂದು ಹೇಳಬಹುದು. ಉದಾಹರಣೆಗೆ ಅಡಿಕೆ ಪೈರು ಮಾಡುವ ಕೈಫಿಯತ್ತಿನಲ್ಲಿ ಆಗಿನ ಕಾಲದ ಅಡಿಕೆ ಕೃಷಿಯ ಬಗ್ಗೆ ಸ್ಪಷ್ಟ ಚಿತ್ರಣ ಒದಗಿಸುತ್ತದೆ. ಹಾಗೆಯೇ ವ್ಯಾಪಾರ, ನಂಬಿಕೆ, ಆಚರಣೆ ಜನಸಾಮಾನ್ಯರ ಬದುಕಿನ ವಿವಿಧ ಮುಖಗಳ ಚಿತ್ರಗಳು, ಹೀಗೆ ಹತ್ತು ಹಲವು ರೀತಿಯ ವಿಷಯಗಳನ್ನು ನಿರೂಪಿಸುವುದರಿಂದ ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ತಿಳಿದುಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಅಧ್ಯಯನ ಯೋಗ್ಯ ಸಂಗತಿಗಳಾಗಿವೆ ಎಂಬುದನ್ನು ಅನುಲಕ್ಷಿಸಿ, ಅವುಗಳ ಬಗೆಗೆ ವಿಶ್ಲೇಷಣೆ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಉದ್ದೇಶ ಮತ್ತು ವ್ಯಾಪ್ತಿ

ಒಂದು ದೇಶದ, ರಾಜ್ಯದ ಇತಿಹಾಸ ರಚನೆಯ ಸಂದರ್ಭದಲ್ಲಿ ಆಕರ ಸಾಮಾಗ್ರಿಯೆಂದು ಮುಖ್ಯವಾಗಿ ಗಮನಿಸುವುದು. ಶಾಸನ, ನಾಣ್ಯಗಳು, ಕಡತ, ಕೈಫಿಯತ್ತು ಮತ್ತು ಇತಹ ಐತಿಹ್ಯಗಳು ಇದರಲ್ಲಿ ಶಾಸನ, ಕಡತ, ಕೈಫಿಯತ್ತುಗಳು ಲಿಖಿತ ಆಧಾರಗಳಾದರೆ ಐತಿಹ್ಯ ಜನರ ಮೌಖಿಕ ದಾಖಲೆಯಾಗಿರುತ್ತದೆ.

'ಕೈಫಿಯತ್ತು' ಅನ್ನುವ ಶಬ್ದವೇ ವಿಶಿಷ್ಟವಾದುದು. ಇದು ಅರೇಬಿಕ್ ಭಾಷೆಯ ಪದ. ಕನ್ನಡದಲ್ಲಿ ಅದನ್ನೇ ಯಥಾವತ್ತಾಗಿ ಬಳಸಿಕೊಳ್ಳಲಾಗಿದೆ. ಕೈಫಿಯತ್ತಿನ ಬಗ್ಗೆ ಮಾತಾಡುವಾಗ ನಮಗೆ ನೆನಪಾಗುವುದು ಸ್ಕಾಟ್ಲೆಂಡಿನ ಕರ್ನಲ್ ಮೆಕೆಂಝಿ. ಆತ ಇಲ್ಲದೇ ಇರುತ್ತಿದ್ದರೆ ಕೈಫಿಯತ್ತು ಇರುತ್ತಿರಲಿಲ್ಲ. ಕರ್ನಲ್ ಮೆಕೆಂಝಿ ೧೭೫೪ರಲ್ಲಿ ಸ್ಕಾಟ್ಲೆಂಡಿನ ಲೂಯಿ ದ್ವೀಪದಲ್ಲಿ ಹುಟ್ಟಿದ. ತಂದೆ ಮರ್ಡೋಕ್ ಮೆಕೆಂಝಿ, ತಾಯಿ ಬರ್ಬರಾ

ಮೆಕೆಂಝಿ, ಫ್ರಾನ್ಸಿಸ್ ಎಂಬವನ ಆಜ್ಞೆಯಂತೆ ಗಣಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಲು ಮೆಕೆಂಝಿ ತನ್ನ ೨೯ನೇ ವಯಸ್ಸಿನಲ್ಲಿ (೧೭೮೩) ಭಾರತಕ್ಕೆ ಬಂದ. ನಂತರ ಮದ್ರಾಸ್‌ನಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಸೇರಿಕೊಂಡು ಅನೇಕ ಹುದ್ದೆಗಳನ್ನು ಅಲಂಕರಿಸಿ, ಕೊನೆಗೆ ಕರ್ನಲ್ ಪದವಿಯನ್ನು ಪಡೆದನು. ದಕ್ಷಿಣ ಭಾರತದಲ್ಲೆಲ್ಲ ಸುತ್ತಾಡಿ, ಮೈಸೂರು ಯುದ್ಧದಲ್ಲಿಯೂ ಭಾಗವಹಿಸಿ, ದಕ್ಷಿಣ ಭಾರತದ ಭೂಪಟಗಳನ್ನು ಸಿದ್ಧಪಡಿಸಿದ. ಈ ಕ್ಷೇತ್ರಕಾರ್ಯ ಕಾಲದಲ್ಲಿ ಸಾವಿರಾರು ಹಸ್ತಪ್ರತಿಗಳನ್ನು, ಶಾಸನಗಳನ್ನು ಹಾಗೂ ಅನೇಕ ಸ್ಥಳೀಯ ಐತಿಹ್ಯಗಳನ್ನು ಸಂಗ್ರಹಿಸಿದ, ಟಿಪ್ಪುವಿನ ಪತನದ ನಂತರ ಎಪ್ರಿಲ್ ೪, ೧೭೯೯ರಲ್ಲಿ ಮೈಸೂರು ಪ್ರದೇಶದ ಭೂವೀಕ್ಷಣೆಗೆ ನೇಮಿಸಲ್ಪಟ್ಟ.

ಹೀಗೆ ಮೆಕೆಂಝಿ ಭಾರತದಲ್ಲಿ ಮಾಡಿದ ೩೮ ವರ್ಷಗಳ ಸೇವೆಯ ಅವಧಿಯಲ್ಲಿ ದಕ್ಷಿಣ ಭಾರತವನ್ನೆಲ್ಲ ಸುತ್ತಾಡಿ ಅಲ್ಲಿರುವ ಐತಿಹ್ಯವನ್ನು ಕೈಫಿಯತ್ತು ರೂಪದಲ್ಲಿ ಸುಮಾರು ೨೦೭೦ ಕೈಫಿಯತ್ತು ರಚಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಗಳನ್ನು ಬರೆಸಿ ಸಂಗ್ರಹಿತವಾದ ಕೈಫಿಯತ್ತುಗಳು ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಕೈಫಿಯತ್ತುಗಳ ಅಧ್ಯಯನದಿಂದ ಹಲವು ಪ್ರಮುಖ ವಿಚಾರಗಳು ಬೆಳಕಿಗೆ ಬರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯು ಸಾಂಸ್ಕೃತಿಕ ವೈವಿಧ್ಯಗಳ ಆಗರವಾಗಿದ್ದೂ ಒಂದು ಬಗೆಯ ಅನಾಸಕ್ತಿಗೆ ಒಳಗಾದಂತೆ ಕಂಡು ಬರುವ ಸಂದರ್ಭದಲ್ಲಿ ಈ ಅಧ್ಯಯನವು ಪ್ರಸ್ತುತ, ಅರ್ಥಪೂರ್ಣ ಮತ್ತು ಸಮರ್ಥನೀಯವೆಂದು ವಿದ್ವಾಂಸರು ಭಾವಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳನ್ನೇ ಆಧರಿಸಿದ ಅಧ್ಯಯನಗಳು ವ್ಯವಸ್ಥಿತವಾಗಿ ಈವರೆಗೆ ನಡೆದಿಲ್ಲವಾದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಹೆಚ್ಚು ಅವಕಾಶವೂ, ಅನಿವಾರ್ಯತೆಯೂ ಇದೆ ಎಂಬುದನ್ನು ಭಾವಿಸಿ ಇದರ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಹೀಗೆ ಮಾಡುವುದರ ಮೂಲಕ ತುಳುನಾಡಿನ ಅಥವಾ ಅವಿಭಜಿತ ದ.ಕ. ಜಿಲ್ಲೆಯ ಆ ಕಾಲದ ಧಾರ್ಮಿಕ, ರಾಜಕೀಯ, ಸಾಮಾಜಿಕ ವಿಚಾರಗಳ ಕುರಿತು ಒಂದು ಸಮಗ್ರ ಚಿಂತನೆ ನಡೆಸುವುದೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಮೆಕೆಂಝಿ ದಕ್ಷಿಣ ಭಾರತದ ಸುತ್ತ ತಿರುಗಾಡಿ ವಿಷಯಗಳನ್ನು ಸಂಗ್ರಹಿಸಿ ಕೈಫಿಯತ್ತುಗಳ ಮೂಲಕ ದಾಖಲೆ ಮಾಡಿದವುಗಳಲ್ಲಿ ನಮ್ಮ ಅಧ್ಯಯನಕ್ಕೆ ಕೇವಲ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ವಿಷಯ ತೀರ ವಿಸ್ತರವಾಗಿರುವುದರಿಂದ ಅದಕ್ಕೆ ಒಂದು ಮಿತಿಯನ್ನು ಇಟ್ಟುಕೊಳ್ಳುವುದು ನಮಗೆ ಅನಿವಾರ್ಯವಾದ ಕಾರಣ ಹೀಗೆ ಮಾಡಲಾಗಿದೆ.

ಇದುವರೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಮೂವತ್ತೊಂಬತ್ತು ಕೈಫಿಯತ್ತುಗಳು ಬೆಳಕಿಗೆ ಬಂದಿವೆ. ಇವುಗಳನ್ನು ಆಧರಿಸಿ ನಮ್ಮಲ್ಲಿರುವ ಕೆಲವು ವಿದ್ವಾಂಸರು ಸ್ವತಂತ್ರ ಕೃತಿಗಳನ್ನು ರಚಿಸುವುದರ ಜೊತೆಗೆ ಇನ್ನು ಕೆಲವರು ಪ್ರಬಂಧ ರೂಪದಲ್ಲಿ ತಕ್ಕ ಮಟ್ಟಿಗೆ ಅಧ್ಯಯನವನ್ನು ಕೈಗೊಂಡಿರುತ್ತಾರೆ. ಇವುಗಳಲ್ಲಿ ಮುಖ್ಯವಾಗಿ ನಾವು ಗಮನಿಸಿದ ಕೃತಿಗಳೆಂದರೆ -

೧.ಕರ್ನಾಟಕದ ಕೈಫಿಯತ್ತುಗಳು - ಎಮ್. ಎಮ್. ಕಲಬುರ್ಗಿ

೨.ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು - ಕೆ. ಕುಶಲಪ್ಪ ಗೌಡ ಮತ್ತು ಕೆ. ಚೆನ್ನಪ್ಪ ಗೌಡ

೩.ಮೆಕೆಂಝಿ ಕೈಫಿಯತ್ತುಗಳು - ಡಾ. ಪುರುಷೋತ್ತಮ ಬಿಳಿಮಲೆ

ಇವುಗಳನ್ನು ವಿಶೇಷವಾಗಿ ಅನುಲಕ್ಷಿಸಲಾಗಿದೆ. ಇವುಗಳಲ್ಲಿ ಕರ್ನಾಟಕದ ಕೈಫಿಯತ್ತುಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳ ಕೃತಿಯಲ್ಲಿ ಮೂಲ ಪಠ್ಯದ ಜೊತೆಗೆ ವ್ಯಾಖ್ಯಾನವನ್ನು ಆಯಾ

ಲೇಖಕರು ನೀಡಿದ್ದಾರೆ. ಡಾ। ಪುರುಷೋತ್ತಮ ಬಿಳಿಮಲೆಯವರ ಮೆಕಂಝಿ ಕೈಫಿಯತ್ತಿನಲ್ಲಿ ಮೂಲ ಪಠ್ಯ ದೊರಕುವುದಿಲ್ಲ.

ಡಾ। ಎಂ. ಎಂ. ಕಲುಬುರ್ಗಿ ಸಂಪಾದಿಸಿದ "ಕರ್ನಾಟಕದ ಕೈಫಿಯತ್ತುಗಳು" ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ಭೌಗೋಳಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಮೊದಲಾದ ಕ್ಷೇತ್ರಗಳ ವಿವರಗಳನ್ನೊದಗಿಸುವ ಇವು ಮೂಲ ಪಠ್ಯದೊಂದಿಗೆ ಕಂಡುಬರುತ್ತದೆ. ಆರಂಭದ ಪ್ರಸ್ತಾವನೆಯಲ್ಲಿ ಕೈಫಿಯತ್ತು ಹೇಗೆ ಒಂದು ಚಾರಿತ್ರಿಕ ದಾಖಲೆಯಾಗಿದೆ. ಅದನ್ನು ಅಧ್ಯಯನಕ್ಕೆ ಹೇಗೆ ಬಳಸಿಕೊಳ್ಳಬಹುದು. ಇತ್ಯಾದಿ ಅಮೂಲ್ಯ ವಿಷಯಗಳ ಬಗೆಗೆ ಗಮನ ಸೆಳೆದಿದ್ದಾರೆ. ಡಾ। ಕೆ. ಕುಶಾಲಪ್ಪ ಗೌಡ ಮತ್ತು ಡಾ। ಕೆ. ಚೆನ್ನಪ್ಪ ಗೌಡ ಇವರು ಪ್ರಕಟಿಸಿದ ಕೃತಿಯಲ್ಲಿ ಕೈಫಿಯತ್ತುಗಳಲ್ಲಿ ಬರುವ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಐತಿಹ್ಯಗಳನ್ನು ತಕ್ಕ ಮಟ್ಟಿಗೆ ವಿಶ್ಲೇಷಿಸಿದ್ದಾರೆ. ವಿಶೇಷವಾಗಿ ಕೈಫಿಯತ್ತಿನ ಕನ್ನಡ ಭಾಷಾ ವಿಚಾರವಾಗಿ ದೀರ್ಘ ವಿವೇಚನೆ ಮಾಡಿರುವುದನ್ನು ನಾವು ಗಮನಿಸಬಹುದು. ಡಾ। ಪುರುಷೋತ್ತಮ ಬಿಳಿಮಲೆ ಹೊರತಂದಿರುವ ಕೃತಿಯಲ್ಲಿ ಮೆಕೆಂಝಿಯ ಜೀವನ, ಆತನ ಸಾಧನೆ ವಿವರಗಳಿವೆ ಇದು ಕೈಫಿಯತ್ತನ್ನು ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಒಳ್ಳೆಯ ಆಕರ ಸಾಮಾಗ್ರಿಯಾಗಿದೆ..

ಲೇಖನಗಳ ರೂಪದಲ್ಲಿ ನಾವು ಗಮನಿಸಬಹುದಾದ ಕೆಲವು ಲೇಖನಗಳೆಂದರೆ,

1.ಡಾ। ಎಸ್. ಡಿ. ಶೆಟ್ಟಿ ನುಡಿ ಒಸಗೆ : ಡಾ। ಕುಶಾಲಪ್ಪ ಗೌಡ ಅಭಿನಂದನ ಗ್ರಂಥ - ಪುಟ ೧೧೧.

2.ಡಾ। ಕೆ. ಕುಶಾಲಪ್ಪ ಗೌಡ : ಪ್ರತಿಷ್ಠಾಪನಾ - ಪುಟ ೪೫.

3.ಕೆ. ಸುಬ್ರಹ್ಮಣ್ಯ ಭಟ್ : ರತ್ನ ಮಂಜೂಷ - ಪುಟ ೧೫೫.

ಇವರು ಕೈಫಿಯತ್ತುಗಳ ಬಗ್ಗೆ ಪ್ರಾಸ್ತಾವಿಕವಾಗಿ ಚರ್ಚೆಯನ್ನು ನಡೆಸಿದ್ದಾರೆ. ಜೊತೆಗೆ ತಾವು ಯಾವ ದೃಷ್ಟಿಯಿಂದ ಅಧ್ಯಯನ ನಡೆಸಿದ್ದಾರೋ, ಆ ವಿಷಯಗಳ ಬಗೆಗೆ ಹೆಚ್ಚು ಚರ್ಚೆಯನ್ನು ಮಾಡಿದ್ದಾರೆ. ಇವು ಕೂಡ ಕೈಫಿಯತ್ತುಗಳ ಅಧ್ಯಯನದ ಸಂದರ್ಭದಲ್ಲಿ ನಾವು ಇವನ್ನು ಕೂಡ ವಿಶೇಷವಾಗಿ ಬಳಸಿಕೊಂಡಿದ್ದೇವೆ.

ಈಗಾಗಲೇ ಪ್ರಸ್ತಾವಿಸಿರುವಂತೆ ಡಾ। ಕೆ. ಕುಶಾಲಪ್ಪ ಗೌಡ ಮತ್ತು ಡಾ। ಕೆ. ಚಿನ್ನಪ್ಪ ಗೌಡ ಸಂಪಾದಿಸಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು' ಕೃತಿಯನ್ನು ಮೂಲವಾಗಿಟ್ಟುಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಧ್ಯಯನ ನಡೆಸಲು ನಾವು ಉದ್ದೇಶಿಸಿದ್ದೇವೆ.

ಏಕೆಂದರೆ ಇಲ್ಲಿಯ ಈ ಕೈಫಿಯತ್ತುಗಳು ತುಳುನಾಡಿನ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಅನೇಕ ಒಳ ಆಯಾಮಗಳನ್ನು ನಿರೂಪಿಸುತ್ತವೆ. ವಿವಿಧ ಜನರ ಮನೋಭಾವನೆಗಳನ್ನು ಕೌಟುಂಬಿಕ ಮತ್ತು ಸಮಾಜಿಕ ವಲಯಗಳಲ್ಲಿ ಅವರ ನಂಬಿಕೆ, ವರ್ತನೆಗಳು, ಹೇಗಿದ್ದವೆಂಬುದನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ಸಮುದಾಯದ ಬದುಕಿನಲ್ಲಿ ಕಂಡುಬರುವ ಒಳಜಗಳಗಳು, ಭಿನ್ನಾಭಿಪ್ರಾಯಗಳು, ಅಧಿಕಾರ ನಿರ್ವಹಣೆ, ನ್ಯಾಯ, ಆಚರಣೆ ಹೀಗೆ ಹಲವು ಸ್ತರಗಳ ಅಭಿವ್ಯಕ್ತಿಯನ್ನು ಕೂಡ ಇಲ್ಲಿಯ ಕೈಫಿಯತ್ತುಗಳು ನೀಡುತ್ತವೆ. ಒಂದು ರಾಜ್ಯವಿರಲಿ, ದೇವಸ್ಥಾನವಿರಲಿ, ಕೋಟೆ ಇರಲಿ, ಇವುಗಳ ವಿವರಗಳನ್ನು ಕೈಫಿಯತ್ತು ನೀಡುತ್ತಾ ಹೋದಂತೆ ವಿಷಯಗಳು ಎಲ್ಲಿಂದಲೋ ಹೊರಟು ಇನ್ನೆಲ್ಲಿಗೂ ತಲುಪುತ್ತದೆ. ಜೊತೆಗೆ ಕೈಫಿಯತ್ತನ್ನು ಬರೆಯುತ್ತಿರುವವನ ಪ್ರಜ್ಞೆ, ಆತನ ವೈಯಕ್ತಿಕ ಅಭೀಪ್ಸೆ, ಒಲವು, ಚಿಂತನೆಗಳನ್ನು ಒಳಗೊಂಡು ಅದೊಂದು ಸಂಪ್ರದಾಯನಿಷ್ಟವೆಂಬ ಭ್ರಾಂತಿಯನ್ನು ನಮಗೆ ಉಂಟುಮಾಡುತ್ತವೆ. ತಾವು ಬರೆಯುತ್ತಿರುವ ಮಾಹಿತಿ

ಶರೀರದಲ್ಲಿ ವಾಸ್ತವಿಕತೆ ಇರಬೇಕು ಎನ್ನುವುದಕ್ಕಿಂತ ಮಿಗಿಲಾಗಿ ಅದನ್ನು ಕಲ್ಪನೆಯಿಂದ ರೋಚಕಗೊಳಿಸುವ ತಂತ್ರಗಾರಿಕೆಯು ಹೆಚ್ಚು ಇರುವುದನ್ನು ಇಲ್ಲಿ ಗಮನಿಸಬಹುದು. ಅದು ವಾಸ್ತವಿಕ ನೆಲೆಯಿಂದ ಹೊರಟು, ಭೂಲೋಕಕ್ಕೆ ತೆರಳಿ, ದೇವಲೋಕವನ್ನು ಸ್ಪರ್ಶಿಸಿ ದೇವ-ದೇವತೆಗಳ ಮಹಿಮೆಯನ್ನು ಎಳೆತಂದು, ಆ ಘಟನೆಗಳನ್ನು ಅವಾಸ್ತವಿಕ ಮತ್ತು ಕಾಲ್ಪನಿಕ ಚಿತ್ರವೆಂಬಂತೆ ಸೃಷ್ಟಿಸಲಾಗಿದೆ. ಹೀಗಿದ್ದು ಈ ಎಲ್ಲಾ ಆವರಣಗಳೂ ಕೆಲವು ಸಹಜ -ಸಜೀವ ವಿಷಯಗಳು ಅಲ್ಲಲ್ಲಿ ಮಿಂಚುವುದನ್ನು ನಾವು ಉಪೇಕ್ಷಿಸುವಂತಿಲ್ಲ. ಈ ಹಿನ್ನಲೆಯಲ್ಲಿ ಕೈಫಿಯತ್ತುಗಳಿಗೆ ತನ್ನದೇ ಆದ ಮಹತ್ವವಿದೆ, ವೈಶಿಷ್ಟ್ಯತೆಯೂ ಇದೆ, ಉದ್ದೇಶವೂ ಇದೆ. ತುಳುನಾಡಿನ ಸಮಗ್ರ ಜೀವನಾಡಿಯನ್ನು ಹಿಡಿದು ಅದರ ಸಾಂಸ್ಕೃತಿಕ ಅವಲೋಕನ ಮಾಡುವ ಸಂದರ್ಭದಲ್ಲಿ ಕೈಫಿಯತ್ತುಗಳು ನೀಡುವ ಇಂಥ ಸಾಕ್ಷ್ಯ ಪುರಾವೆಗಳು ನಮಗೆ ಮುಖ್ಯವಾಗುತ್ತವೆ. ಎರಡು ಶತಮಾನಗಳ ಹಿಂದಿನ ಇಲ್ಲಿನ ಜೀವನ ಕ್ರಮ, ಆಡಳಿತ ವ್ಯವಸ್ಥೆ, ಸಾಮಾಜಿಕ ಸ್ಥಿತಿ-ಗತಿ, ನಂಬಿಕೆ ಆಚರಣೆಗಳು, ದೇವರು - ದೈವರುಗಳು, ಅವುಗಳ ಆರಾಧನಾಕ್ರಮ, ಸಾಮಾಜಿಕ ಒಟ್ಟು ವರ್ಗಗಳಲ್ಲಿ ಅರಸನಿಗೆ, ಬ್ರಾಹ್ಮಣರಿಗೆ ಸಿಗುತ್ತಿದ್ದ ವಿಶೇಷ ಗೌರವ, ಅಧಿಕಾರ ಇವೆಲ್ಲವನ್ನು ಒಳಗೊಂಡಿರುವುದರಿಂದ ನಮ್ಮ ಅಧ್ಯಯನಕ್ಕೆ ಈ ಸಾಮಗ್ರಿಗಳು ಬಹುಮುಖ್ಯವಾಗುತ್ತದೆ.

◆◆◆

ಅಧ್ಯಾಯ -೨

ಕೈಫಿಯತ್ತು ಮತ್ತು ಅದರ ಸ್ವರೂಪ

೨. ೧. ಕೈಫಿಯತ್ತನ್ನು ಬರೆಸಿದ ಕಾಲ

೨. ೨. ಕೈಫಿಯತ್ತುಗಳ ಭಾಷೆ

೨. ೩. ದ. ಕ. ಜಿಲ್ಲೆಯಲ್ಲಿ ಕಂಡು ಬರುವ ಒಟ್ಟು ಕೈಫಿಯತ್ತುಗಳ ವಸ್ತು ವಿವೇಚನೆ

ಅಧ್ಯಾಯ -೨
ಕೈಫಿಯತ್ತು ಮತ್ತು ಅದರ ಸ್ವರೂಪ

ಭಾರತ ದೇಶದ ಅನೇಕ ಸುಂದರ ರಾಜ್ಯಗಳಲ್ಲಿ ಕರ್ನಾಟಕವು ಒಂದು. ಜಗತ್ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಿಂದ, ವಾಸ್ತುಶಿಲ್ಪದ ಮೇರು ವೈಭವವನ್ನು ಸಾರುವ ಹಲವಾರು ದೇವಾಲಗಳಿಂದ, ಹೃದಯ ರಮಣೀಯ ದೃಶ್ಯಗಳಿಂದ, ಕಲೆ, ಸಾಹಿತ್ಯ, ಸಂಸ್ಕೃತಿಯ ಸಂಗಮದಿಂದ ಬಹು ಖ್ಯಾತಿಯನ್ನು ಪಡೆದಿದೆ. ಕರ್ನಾಟಕ ಎರಡು ಸಹಸ್ರ ವರ್ಷಗಳಿಗೂ ಮಿಕ್ಕಿದ ಇತಿಹಾಸವನ್ನು ಹೊಂದಿದ ರಾಜ್ಯವಾಗಿದೆ. ಈ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರಾಚೀನ ಕಾಲದಿಂದಲೂ ತುಳುನಾಡು ಎಂದೇ ಕರೆಯಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಯು ತನ್ನದೇ ಆದ ಸ್ವಂತಿಕೆ, ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಗಮನಾರ್ಹವಾಗಬಹುದಾದ ಎಲ್ಲಾ ಸಾಧ್ಯತೆಗಳನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವ ಆಚರಣೆ, ಆರಾಧನಾ ವೈವಿಧ್ಯಗಳು, ವಿಭಿನ್ನ ಧರ್ಮಗಳಿಂದ ಸಮಾಜ ಜನಜೀವನದ ಮೇಲಾಗುವ ಪ್ರಭಾವ - ಪರಿಣಾಮಗಳು, ಸೌಹಾರ್ದಯುತ ಸಂಬಂಧಗಳು, ನಂಬಿಕೆ - ಸಂಪ್ರದಾಯಗಳು ಪ್ರತ್ಯೇಕವಾಗಿದ್ದು ಕರ್ನಾಟಕದ ಅಂತೆಯೇ ಭಾರತೀಯ ಸಂಸ್ಕೃತಿಗೆ ಮಹತ್ವದ ಸ್ಥಾನ ನೀಡುವ ಅಂಶಗಳಾಗಿವೆಯೆಂಬುದನ್ನು ನಾವು ಮರೆಯುವಂತಿಲ್ಲ.

ಯಾವುದೇ ಒಂದು ದೇಶದ ಪ್ರಾಚೀನ ಇತಿಹಾಸದ ಪುನರಚನೆಯಲ್ಲಿ ಈ ಹಿಂದೆ ಪ್ರಸ್ತಾಪಿಸಿದಂತೆ ಶಾಸನಗಳು, ನಾಣ್ಯಗಳು, ಸಾಹಿತ್ಯಗಳು, ಕಡತಗಳು, ಕೈಬರಹದ ಪತ್ರಗಳು, ಬಖೈರುಗಳು ನೆರವಾಗುವಂತೆಯೇ ಕೈಫಿಯತ್ತುಗಳೂ ನೆರವಾಗುತ್ತವೆ. ಶಾಸನ, ನಾಣ್ಯಗಳಂತಹ ದಾಖಲೆಗಳು ಖಚಿತವಾದ ಮಾಹಿತಿಯನ್ನು ನೀಡಿದ್ದಾರೆ, 'ಕೈಫಿಯತ್ತುಗಳು' ಚರಿತ್ರೆಯ ಮಾಹಿತಿಗಳ ಜೊತೆಗೆ, ಕೆಲವು ಬಾರಿ ಐತಿಹ್ಯ, ನಂಬಿಕೆ, ಪುರಾಣಗಳನ್ನು ಪ್ರತಿಬಿಂಬಿಸುತ್ತವೆ. ದಕ್ಷಿಣ ಕನ್ನಡದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಕೈಫಿಯತ್ತು ಈ ಹಿನ್ನಲೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಹಿನ್ನೆಲೆ :

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾರಂಭದಿಂದ ೧೪ನೇ ಶತಮಾನದವರೆಗೆ ಆಳುಪರು ಆಳಿದರು. ಕ್ರಿ. ಶ. ೧೧೬೦ ರಿಂದ ೧೨೨೦ರ ವರೆಗೆ ಆಳಿದ ಆಳುಪೇಂದ್ರನ ಕಾಲದಲ್ಲಿ ಮಂಗಳೂರು ಒಂದು ಅಂತರಾಷ್ಟ್ರೀಯ ವಾಣಿಜ್ಯ ಕೇಂದ್ರವಾಗಿತ್ತು. ಆಳುಪರ ೨ನೇ ವೀರಪಾಂಡ್ಯನು ಕ್ರಿ. ಶ. ೧೩೯೦ - ೧೪೦೦ ಅವಧಿಯಲ್ಲಿ ಈ ಜಿಲ್ಲೆಯ ಅಧಿಕಾರಿಯಾಗಿದ್ದನು. ಕ್ರಿ. ಶ. ೧೭೬೯ರಲ್ಲಿ ಹೈದರ ಆಲಿ ಈ ಜಿಲ್ಲೆಯನ್ನು ಆಕ್ರಮಿಸಿದನು. ಮುಂದೆ ಹೈದರಾಲಿಯ ಮಗ ಟಿಪ್ಪುವಿನ ಮರಣಾನಂತರ ಕ್ರಿ. ಶ. ೧೭೯೯ರಲ್ಲಿ ಈ ಜಿಲ್ಲೆ ಬ್ರಿಟಿಷರ ವಶವಾಯಿತು. ತದನಂತರ (ಎಪ್ರಿಲ್ ೪, ೧೭೯೯) ಮೆಕೆಂಝಿ ಮೈಸೂರು ಪ್ರದೇಶದ ಭೂವೀಕ್ಷಣೆಗೆ ನಿಯುಕ್ತನಾದ. ಈ ಸಂದರ್ಭದಲ್ಲಿ ಆತ ಅನೇಕ ಇಲ್ಲಿರುವ ಶಾಸನಗಳ ಪ್ರತಿಗಳನ್ನು, ಗ್ರಂಥಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿದ. ಹಾಗೆಯೇ ಕೈಫಿಯತ್ತುಗಳನ್ನು ಬರೆಸಿ ಇನ್ನಷ್ಟು ಮಾಹಿತಿಗಳನ್ನು ಕಲೆ ಹಾಕಿದನು.

"ಕೈಫಿಯತ್ತು" ಪದವು ಅರೇಬಿಕ್ ಭಾಷೆಯಿಂದ ಬಂದುದಾಗಿದೆ.[1] ಹೇಳಿಕೆ, ವಿವರಣೆ, ಮಾಹಿತಿಗಳನ್ನೊಳಗೊಂಡ ದಾಖಲೆ ಎಂಬರ್ಥದಲ್ಲಿ ಈ ಪದ ಬಳಕೆಯಾಗುತ್ತಿದೆ. ಮೂಲ ಅರೇಬಿಕ್ ಭಾಷೆಯಲ್ಲಿರುವ ಅರ್ಥವೇ ಕನ್ನಡದಲ್ಲಿಯೂ ಉಳಿದುಕೊಂಡಿದೆ. "ಕಿಟೆಲ್‌ಕೋಶ"ದಲ್ಲಿ[2] ಈ ಪದಕ್ಕೆ ಮೂರು ಅರ್ಥಗಳನ್ನು ಕೊಡಲಾಗಿದೆ.

1. Statement
2. An Affair ಮತ್ತು
3. A case

ಕನ್ನಡ ಸಾಹಿತ್ಯ ಪರಿಷತ್ತಿನವರ ನಿಘಂಟಿನಲ್ಲಿ ನಾಲ್ಕು ಅರ್ಥಗಳನ್ನು ಕೊಡಲಾಗಿದೆ.[3]

1. ಸ್ಪಷ್ಟವಾದ ಹೇಳಿಕೆ, ವಿವರಣೆ
2. ಆಜ್ಞಾಪತ್ರ, ತಿಳುವಳಿಕೆ ಪತ್ರ
3. ವ್ಯಾಜ್ಯದಲ್ಲಿ ಪ್ರತ್ಯಾರೋಪಗಳಿಗೆ ಮೊದಲ ಬಾರಿಗೆ ಕೊಡುವ ಲಿಖಿತ ಉತ್ತರ
4. ವಿವರನ್ನೊಳಗೊಂಡ ದಾಖಲೆ.

ಎಂಬ ಅರ್ಥಗಳನ್ನು ನೀಡಿದ್ದಾರೆ.

ಅರೇಬಿಕ್ ಭಾಷೆಯಲ್ಲಿ ಕೈಫಿಯತ್ತು ಪದಕ್ಕೆ Statement, event ಎಂಬ ಅರ್ಥವಿದೆ. ಕನ್ನಡದಲ್ಲಿ ಸಾಮಾನ್ಯವಾಗಿ 'ಸಮಾಚಾರ' ಎಂಬರ್ಥದಲ್ಲಿ ಈ ಪದಬಳಕೆಯಾಗುತ್ತಿದೆ. ಈ ಮಾತು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಕನ್ನಡ ಭಾಷೆಗೆ ಬಂದು ಸೇರಿ, ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಕನ್ನಡ ನಾಡಿನಲ್ಲೆಲ್ಲಾ ವಿಶೇಷವಾಗಿ ಪ್ರಚುರಗೊಂಡಿತು. ಅಂದಿಗಾಗಲೇ ಈ ಮಾತಿನ ಅರ್ಥ ವಿಶಾಲಗೊಂಡು ಚಾರಿತ್ರಿಕ ನಿರೂಪಣೆಯೆಂಬ ಬಣ್ಣವೂ ಬಂದಿತು. "ಹೀಗೆ ಹೇಳುವವರ ಗುಂಪೊಂದು, ಹೇಳಿದ್ದನ್ನು ಬರೆದಿಡುವವರ ಗುಂಪೊಂದು ಇವೆರಡೂ ಗುಂಪುಗಳ ಸಹಕಾರದ ಫಲವಾಗಿ ಕೈಫಿಯತ್ತುಗಳು ವಿಪುಲವಾಗಿ ಸೃಷ್ಟಿಯಾದವು"[4]. ಎನ್ನಲಾಗುತ್ತಿದೆ.

'ಕೈಫಿಯತ್ತು' ಎಂಬ ಪದ ಮುಸ್ಲಿಂ ರಾಜರ ಆಳ್ವಿಕೆಯ ಕಾರಣದಿಂದ ಹಿಂದುಸ್ತಾನಿಯ ಮೂಲಕ ಕನ್ನಡಕ್ಕೆ ಪ್ರವೇಶಿಸಿವೆ. ಕೈಫಿಯತ್ತು ಎಂದರೆ ಹೇಳಿಕೆ, ವಿವರಣೆ - ಎಂಬ ಅರ್ಥವಿದ್ದರೂ ಅದರ ವ್ಯಾಪ್ತಿ, ಕೈಪೋತ್, ಕೈಪೇತ್ ಎಂಬ ರೂಪಾಂತರಗಳೊಡನೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕೈಪೇತ್ ಮಾಡಿದ' ಎಂದರೆ ದಾವೆ, ಇಲ್ಲವೇ ವ್ಯಾಜ್ಯ ಮಾಡಿದ ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ. ದಾಖಲೆ, ಹೇಳಿಕೆ ಎಂಬರ್ಥದಲ್ಲಿ 'ಬಖೈರು', 'ನಾಮೆ' ಎಂಬ ಬರಹಗೂ ಇವೆ. ಈ ಎಲ್ಲ ಪದಗಳು ಸಾಮಾನ್ಯ ಒಂದೇ ಅರ್ಥದಲ್ಲಿ ಅಂದರೆ ಬರೆದಿಟ್ಟ ದಾಖಲೆಗಳು ಎಂಬಂತೆ ಪ್ರಯೋಗದಲ್ಲಿದ್ದರೂ, ಬಖೈರು ಮತ್ತು ನಾಮೆಗಳು ಹೆಚ್ಚು ಚಾರಿತ್ರಿಕ ಐತಿಹ್ಯಗಳಾಗಿಯೂ, ಕೈಫಿಯತ್ತುಗಳು ಚಾರಿತ್ರಿಕಾಂಶ, ಸ್ಥಳ ಪುರಾಣ, ಜನಜನಿತ, ಕಲ್ಪಿತ ವಿಷಯಗಳನ್ನೊಳಗೊಂಡ ಬರಹಗಳಾಗಿಯೂ ಇವೆ ಎಂದು ಸ್ಪಷ್ಟಪಡಿಸಿರುವುದು ನಾವು ಸ್ವೀಕರಿಸ ಬಹುದಾದ ಅರ್ಥವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಕರ್ನಲ್ ಮೆಕೆಂಝಿ ತಾನು ಕ್ಷೇತ್ರಕಾರ್ಯ ಮಾಡುವಾಗ ಶಾಸನ, ಹಸ್ತಪ್ರತಿ, ವಿಗ್ರಹ, ನಾಣ್ಯಗಳನ್ನು ಸಂಗ್ರಹಿಸುವ ಕೆಲಸದೊಂದಿಗೆ ಅಲ್ಲಲ್ಲಿ ಗ್ರಾಮ, ಸ್ಥಳಗಳಿಗೆ ಸಂಬಂಧಿಸಿದ ಚರಿತ್ರೆಯನ್ನು ಸ್ಥಳೀಯ ವಿದ್ವಾಂಸರು, ಕರಣಿಕರು ಮತ್ತು ತನ್ನ ಅಧಿಕಾರಿಗಳು ಮೊದಲಾದವರಿಂದ ಬರೆಸಿಕೊಳ್ಳುತ್ತಿದ್ದನು. ಹೀಗೆ ಬರೆಸಿಕೊಂಡವುಗಳೇ ಕೈಫಿಯತ್ತುಗಳು. ಒಂದು ಪ್ರದೇಶದ ಭೂವಿವರ, ರಾಜಕೀಯ, ಸಾಂಸ್ಕೃತಿಕ ವಿವರಗಳನ್ನು ಅದೇ ಗ್ರಾಮದ ಪಠೇಲ ಅಥವಾ ಗ್ರಾಮ ಲೆಕ್ಕಿಗರಿಂದ ಬರೆಯಿಸಿ ಸಂಗ್ರಹಿಸಿಟ್ಟ ಪುರಾತನ

ಆಧಾರಗಳ ದಾಖಲೆಯೆಂದೇ ಹೇಳಬಹುದು. ಇವುಗಳು ಒಂದು ಸಮಾಜದ ಜೀವನ ಪದ್ಧತಿ, ಆಚಾರ ವಿಚಾರಗಳನ್ನು ನಿರ್ಣಯಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಕೈಫಿಯತ್ತುಗಳನ್ನು ಬರೆಸುವಲ್ಲಿ ಮೆಕೆಂಝಿಯ ಉದ್ದೇಶವೇನಿತ್ತೆಂಬುದನ್ನು ಅವನ ಪತ್ರವೇ ಬಹುಮಟ್ಟಿಗೆ ತಿಳಿಸುತ್ತದೆ.

[5]"ಹಿಂದೂ ಜನರ ಬದುಕಿನ ಮೇಲೆ ಬಹಳಷ್ಟು ಬೆಳಕು ಬೀರಬಲ್ಲ ಅನೇಕ ಶಿಲಾಶಾಸನಗಳನ್ನೂ ಮತ್ತು ತಾಮ್ರ ಶಾಸನಗಳನ್ನೂ ನಾನು ಈಚೆಗೆ ಸಂಗ್ರಹಿಸಿದೆ. ಇದರ ಜೊತೆಯಲ್ಲಿಯೇ ಮೂರು ಸಾವಿರಕ್ಕೂ ಮಿಕ್ಕು ಬರಹಗಳನ್ನು ಸಂಗ್ರಹಿಸಿದೆ. ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಯಾರೂ ಇಂಥ ಕೆಲಸ ಮಾಡಲಿಲ್ಲ ಮತ್ತು ಯಾರೂ ಇಂಥ ವಿಷಯಗಳನ್ನು ಗಮನಿಸಲಿಲ್ಲ. ಇವೆಲ್ಲಾ ಈ ನಾಡಿನ ಜನರು ಬದುಕಿದ ರೀತಿಯನ್ನು ಬದುಕುತ್ತಿರುವ ರೀತಿಯನ್ನು ಮುಖ್ಯವಾಗಿ ತೋರಿಸುತ್ತವೆ."

ಮೆಕೆಂಝಿಗೆ ಭಾರತೀಯ ಸಂಸ್ಕೃತಿಯ ಮೇಲೆ ಇದ್ದ ಗೌರವ ಹಿಂದೂ ಜನರ ಜೀವನವನ್ನು ನೋಡುವ ಕುತೂಹಲದಿಂದ ಹಳ್ಳಿ ಹಳ್ಳಿಗಳಲ್ಲಿ ಸುತ್ತಾಡಿದ, ಈ ಹಳ್ಳಿ ಬಗೆಗಿನ ವಿಚಾರ ಸಂಗ್ರಹಿಸಿ ಬರಹದಲ್ಲಿಳಿಸಿದ ಇಲ್ಲದಿದ್ದರೆ ಕಾಲ ಕಳೆದಂತೆ ಅನೇಕ ವಿಚಾರಗಳು ಮರೆತು ಕಾಲಗರ್ಭದಲ್ಲಿ ಸೇರಿಬಿಡುತ್ತವೆ. ಇಂಥ ವಿಷಯಗಳನ್ನು ಮೆಕೆಂಝಿ ಸೂಕ್ಷ್ಮವಾಗಿ ಗಮನಿಸಿರುವುದರಿಂದಲೇ ಆತ ಕೈಫಿಯತ್ತುಗಳನ್ನು ಬರೆಸಿದ ಹಾಗೆ ಬರೆಸುವಾಗ ಸಾಧ್ಯವಿದ್ದಷ್ಟು ವಿಚಾರಗಳನ್ನು ಕೈಫಿಯತ್ತುಗಳಲ್ಲಿ ತುಂಬಲು ಯತ್ನಿಸಿದ.

ಮೆಕೆಂಝಿ ಉದ್ದೇಶಪೂರ್ವಕವಾಗಿಯೇ ಕೈಫಿಯತ್ತುಗಳಲ್ಲಿ ಎಲ್ಲಾ ರೀತಿಯ ವಿಷಯಗಳನ್ನು ತರಲು ಯತ್ನಿಸಿದ್ದಾನೆ. ಅವುಗಳಲ್ಲಿ ಚಾರಿತ್ರಿಕ ಘಟನೆಗಳು, ಮತಧರ್ಮ, ದರ್ಶನಗಳು, ಧಾರ್ಮಿಕ ಜೀವನ, ಕಾನೂನು ಕಟ್ಟಲೆಗಳು, ರಾಜಕೀಯ ಪರಿಸ್ಥಿತಿ, ಅಷ್ಟೇ ಅಲ್ಲ ಅದಕ್ಕಿಂತಲೂ ಮುಖ್ಯವಾಗಿ ಒಂದು ಪ್ರದೇಶದ ಭೌಗೋಳಿಕ ಪರಿಸ್ಥಿತಿ ಮತ್ತು ಐತಿಹಾಸಿಕ ಹಿನ್ನೆಲೆಗಳು ಸೇರಿಕೊಂಡಿವೆ. ಇವುಗಳ ಮೂಲಕ ಮೆಕೆಂಝಿಯು ಭಾರತೀಯ ಸಂಸ್ಕೃತಿ ಏನೆಂಬುದನ್ನು ತಿಳಿಯಲು ಹಾಗೂ ತಿಳಿಸಲು ಯತ್ನಿಸಿದ್ದಾನೆ. ಇದು ನಿಜಕ್ಕೂ ನಾವು ಪ್ರಶಂಸಿಸ ಬೇಕಾದ ವಿಷಯ.

೨.೧. ಕೈಫಿಯತ್ತನ್ನು ಬರೆಸಿದ ಕಾಲ

ಕೈಫಿಯತ್ತುಗಳನ್ನು ಬರೆಸಿದ ಕಾಲದ ಬಗ್ಗೆ ನಮಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಹೆಚ್ಚಿನ ಕೈಫಿಯತ್ತುಗಳ ಆರಂಭದಲ್ಲಿ ಅಥವಾ ಅಂತ್ಯದಲ್ಲಿ ಅದನ್ನು ಬರೆಸಿದವರ ಹೆಸರು, ಬರೆಸಿದ ಸಂವತ್ಸರದ ಹೆಸರ ದಿನಾಂಕ ವಾರದ ಹೆಸರನ್ನು ಕೊಡಲಾಗಿದೆ.

ಉದಾಹರಣೆಗೆ "ಕೈಫಿಯತ್ತು ಸೋದೆ ರಾಜವಂಶಾವಳೀ ಸಹಾ ಸೋದೆ ಸಂಸ್ಥಾನದ ಕೈಫಿಯತ್ತು, ಗುಮಾಸ್ತೆ ಕೃಷ್ಣರಾವ್, ಇಲಾಖೆ ಕಾರ್ನಲ್ ಕಾಲ ಮೆಕೆಂಝಿ ಸಂವಿಯರ ಜರ್ನಲಿ ಸೂದಸನ್ ೧೮೧೫ (ಕ್ರಿ. ಶ.) ಜನವರಿಯಲ್ಲೂ ಬರೆದು ತಾಲೂಕ್ ದರಿಯಾಫ್ತಿ ದಾಖಲ ಪ್ರಕಾರ "

ಅದೇ ರೀತಿ ಇನ್ನೊಂದು ಕೈಫಿಯತ್ತಿನ ಕಾಲವನ್ನು "ಬನವಾಶಿ ಸ್ಥಳ ಕೈಫಿಯತ್ತು -೨" ಇದರಿಂದ ತಿಳಿಯಬಹುದಾಗಿದೆ. ಇದರಲ್ಲಿ ಹೀಗೆ ಆರಂಭವಾಗುತ್ತದೆ.

[6]"ಸನ್ ೧೮೧೨ನೇಯ ಇಸವಿ (ಶ್ರೀ ಮುಖ ಸಂವತ್ಸರದ) ದಿಶಂಬರು ಮಾಹೆ ತಾರೀಖು ೮ನೇಯ ಶ್ರುಮುಖ ಸಂವತ್ಸರದ ಮಾರ್ಗಶಿರ ಶು. ೧೪ ಸೋಮವಾರದಲ್ಲೂ ಬನವಶಿ ಸ್ಥಳದ ಮಹಾಜನಂಗಳು, ತ್ರಿಕಾಲ ಅರ್ಚಕರು, ಆಚಾರ್ಯರು, ಪುರೋಹಿತ ಲಿಂಗಾಭಟ್ಟರು ಜೋಯಿಸ ರಾಮ ಭಟ್ಟರು ಮಹಾಜನಂಗಳು ಸಹಾ ಬರೆಸಿಕೊಟ್ಟ ಕೈಫಿಯತ್ತು ವಿವರ"

ಇಷ್ಟು ಸ್ಪಷ್ಟವಾದ ಮಾಹಿತಿಗಳು ಎಲ್ಲಾ ಕೈಫಿಯತ್ತುಗಳಲ್ಲಿ ಸಿಗುವುದಿಲ್ಲವಾದರೂ ಅವುಗಳ ಕಾಲ ನಿರ್ಣಯ ಮಾಡುವುದು ನಮಗೆ ಕಷ್ಟದ ಕೆಲಸವೇನು ಅಲ್ಲ. ಕಾರ್ಕಳ ಅರಸರ ಕೈಫಿಯತ್ತು, ಅಜಿಲರ ಕೈಫಿಯತ್ತು, ಕಡಬ ಸಂಸ್ಥಾನದ ಕೈಫಿಯತ್ತು ಮೊದಲಾವುಗಳಲ್ಲಿ ಅದನ್ನು ಬರೆಸಿದ ಕಾಲದ ಬಗೆಗೆ ಯಾವ ಸ್ಪಷ್ಟವಾದ ಉಲ್ಲೇಖವೂ ಸಿಗುವುದಿಲ್ಲವಾದರೂ ಇವನ್ನೆಲ್ಲವನ್ನು ಕ್ರಿ. ಶ. ೧೮೦೯ ರಿಂದ ೧೮೨೧ ವರ್ಷಗಳ ಅಂತರದಲ್ಲಿ ಬರೆಸಲಾಗಿತ್ತೆಂದು ನಾವು ಹೇಳಬಹುದು.

೨.೨. ಕೈಫಿಯತ್ತುಗಳ ಭಾಷೆ

ಸಾಹಿತ್ಯದ ಭಾಗವಾಗಿರುವ ಕಾವ್ಯ ಕೃತಿಗಳಿಗೆ ಮತ್ತು ದಾಖಲೆಯ ಭಾಗವಾಗಿರುವ ಶಾಸನಗಳಿಗೆ ಪ್ರಾಚೀನ ಕಾಲದಲ್ಲಿ ಗ್ರಂಥಸ್ಥ ಭಾಷೆಯನ್ನು ಬಳಸಲಾಗುತ್ತಿತ್ತು. ಇದರಿಂದ ಪ್ರಾಚೀನ ಆಡು ಭಾಷೆಯ ಸ್ವರೂಪವನ್ನು ಅರಿಯಲು ತಕ್ಕ ಸಾಮಾಗ್ರಿ ನಮಗೆ ಸಿಗುವುದಿಲ್ಲವೆಂದೇ ಹೇಳಬಹುದು. ಇಂಥ ಸಂದರ್ಭದಲ್ಲಿ ಸ್ಥೂಲವಾಗಿಯಾದರೂ ಸಮಕಾಲೀನ ಆಡು ಭಾಷೆಯನ್ನೊಳಗೊಂಡ ಕೈಫಿಯತ್ತುಗಳಿಗೆ ವಿಶಿಷ್ಟ ಸ್ಥಾನ ಸಲ್ಲುತ್ತದೆ.

ಕೈಫಿಯತ್ತುಗಳು ಹುಟ್ಟಿದುದು ೧೮- ೧೯ನೇಯ ಶತಮಾನಗಳ ಮಧ್ಯಕಾಲದಲ್ಲಿ ಎಂದು ಈಗಾಗಲೇ ಮೇಲೆ ಉಲ್ಲೇಖಿಸಲಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯ ಪಾಳೆಯಗಾರರ ಕನ್ನಡ, ಮುಸಲ್ಮಾನರ ಉರ್ದು, ಆಂಗ್ಲರ ಇಂಗ್ಲಿಷ್ ಭಾಷೆಗಳು ತಮ್ಮ ದಟ್ಟವಾದ ಪ್ರಭಾವ ಬೀರಿ, ಕನ್ನಡದಲ್ಲಿ ಶುದ್ಧವಾದ ಶೈಲಿ ಪರಂಪರೆ ನಾಶವಾಗಿ, ಆಡಿದಂತೆ ಬರೆಯುವ ರೀತಿ ಮುನ್ನಡೆಯಿತ್ತು. ಇಂಥ ಭಾಷೆಯನ್ನು ಬಳಸಿಕೊಂಡು ಕೈಫಿಯತ್ತುಗಳು ಹುಟ್ಟಿಕೊಂಡಿವೆ.

ಕೈಫಿಯತ್ತುಗಳನ್ನು ಬರೆದವರು ಸಾಮಾನ್ಯರ ನಡುವೆ ಬಾಳಿದ ಕರಣಿಕರು ಇಲ್ಲವೆ ಅಕ್ಷರಜ್ಞರು. ಕೆಲವೊಮ್ಮೆ ಸಾಮಾನ್ಯರ ಜೊತೆ ವ್ಯವಹರಿಸುತ್ತಿದ್ದ ಅಧಿಕಾರಿಗಳು ಇವರು ಸಹಜವಾಗಿಯೇ ಆ ಕಾಲದ ಆಡು ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಬಳಸಿದ್ದಾರೆ. ಒಂದು ಕಡೆ ಆಡುಭಾಷೆಗೆ ಹತ್ತಿರವಾದ ಧ್ವನಿ ಉಳಿದುಕೊಂಡುದು, ಇನ್ನೊಂದು ಕಡೆ ಆಡಳಿತದಲ್ಲಿ ಸೇರಿಕೊಂಡಿದ್ದ ಅನ್ಯಭಾಷೆಯ ಪದಗಳನ್ನು ವಿಶೇಷವಾಗಿ ಬಳಸಿರುವುದು, ಇಲ್ಲಿಯ ಮುಖ್ಯ ಲಕ್ಷಣವಾಗಿದೆ. ಉದಾ: "ತಮ್ಮ ವಂಗ ದೇಶವಾದ ಕಾರಣ ಬಂಗರು ಎಂಬ ನಾಮಧೇಹ ಇಟ್ಟು ಕಾರಣ ಲೋಕರೂಢಿಗೆ ಬಂಗರು ಎಂಬ ನಾಮ ಧೇಹರಾಗಿ ಈ ಪ್ರಕಾರ ಪ್ರತ್ಯ-ಪ್ರತ್ಯೇಕ ಹೆಸರಿಟ್ಟುಕ್ಕುಂಡು ಇರುತ್ತಿದ್ದರು" (ಅಜಿಲರ ಕೈಫಿಯತ್ತು ಪುಟ ೧೧೫) ಹೀಗೆ ಆ ಕಾಲದ ಕನ್ನಡ ಭಾಷಾ ಸ್ವರೂಪವನ್ನು ಕೈಫಿಯತ್ತುಗಳಿಂದ ತಿಳಿದುಕೊಳ್ಳಲು ಉತ್ತಮ ಸಾಧನವಾಗಿದೆ.

ಕೈಫಿಯತ್ತುಗಳಲ್ಲಿ ಭಾಷೆ ಅಷ್ಟೇನು ಶಿಥಿಲವಾದಂತೆ ತೋರುತ್ತಿಲ್ಲ. "ಶ್ರೀ ಸೋಮನಾಥೇಶ್ವರ ಸ್ವಾಮಿಯನ್ನು ಏಕ ಭಕ್ತಿಯಿಂದ ಸ್ಮರಿಸಿಕ್ಕುಂಡು ಏಕಭುಕ್ತ ಉಪವೃತಾದಿಗಳ ಮಾಡಿಕ್ಕುಂಡು ಭಜಿಸುತ್ತಿರುವ ವೇಳ್ಯೆಯಲ್ಲಿ" (ಚೌಟ ಅರಸರ ಕೈಫಿಯತ್ತು ಪುಟ - ೧೧೯) ಬರಹಗಾರ ಬರೆಯುವಾಗ ವಿಷಯವನ್ನು ಅತಿಯಾಗಿ ಬಳಸದೆ

ಸ್ಪಷ್ಟಮಾತುಗಳಲ್ಲಿ ಅತಿಶಯೋಕ್ತಿಯಿಲ್ಲದೆ ಹೇಳಿದ್ದಾರೆ. ಆಗಿನ ಕಾಲದಲ್ಲಿದ್ದ ಹಾಗೂ ಪರಂಪರೆಯಿಂದ ಬಂದ ಪವಾಡಗಳ ನಂಬಿಕೆಗಳು ಇದರಲ್ಲಿ ಪ್ರತಿಬಿಂಬಿಸಿವೆ. ಹೆಚ್ಚಿನ ಕೈಫಿಯತ್ತುಗಳನ್ನು ಕಾಗದದಲ್ಲೇ ಬರೆಯಲಾಗಿದೆ. ಆ ಕಾಲದ ಭಾಷೆ, ಶೈಲಿ, ನುಡಿಗಟ್ಟುಗಳನ್ನು ಇಂದು ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಈ ಬರಹಗಳ ಕೈಫಿಯತ್ತುಗಳಿಂದ ಸಾಧ್ಯವಾಗಿದೆ. ಅದರೊಂದಿಗೆ ಕಾಲದಿಂದ ಕಾಲಕ್ಕೆ ಲಿಪಿಯ ವ್ಯತ್ಯಾಸ ತಲೆದೋರಿದೆಯೇ ಎಂದು ನಿರ್ಣಯಿಸುವಲ್ಲೂ ಸಹಾಯಕವಾಗುತ್ತದೆ.

ಕೈಫಿಯತ್ತುಗಳಲ್ಲಿ ಸ್ವರಗಳ ಬದಲಿಗೆ ವ್ಯಂಜನಾಕ್ಷರಗಳ ಪ್ರಯೋಗವನ್ನು ಕಾಣಬಹುದು. ಇ. ಈ. ಎ. ಏ ಎಂಬ ಸ್ವರಗಳ ಬದಲಿಗೆ ಯ ಕಾರ ಸೇರಿ ಯಿ, ಯೀ, ಯೆ, ಯೇ ಬಂದಿದೆ. ಉದಾ: ಯಿದೆನೆಲ್ಲಾಡಿಬಿಡಿನಲ್ಲಿ ವಾಸವಾಗಿರುತ್ತೇವೆ. 'ಎ' ಎಂಬುದನ್ನು 'ಯ' ಎಂದು ಗುರುತಿಸಿದೆ. ನಿರ್ಮಾಣವಾಗಿ ಯಷ್ಟು ವರ್ಷವಾಯಿತು. ವು ಕಾರದ ವ್ಯಂಜನಯುಕ್ತ ಅಕ್ಷರದ ಬದಲು 'ಉ' ಸ್ವರವನ್ನೇ ಪ್ರಯೋಗಿಸುವುದನ್ನು ಕಾಣುತ್ತೇವೆ. ಉದಾ : ನಾಉ = (ನಾವು) ಚಉಟರು = (ಚೌಟರು) ತಾಉ = (ತಾವು) ಕೆಲವೆಡೆಯಲ್ಲಿ ದೀರ್ಘಾಕ್ಷರದ ಬದಲು ಹ್ರಸ್ವಕ್ಷರವನ್ನು ಬರೆದಿದೆ. ಅದೇ ರೀತಿ ಮಹಾಪ್ರಾಣದ ಬದಲಿಗೆ ಅಲ್ಪಪ್ರಾಣ ಬಳಕೆಯಾಗಿದ್ದನ್ನೂ ಕಾಣುತ್ತೇವೆ.

೨. ೩. ದ. ಕ. ಜಿಲ್ಲೆಯಲ್ಲಿ ಕಂಡುಬರುವ ಒಟ್ಟು ಕೈಫಿಯತ್ತುಗಳ ವಸ್ತು ವಿವೇಚನೆ

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ೩೯ ಕೈಫಿಯತ್ತುಗಳಲ್ಲಿ ಹೇಳುವ ವಿಷಯಗಳು ವೈವಿಧ್ಯದಿಂದ ಕೂಡಿವೆ. ಇವುಗಳನ್ನು ಅಭ್ಯಾಸದ ದೃಷ್ಟಿಯಿಂದ ಕೆಲವು ಭಾಗಗಳಲ್ಲಿ ವರ್ಗೀಕರಿಸುವುದು ಅನಿವಾರ್ಯ. ಉದಾಹರಣೆಗೆ ಕೆಲವು ಕೈಫಿಯತ್ತುಗಳು ದೇವಾಲಯಗಳ ಬಗ್ಗೆ ವಿವರ ನೀಡಿದರೆ, ಕೆಲವು ಕೈಫಿಯತ್ತುಗಳು ಸ್ಥಳ ಪುರಾಣಗಳಿಗೆ ಮತ್ತೆ ಕೆಲವು ಮಠದ ನಿರೂಪಣೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಈ ಎಲ್ಲಾ ಕೈಫಿಯತ್ತುಗಳನ್ನು ಹೀಗೆ ವರ್ಗೀಕರಿಸಬಹುದು.

೨. ೩. ೧. ಚಾರಿತ್ರಿಕ ಕೈಫಿಯತ್ತುಗಳು:

೧. ಕಾರ್ಕಳದ ಅರಸರ ಕೈಫಿಯತ್ತು
೨. ಚೌಟ ಅರಸರ ಕೈಫಿಯತ್ತು
೩. ಅಜಿಲರ ಕೈಫಿಯತ್ತು
೪. ಕುಂದಾಪುರದ ಕೈಫಿಯತ್ತು
೫. ಜಮಲಾಬಾದು ಕೈಫಿಯತ್ತು
೬. ತುಳುವ ದೇಶದ ಕಡಬಾ ಸಂಸ್ಥಾನದ ಕೈಫಿಯತ್ತು

೨. ೩. ೨. ಸ್ಥಳ ಪುರಾಣಗಳ ಕೈಫಿಯತ್ತುಗಳು :

೧. ಬಾರಕೂರ ಕೈಫಿಯತ್ತು
೨. ಮೂಡಬಿದ್ರೆ ಕೈಫಿಯತ್ತು
೩. ಕುಂಜಾರು ಕೈಫಿಯತ್ತು
೪. ಮರದಳದ ಕೈಫಿಯತ್ತು
೫. ಕುಂಬಕಾಸಿ ಸ್ಥಳದ ಕುಂಬೇಶ್ವರ ಕೈಫಿಯತ್ತು

೨. ೩. ೩. ದೇವಾಲಯಗಳ ಐತಿಹ್ಯಕ್ಕೆ ಸಂಬಂಧಿಸಿದ ಕೈಫಿಯತ್ತುಗಳು :

೧. ಕುಂದಾಪೂರೆ (ಧರ್ಮಸ್ಥಳ) ಕೈಫಿಯತ್ತು

೨. ಕಾಪಿನ ದೇವಸ್ಥಾನ ಕೈಫಿಯತ್ತು

೩. ಯೆಲ್ಲೂರು ದೇವಸ್ಥಾನದ ಕೈಫಿಯತ್ತು

೪. ಬಳಿಸಾಗರ ದೇವಾಲಯದ ಕೈಫಿಯತ್ತು

೨. ೩. ೪. ಮಠಗಳ ಕೈಫಿಯತ್ತುಗಳು :

೧. ಪುತ್ತಿಗೆ ಮಠದ ಕೈಫಿಯತ್ತು

೨. ಕೃಷ್ಣಾಪುರ ಮಠದ ಕೈಫಿಯತ್ತು

೩. ಸೋದೆ ಮಠದ ಕೈಫಿಯತ್ತು

೪. ಅದಮಾರು ಮಠದ ಕೈಫಿಯತ್ತು

೫. ಪಲಿಮಾರು ಮಠದ ಕೈಫಿಯತ್ತು

೬. ಶಿರೂರು ಮಠದ ಕೈಫಿಯತ್ತು

೭. ಕಾಣೂರು ಮಠದ ಕೈಫಿಯತ್ತು

೮. ಪೇಜಾವರ ಮಠದ ಕೈಫಿಯತ್ತು

೨. ೩. ೫. ಮಾಗಣೆ ಕೈಫಿಯತ್ತುಗಳು :

೧. ಭೈರೂರ ಮಾಗಣೆ ಕೈಫಿಯತ್ತು

೨. ಪೆರಡೂರು ಮಾಗಣೆ ಕೈಫಿಯತ್ತು

೩. ಕೊಡೆಕೊರು ಮಾಗಣೆ ಕೈಫಿಯತ್ತು

೪. ಹಾರನಾಡು ಮಾಗಣೆ ಕೈಫಿಯತ್ತು

೫. ಹಲಸನಾಡು ಮಾಗಣೆ ಕೈಫಿಯತ್ತು

೬. ಕಾಳತೋಡು ಮಾಗಣೆ ಕೈಫಿಯತ್ತು

೭. ಮೂಡನಾಡು ಮಾಗಣೆ ಕೈಫಿಯತ್ತು

೮. ಕಬ್ಬಿನಾಡ ಮಾಗಣೆ ಕೈಫಿಯತ್ತು

೯. ಕೊಲ್ಲೂರು ಉತ್ತರ ಮಾಗಣೆ ಕೈಫಿಯತ್ತು

೧೦. ಕದರಿ ಮಾಗಣೆ ಕೈಫಿಯತ್ತು

೧೧. ಹೆಮ್ಮಾಡಿ ಮಾಗಣೆ ಕೈಫಿಯತ್ತು

೧೨. ಯೆಳರೆ ಮಾಗಣೆ ಕೈಫಿಯತ್ತು

೧೩. ಹೊಸಂಗಡಿ ಮಾಗಣೆ ಕೈಫಿಯತ್ತು

೨.೩.೬. ಇತರ ಸಂಕೀರ್ಣ ವಿಷಯಗಳ ಕೈಫಿಯತ್ತು :

೧. ಅಡಿಕೆ ಪೈರು ಮಾಡುವ ವಿವರ

೨. ಜೈನ ಅರಸುಗಳ ವಂಶಾವಳಿ

೩. ಯಡೂರ ಕನಡಿ ಗ್ರಾಮದ ಕೈಫಿಯತ್ತು

ಈ ಎಲ್ಲಾ ಕೈಫಿಯತ್ತುಗಳು ಆಯಾ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಉಲ್ಲೇಖಿಸುತ್ತವೆ. ಕೆಲವೆಡೆ ಪ್ರಾಸಂಗಿಕವಾಗಿ ಒಂದು ಪ್ರದೇಶದ ಹಿನ್ನೆಲೆಯನ್ನು ಹೇಳುವಾಗ ಪುರಾಣದ ಘಟನೆಗಳನ್ನು ವಿಶ್ಲೇಷಿಸಿದರೆ, ಕೆಲವೊಮ್ಮೆ ಪುರಾಣ ಘಟನೆಗಳೇ ಪ್ರಧಾನವಾಗಿ ಅನಾವರಣಗೊಳ್ಳುವುದನ್ನು ಕಾಣಬಹುದು. ಉದಾಹರಣೆಗೆ ಕಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಕತೆಯು ಕೃತಯುಗದ ದಕ್ಷ ಪ್ರದೀಪನಿಂದ ಆರಂಭವಾಗಿ, ಕುಮಾರ ಜನನವನ್ನು ಒಳಗೊಂಡು ಕೊನೆಗೆ ಕಡಬಕ್ಕೆ ಸಂಬಧಿಸಿ ಕೊನೆಯಾಗಿರುತ್ತದೆ. ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳ ವಿಷಯಗಳು ಚಾರಿತ್ರಿಕ ಕೈಫಿಯತ್ತುಗಳಲ್ಲಿ ಬರುತ್ತವೆ. ಹೆಚ್ಚಿನ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕೆಲವೆಡೆ ಮಾತ್ರ ಐತಿಹಾಸಿಕ ವ್ಯಕ್ತಿಗಳು ಪುರಾಣ ಪುರುಷರಂತೆ ವರ್ತಿಸುವುದೂ ಇದೆ. ಮಠಗಳ ಕೈಫಿಯತ್ತಿನಲ್ಲಿ ಉಡುಪಿಯ ಅಷ್ಟಮಠಗಳ ಬಗ್ಗೆ ವಿವರಗಳಿವೆ. ಮಠಗಳ ಸಂಪ್ರದಾಯ, ಸ್ವಾಮಿಗಳ ಕೆಲಸ ಕಾರ್ಯಗಳು, ಆ ಮಠದಲ್ಲಿರುವ ಶ್ರೇಷ್ಠ ಗ್ರಂಥಗಳು ಮೊದಲಾವುದರ ಬಗ್ಗೆ ವಿಷಯಗಳಿವೆ. ದೇವಾಲಯಗಳ ಐತಿಹ್ಯಕ್ಕೆ ಸಂಬಂಧಿಸಿದ ಕೈಫಿಯತ್ತುಗಳಲ್ಲಿ ದೇವಸ್ಥಾನಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಿವೆ. ಇವುಗಳಲ್ಲಿ ಸಾಮಾನ್ಯವಾಗಿ ಅಲ್ಲಿಯ ಸ್ಥಳ ಮಹಾತ್ಮೆ, ಅಲ್ಲಿಯ ದೇವರ ಪವಾಡ, ಕಾರಣೀಕೆಗಳ ಬಗ್ಗೆ ದೀರ್ಘ ವಿವರಗಳಿರುತ್ತವೆ. ಉದಾಹರಣೆಗೆ ಕುಂದಾಪೂರೆ (ಧರ್ಮಸ್ಥಳ) ಕೈಫಿಯತ್ತಿನಲ್ಲಿ "ಜೈನ ಜಾತಿಯ ಅಮ್ಮು ಬಲ್ಲಾಳತಿಗೆ ಕಾಳರ್ಕಾಯಿ ಎಂಬ ಹೆಸರುಳ್ಳ ಕನ್ಯಾಕುಮಾರಿ ದೇವಿ ಕನಸಿನಲ್ಲಿ ಪ್ರತ್ಯಕ್ಷವಾಗಿ ನಾವು ಈ ಬೀಡಿನಲ್ಲಿ ವಾಸವಾಗಿರುತ್ತೇವೆ. ಇಲ್ಲಿ ನಮಗೆ ಮಂಚ ಇಟ್ಟು ದೀಪ ಹಚ್ಚಿ ಪೂಜೆ ಮಾಡಿಕೊಂಡು ಬರಬೇಕು" ಎಂದು ಆ ದೇವಿ ಆದೇಶ ಮಾಡುವ ವಿವರವಿದೆ. ಭಯ- ಭಕ್ತಿ ನಂಬಿಕೆಗಳಿಗೆ ಇಲ್ಲಿನ ಹೆಚ್ಚಿನ ಪ್ರಾಶಸ್ತ್ಯ. ಆಯಾ ದೇವಾಲಯಗಳಲ್ಲಿ ನಡೆಯುವ ಪೂಜಾಕ್ರಮಗಳ ಬಗಗೂ ಇವುಗಳಲ್ಲಿ ವಿವರಗಳಿವೆ.

ಹೀಗೆ ಕೈಫಿಯತ್ತುಗಳಲ್ಲಿ ವಿವಿಧ ವಿಷಯಗಳು ಹರಡಿಕೊಂಡಿವೆ. ಪ್ರತಿಯೊಂದು ಕೈಫಿಯತ್ತು ಅಧಿಕೃತವಾಗಿ ಆಯಾ ಸಂಸ್ಥೆಯವರು ತಮಗೆ ತಿಳಿದ ವಿಷಯಗಳನ್ನು ಕಲೆಹಾಕಿ ಪ್ರಾಮಾಣಿಕವಾಗಿ ಬರೆದುಕೊಟ್ಟಂತೆ ತೋರುತ್ತದೆ. ಇದರಿಂದ ಸ್ಥಳೀಯರು ಆ ಕಾಲಘಟ್ಟದಲ್ಲಿ ಹೇಗೆ ಚಿಂತಿಸುತ್ತಿದ್ದರು. ಅವರ ಗ್ರಹಿಕೆಗಳು ಹೇಗಿದ್ದವು? ತಾವು ನಿರ್ವಹಿಸುತ್ತಿದ್ದ ಕಾರ್ಯ, ಕರ್ತವ್ಯಗಳಲ್ಲಿ ನಿಷ್ಠೆ, ಪ್ರಾಮಾಣಿಕತನಗಳು ಹೇಗಿದ್ದವು? ಇತ್ಯಾದಿ ಅಂಶಗಳನ್ನು ನಾವು ವಿಶ್ಲೇಷಿಸಬಹುದು. ವ್ಯಕ್ತಿ ಮತ್ತು ಸಮಾಜ, ನಂಬಿಕೆ ಮತ್ತು ಧರ್ಮಗಳಂತಹ ಸೂಕ್ಷ್ಮ ನಿಬಂಧಗಳು ಒಂದೊಂದು ಕಾಲದ ಸಂದರ್ಭದಲ್ಲಿ ಹೇಗೆ ಅನಾವರಣಗೊಳ್ಳುತ್ತ ತನ್ನ ಎಲೆಗಳನ್ನು ವಿಸ್ತರಿಸಿಕೊಳ್ಳುತ್ತವೆ. ರೂಢ- ಸಂಪ್ರದಾಯಗಳು ಬದುಕಿನ ಸುತ್ತ ಹೇಗೆ ಘಟ್ಟಿಕೊಳ್ಳುತ್ತವೆ ಎಂಬ ಅಂಶಗಳ ಕಡೆಗೂ ನಾವು ಹೆಚ್ಚು ಗಮನ ಹರಿಸಲು ಇಲ್ಲಿ ಸಾಧ್ಯವಾಗುತ್ತವೆ.

◆◆◆

ಅಧ್ಯಾಯ - ೩
ಕೈಫಿಯತ್ತುಗಳ ಧಾರ್ಮಿಕ ಅಧ್ಯಯನ

೩. ೧. ವಿವಿಧ ಧರ್ಮಗಳು

೩. ೧. ೧. ಶೈವಧರ್ಮ

೩. ೧. ೨. ಜೈನಧರ್ಮ

೩. ೧. ೩. ವೈದಿಕ (ವಿಷ್ಣು) ಧರ್ಮ

೩. ೧. ೪. ಭೂತಾರಾಧನೆ

೩. ೨. ಮಠ ಮಾನ್ಯಗಳು

೩. ೨. ೧. ಪುತ್ತಿಗೆ ಮಠದ ಕೈಫಿಯತ್ತು

೩. ೨. ೨. ಕೃಷ್ಣಾಪುರ ಮಠದ ಕೈಫಿಯತ್ತು

೩. ೨. ೩. ಸೋದೆ ಮಠದ ಕೈಫಿಯತ್ತು

೩. ೨. ೪. ಅದಮಾರು ಮಠದ ಕೈಫಿಯತ್ತು

೩. ೨. ೫. ಪಲಿಮಾರು ಮಠದ ಕೈಫಿಯತ್ತು

೩. ೨. ೬. ಶಿರೂರು ಮಠದ ಕೈಫಿಯತ್ತು

೩. ೨. ೭. ಕಾಣೂರು ಮಠದ ಕೈಫಿಯತ್ತು

೩. ೨. ೮. ಪೇಜಾವರ ಮಠದ ಕೈಫಿಯತ್ತು

೩.೩. ಇತರ ದೇವಾಲಯಗಳು

೩. ೩. ೧. ಕುಂದಾಪೂರೆ (ಧರ್ಮಸ್ಥಳ) ಕೈಫಿಯತ್ತು

೩. ೩. ೨. ಕಾಪಿನ ದೇವಾಲಯದ ಕೈಫಿಯತ್ತು

೩. ೩. ೩. ಎಲ್ಲೂರು ದೇವಾಲಯದ ಕೈಫಿಯತ್ತು

೩. ೩. ೪. ಕುಂಬಕಾಸಿ ದೇವಾಲಯದ ಕೈಫಿಯತ್ತು

೩. ೩. ೫. ಬಳಿಸಾಗರ ದೇವಾಲಯದ ಕೈಫಿಯತ್ತು

೩. ೩. ೬. ಪೆರಡೂರು ಮಾಗಣೆ ದೇವಾಲಯದ ಕೈಫಿಯತ್ತು

೩. ೪. ಆರಾಧನೆಗಳು

೩. ೪. ೧. ನಂಬಿಕೆ ಮತ್ತು ಆಚರಣೆಗಳು

೩. ೪. ೨. ಸ್ವಪ್ನದಲ್ಲಿ ನಂಬಿಕೆ

೩. ೪. ೩. ಇತರ ನಂಬಿಕೆಗಳು

ಅಧ್ಯಾಯ - ೩

ಕೈಫಿಯತ್ತುಗಳ ಧಾರ್ಮಿಕ ಅಧ್ಯಯನ

೩.೧. ವಿವಿಧ ಧರ್ಮಗಳು

ತುಳುನಾಡು ಎಂದು ಕರೆಯಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಯು ವಿಭಿನ್ನ ಧರ್ಮಗಳ ಸಂಗಮವಾಗಿದೆ. ಈ ಪ್ರದೇಶದಲ್ಲಿ ಬೇರೆ ಬೇರೆ ಸಂಪ್ರದಾಯಗಳನ್ನು ಆಚರಿಸುವ ವಿವಿಧ ಧಾರ್ಮಿಕ ಮನೋಭಾವನೆಯ ಜನರು ಈಗಿದ್ದಂತೆ ಹಿಂದೆಯೂ ಇದ್ದರು. ಮತ್ತು ತಮ್ಮ ಸಮಾಜದ ಆಚರಣೆ ನಂಬಿಕೆಗಳನ್ನು ತಾವು ನಂಬಿಕೊಂಡು ಬಂದ ಧರ್ಮ ತತ್ವದ ಆಧಾರದಲ್ಲಿಯೇ ಅವರು ರೂಪಿಸಿಕೊಂಡಿದ್ದರು. ನಾಗರಿಕತೆ ಬೆಳೆದಂತೆ ಮಾನವನು ತನ್ನಲ್ಲಿ ಅಡಗಿರುವ ಅನಾಗರಿಕ, ಅಮಾನವೀಯ ಗುಣಗಳಿಗೆ ಕಡಿವಾಣ ಹಾಕುವಲ್ಲಿ ದೇವರ ಭಯವು ಮಹತ್ವದ ಪಾತ್ರವಹಿಸಿತ್ತು. ಹೀಗೆ ದೇವರು ಧರ್ಮಗಳು ಬೇರೆ ಬೇರೆ ಕಾಲಘಟ್ಟ, ಸ್ಥಳ ಸಮುದಾಯಗಳಿಗನುಗುಣವಾಗಿ ಭಿನ್ನರೂಪ ಪಡೆದ ಬೇರೆ ಬೇರೆ ತತ್ವಗಳನ್ನು ಸಾರುವ ಒಂದೇ ಧರ್ಮದ ವಿಭಿನ್ನ ಶಾಖೆಗಳು ಹುಟ್ಟಿಕೊಂಡಿರುವುದು ಇಲ್ಲಿಯ ಚರಿತ್ರೆಯ ಅವಲೋಕನದಿಂದ ಸ್ಪಷ್ಟವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯೆಂಬ ಈ ತುಳುನಾಡು ಪ್ರಾಚೀನ ಕಾಲದಿಂದಲೂ ಹಲವು ಧರ್ಮಗಳ ಮತ್ತು ಪಂಥಗಳ ಜನರನ್ನೊಳಗೊಂಡಿತ್ತು. ಜೈನರು ಈ ಜಿಲ್ಲೆಯಲ್ಲಿ ಮುಖ್ಯವಾಹಿನಿಯಾದ ಹಿಂದುಗಳೊಡನೆ ಅವಿಭಾಜ್ಯ ಎನ್ನುವಂತೆ ಸೇರಿಕೊಂಡಿದ್ದರು. ವೀರಶೈವ ಜನಾಂಗಕ್ಕೆ ಸೇರಿದವರ ಮಠಗಳು ತೀರಾ ಕಡಿಮೆಯೇ ಆಗಿದ್ದರೂ ಅವರು ಕೂಡ ಈ ಜಿಲ್ಲೆಯಲ್ಲಿ ಕೆಳದಿ ಅರಸರ ಕಾಲದಲ್ಲಿ ನೆಲೆಸಿದ್ದರು.

ಸುಮಾರು ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನಗಳಲ್ಲಿ ತುಳುನಾಡಿನ ಧಾರ್ಮಿಕ ಪರಂಪರೆಯ ಚಿತ್ರಣ ನಮಗೆ ಕೈಫಿಯತ್ತುಗಳಲ್ಲಿ ದೊರಕುತ್ತವೆ. ಇದರಲ್ಲಿ ವಿಶೇಷವಾಗಿ ಶೈವ, ಜೈನ, ವೈದಿಕ ಈ ಮೂರು ಧರ್ಮಗಳ ವಿವೇಚನೆ ಮೇಲಿಂದ ಮೇಲೆ ಕಂಡು ಬರುತ್ತವೆ. ಜೊತೆಗೆ ಸ್ಥಳೀಯ ಇತರ ಸಾಮಾನ್ಯ ಜನರ ನಂಬಿಕೆ, ಪೂಜೆ, ಆರಾಧನೆಗಳ ಬಗೆಗೂ ಸಾಕಷ್ಟು ಉಲ್ಲೇಖಗಳು ಕಂಡು ಬರುತ್ತವೆ.

೩. ೧. ೧. ಶೈವಧರ್ಮ :

ಶೈವಧರ್ಮವು ತುಳುನಾಡಿನ ಪ್ರಾಚೀನ ಧರ್ಮ. ಇಲ್ಲಿ ಪ್ರಥಮ ಅರಸರಾದ ಆಳೂಪರು ಶೈವ ಧರ್ಮೀಯರಾಗಿದ್ದರು. ಪ್ರಾಚೀನ ಕಾಲದಿಂದಲೂ ಅಂದರೆ ಎರಡನೆಯ ಆಳೂಪರಸ ಚಿತ್ರವಾಹನನ ಕಾಲದಿಂದಲೂ ಅವರು ಜೈನಧರ್ಮದೊಡನೆ ಅನನ್ಯ ಸಂಬಂಧವನ್ನಿಟ್ಟುಕೊಂಡಿದ್ದರು. ಅವರಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳು ನಡೆಯುತ್ತಿದ್ದವು. ಘಟ್ಟದ ಮೇಲಿನ ಜೈನ ಶಾಂತರರ ಜೊತೆಗೆ ನಿರಂತರ ಸ್ನೇಹ, ವಿಶ್ವಾಸಗಳನ್ನಿರಿಸಿಕೊಂಡಿದ್ದರಲ್ಲದೇ ಅವರೊಡನೆ ವೈವಾಹಿಕ ಸಂಬಂಧಗಳನ್ನು ನಡೆಸಿದ ಬಗ್ಗೆ ಅನೇಕ ಸಾಕ್ಷ್ಯಾಧಾರಗಳಿವೆ. ಜೊತೆಗೆ ಎರಡನೇ ಚಿತ್ರವಾಹನನು (ಕ್ರಿ. ಶ. ಸು. ೬೯೪) ಚಾಲುಕ್ಯ ರಾಜಕುಮಾರಿ ಜೈನ ಕುಂಕುಮ ದೇವಿಯನ್ನು ವಿವಾಹವಾದ ಅಪೂರ್ವ ದಾಖಲೆಯೂ ಇದೆ. (ತುಳುನಾಡಿನ ಜೈನಧರ್ಮ ಡಾ। ಎಸ್. ಡಿ. ಶೆಟ್ಟಿ) ಶಿವ ಶೈವಧರ್ಮದ ಪ್ರಧಾನ ದೇವತೆ, ಲಯಕರ್ತನಾದ ಶಿವನಿಗೆ ದಕ್ಷಿಣಕನ್ನಡದ ಉದ್ದಗಲಗಳಲ್ಲೂ ಅರ್ಚನೆಯು ಸಲ್ಲುತ್ತದೆ. ಶಿವಲಿಂಗ, ಉಮಾಮಹೇಶ್ವರಿ ಅಥವಾ ಅರ್ಧನಾರೀಶ್ವರ ರೂಪಗಳು ಇಲ್ಲಿ ಮುಖ್ಯವಾಗಿ ಪೂಜಿಸಲ್ಪಡುತ್ತವೆ. ಕ್ರಿ. ಶ. ಸುಮಾರು ೨ನೇ ಯ ಶತಮಾತನದಲ್ಲಿ ಶಿವಾರಾಧನೆ ನಡೆಯುತ್ತಿತ್ತೆನ್ನುವುದನ್ನು ಆಳುಪರ ಕಾಲದ ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ಪ್ರಾಚೀನ ಕಾಲದಿಂದಲೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಳ್ವಿಕೆ ನಡೆಸಿದ ಆಳುಪರು ಸುಮಾರು ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಪ್ರಭುತ್ವವನ್ನು ನಡೆಸಿದ್ದರು. ತುಳುನಾಡಿನ ಉದ್ದಕ್ಕೂ ಕಂಡು ಬರುವ ನೂರಾರು ಶಿವ ದೇವಾಲಯಗಳು ಇಂದಿಗೂ ತಮ್ಮ ಪ್ರಭಾವವನ್ನು ಜನ ಸಾಮಾನ್ಯರ ಮೇಲೆ ಬೀರುತ್ತಿರುವುದನ್ನು ಗಮನಿಸಬಹುದು.

ಚೌಟರ ಕೈಫಿಯತ್ತಿನಲ್ಲಿ ತಿರುಮಲರಾಯ ಚೌಟ ಭಕ್ತಿಯಿಂದ ಸೋಮೇಶ್ವರ ದೇವರನ್ನು ಪೂಜಿಸುತ್ತಾನೆ. ದೇವರು ಅವನಿಗೆ ಕನಸಿನಲ್ಲಿ ಗೋಚರಿಸಿದನು. ಮುಂದೆ ಅವನ ದಾರಿದ್ರ್ಯಾವಸ್ಥೆ ನೀಗುವಂತೆ ಅವನಿಗೆ ಭೂಮಿಯಡಿಯಲ್ಲಿದ್ದ ದ್ರವ್ಯ ಲಭ್ಯಗುತ್ತದೆ. ಮುಂದೆ ಇದೇ ವಂಶದ ಭೋಜರಾಜರಾಯ ಚೌಟ ವಿಜಯನಗರಕ್ಕೆ ಹೋಗಿ ರಾಯನ ದರ್ಶನವಾಗದೆ ಖಿನ್ನರಾಗಿರಲು, ಅವನ ಕನಸಿನಲ್ಲಿ ಬ್ರಹ್ಮಚಾರಿವೇಷದಲ್ಲಿ ಸುಬ್ಬರಾಯ ಬಂದು 'ನಾನು ರಾಜದರ್ಶನ ಮಾಡಿಸುತ್ತೇವೆ. ವಟವೃಕ್ಷದಡಿಯಲ್ಲಿ ಒಂದು ಮೂರ್ತಿ ನಿನಗೆ ಸಿಗುತ್ತದೆ ಅದಕ್ಕೆ ಪೂಜೆ ಮಾಡಲು ಏರ್ಪಡಿಸುತ್ತಿಯಾ' ಎಂದು ಕೇಳುವುದು, ಮುಂದೆ ಅದರಂತೆ ಆಗುವುದು. ಎಲ್ಲೂರ ದೇವಸ್ಥಾನದ ಕೈಫಿಯತ್ತಿನಲ್ಲಿ ಉಲ್ಲೇಖಿಸಿದ ಹಾಗೆ ಕುಂದ ಹೆಗ್ಗಡೆಗೆ ಮಕ್ಕಳಿರುವುದಿಲ್ಲ ಮತ್ತು ಆತನ ಊರಿನಲ್ಲಿ ಯಾವುದೇ ದೇವಾಲಯವಿಲ್ಲದ ಕಾರಣ ಚಿಕ್ಕಾಯಿ ತಾಯಿ ಬಲ್ಲಾಳರು, ಸಿಂಧು ಬಲ್ಲಾಳರು ಚವುನ ಭಾರ್ಗವನ ಸಂತತಿಯವರ ಅಪ್ಪಣೆಯಂತೆ ಕಾಶಿಗೆ ಹೋಗಿ ವಿಶ್ವನಾಥನನ್ನು ವಿವಿಧ ರೀತಿಯಲ್ಲಿ ಪೂಜಿಸುವುದು ಕೈಫಿಯತ್ತಿನಲ್ಲಿ ಕಂಡುಬರುತ್ತದೆ.

ಒಟ್ಟಿನಲ್ಲಿ ಕೈಫಿಯತ್ತುಗಳಲ್ಲಿ ಕಾಣುವಂತೆ ಪ್ರಾಚೀನ ತುಳುನಾಡಿನಲ್ಲಿ ಶಿವನ ಪ್ರಾಧಾನ್ಯವೇ ಅಧಿಕವೆಂಬಂತೆ ತೋರುತ್ತದೆ. ಉಳ್ಳಾಲದ ಸೋಮನಾಥೇಶ್ವರ, ಎಲ್ಲೂರು ವಿಶ್ವನಾಥ, ಹಾರನಾಡಿನ ಲೋಕನಾಥೇಶ್ವರ, ಇಡೂರ ಮಹಾಲಿಂಗೇಶ್ವರ, ಕಡಬದ ಈಶ್ವರ ಹೀಗೆ ಅನೇಕ ಶಿವ ದೇವಾಲಯಗಳನ್ನು ಕೈಫಿಯತ್ತುಗಳು ಉಲ್ಲೇಖಿಸುತ್ತವೆ. ಮಧ್ವಾಚಾರ್ಯರಿಂದ ಉಡುಪಿಯಲ್ಲಿ ಶ್ರೀಕೃಷ್ಣಾ ಪ್ರತಿಷ್ಠಾಪನೆಯಾದುದು ಮಾತ್ರ ವೈಷ್ಣವ ಪಂಥಕ್ಕೆ ಪ್ರಾಧಾನ್ಯ ಬಂದುದನ್ನು ತೋರಿಸುತ್ತದೆ. ಆದರೂ ಪಂಥದ ಕಾರಣದಿಂದ ದ್ವೇಷ, ಮತ್ಸರ, ವೈಮನಸ್ಯಗಳು ಉಂಟಾದಂತೆ ಎಲ್ಲಿಯೂ ಕಾಣುವುದಿಲ್ಲ. ಅಲ್ಲದೆ ಜೈನ, ವೈದಿಕ ಪಂಥಗಳೊಡನೆ ಇದ್ದಂತಹ ಸಾಮರಸ್ಯ ಹಾಗೂ ಹಾರ್ದಿಕತೆಗೆ ಧರ್ಮಸ್ಥಳದ ಕೈಫಿಯತ್ತು ಒಂದು ಒಳ್ಳೆಯ ಉದಾಹರಣೆಯಾಗಿದೆ.

೩.೧.೨. ಜೈನಧರ್ಮ:

ಹೆಚ್ಚಿನ ಕೈಫಿಯತ್ತುಗಳಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳನ್ನು ಪ್ರತಿಪಾದಿಸುವಾಗ ಅಲ್ಲಿ ಜೈನಧರ್ಮ ಉಲ್ಲೇಖವು ಸ್ಥೂಲವಾಗಿ ಸಿಗುತ್ತದೆ. ಕ್ರಿ. ಶ. ೧ - ೨ನೆಯ ಶತಮಾನದ ಸುಮಾರಿಗೆ ಜೈನ ಧರ್ಮವು ತುಳುನಾಡಿನಲ್ಲಿ ನೆಲೆಸಿತ್ತೆಂದೂ, ಕದಂಬರು ವೈದಿಕ ಮತಾವಲಂಬಿಗಳಾಗಿದ್ದರೂ, ಜೈನಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿ ವೈವಾಹಿಕ ಸಂಬಂಧವನ್ನು ಬೆಳೆಸಿದ್ದರೆಂದೂ, ಕ್ರಿ. ಶ. ೮೯೭ರಲ್ಲಿ ಹಿರಣ್ಯಗರ್ಭ ಅಥವಾ ತುಲಾಪುರುಷ ವಿಕ್ರಮಾದಿತ್ಯ ಸಾಮಂತನು, ಬನವಾಸಿಯ ಕದಂಬ ಕಾಮದೇವನ ಕುಮಾರಿ ಲಕ್ಷ್ಮೀ ದೇವಿಯನ್ನು ಮದುವೆಯಾಗಿದ್ದ ಸಂಗತಿಯನ್ನು ತಿಳಿಸುತ್ತದೆ. (ತುಳುನಾಡಿನ ಜೈನ ಧರ್ಮ - ಡಾ। ಎಸ್. ಡಿ. ಶೆಟ್ಟಿ) ಬಹುತೇಕ ಸ್ಥಳೀಯ ತುಂಡರಸರುಗಳು ಮಾಗಣೆ, ಬೀಡು, ಗುತ್ತು ಮಟ್ಟದ ಅಧಿಕಾರಿಗಳು ಜೈನ ಪರಂಪರೆಗೆ ಸೇರಿದವರಾದ ಕಾರಣ ಸ್ಥಳೀಯ ಆಚರಣೆಯ ಸಂದರ್ಭದಲ್ಲಿ

ಅವರನ್ನು ವಿಶೇಷವಾಗಿ ಕೈಫಿಯತ್ತುಗಳು ಉಲ್ಲೇಖಿಸುತ್ತವೆ. ಉದಾಹರಣೆಗೆ ಬಂಗವಾಡಿಯ ಬಂಗರು, ಮೂಡಬಿದಿರೆಯ ಚೌಟರು, ವೇಣೂರಿನ ಅಜಿಲರು, ಕಾರ್ಕಳದ ಭೈರ ಅರಸರು ಮುಲ್ಕಿಯ ಸಾಮಂತರು ಮೊದಲಾದ ಅರಸರು ತಮ್ಮ ಜೈನ ಶ್ರದ್ಧೆಯ ಜೊತೆ ಜೊತೆಗೆ, ಶೈವ, ವೈಷ್ಣವ ಮತ್ತು ಸ್ಥಳೀಯ ಭೂತಾರಾಧನೆಗಳನ್ನು ಸಾಂದರ್ಭಿಕವಾಗಿ ಅಳವಡಿಸಿಕೊಂಡಿರುವುದರಿಂದ ಪ್ರತಿಯೊಂದು ಕೈಫಿಯತ್ತುಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಜೈನಧರ್ಮದ ಸೂಚನೆಗಳು ಕಂಡುಬರುತ್ತವೆ. ಕೈಫಿಯತ್ತುಗಳ ಹಿನ್ನಲೆಯಿಂದ ವಿಶ್ಲೇಷಿಸಿದರೆ ಅನೇಕ ಸಂದರ್ಭಗಳಲ್ಲಿ ಈ ಅಧಿಕಾರಿಗಳು ಶಿವಾಲಯ, ವೈಷ್ಣವಾಲಯ, ಭೂತ ದೈವಗಳ ಗುಡಿಗಳ ಮೇಲ್ವಿಚಾರಣೆಗಳಲ್ಲಿ ಮುಕ್ತೇಸರರಾಗಿ ನಿಯುಕ್ತರಾಗಿರುವುದು ಕುತೂಹಲದ ಅಂಶವಾಗಿವೆ. ಉದಾಹರಣೆಗೆ ಚೌಟರ ಕೈಫಿಯತ್ತಿನಲ್ಲಿ ಜುಮಾದಿ ದೈವ ಹೇಗೆ ತನ್ನ ಪ್ರಭಾವವನ್ನು ಆ ಅರಸರ ಮೇಲೆ ಬೀರಿತು ಎನ್ನುವ ವಿವರ ತಿಳಿಯುತ್ತದೆ. ಅಜಿಲರ ಕೈಫಿಯತ್ತುಗಳಲ್ಲಿ ಜೈನರ ಅರಸರಾದ ಅಜಿಲರು ದೈವಗಳನ್ನು ಬರಮಾಡಿಕೊಂಡಿರುವ ಸೂಚನೆ ಕೈಫಿಯತ್ತಿನಲ್ಲಿ ದೊರಕುತ್ತದೆ. ಕಾರ್ಕಳದ ಭೈರರಸರ ಕೈಫಿಯತ್ತಿನಲ್ಲಿ ಆ ಸ್ಥಳದ ಕಲುರ್ಟಿ, ಕಲ್ಕುಡ ದೈವಗಳ ಪ್ರಸ್ತಾಪವು ಮೇಲಿಂದ ಮೇಲೆ ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಜೈನ ಧರ್ಮವು ಸಮ್ಯಕ್ ದೃಷ್ಟಿಯನ್ನು ಹೊಂದಿಯೂ ಸಾಮಾಜಿಕ ಸಂದರ್ಭದಲ್ಲಿ ಈ ಎಲ್ಲಾ ದೈವಗಳನ್ನು ಸ್ವೀಕರಿಸಿ ಗೌರವಿಸುವುದರ ಸೂಚನೆಯು ನಮಗೆ ಕಂಡುಬರುತ್ತದೆ. ಇದು ಬಹುಶಃ ಆ ಧರ್ಮದ ಅನೇಕಾಂತವಾದವು ಕಾರಣವಾಗಿರಬಹುದು. ತುಳುನಾಡಿನ ಶ್ರೇಣೀಕೃತ ಸಮಾಜದಲ್ಲಿ ಜೈನ ಧರ್ಮೀಯರು ಎತ್ತರದ ಸ್ಥಾನದಲ್ಲಿ ಇದ್ದುದರಿಂದ ತಮ್ಮ ಅಧಿಕಾರದ ಸ್ಥಿರೀಕರಣ ಮತ್ತು ಎಲ್ಲಾ ವರ್ಗದ ಜನರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಅನಿವಾರ್ಯವಾದ ಕಾರಣ ಈ ರೀತಿಯ ವ್ಯವಸ್ಥೆಯೊಂದು ತುಳುನಾಡಿನಲ್ಲಿ ನಿರ್ಮಾಣವಾಗಿರಬಹುದು. ಇದನ್ನು ಕೈಫಿಯತ್ತಿನಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಜೊತೆಗೆ ಶೈವ, ಜೈನರ ಅನ್ಯೋನ್ಯತೆ ಆಳುಪ ಅರಸರಿಂದ ಮೊದಲುಗೊಂಡು ವೈವಾಹಿಕ ಸಂಬಂಧಗಳು, ಒಡನಾಟ ಇವೆಲ್ಲವೂ ಆ ಎರಡು ಧರ್ಮಗಳ ಪರಸ್ಪರ ಐಕ್ಯತೆ, ಹೊಂದಾಣಿಕೆಗೆ ಕಾರಣವಾಗಿದೆ. ಚೌಟರಸರ ಕೈಫಿಯತ್ತುಗಳನ್ನು ವಿಶ್ಲೇಷಿಸಿದಾಗ ಮಹಾಲಿಂಗೇಶ್ವರ, ಸೋಮನಾಥ ಮುಂತಾದ ಶಿವನ ಬೇರೆ ಬೇರೆ ಹೆಸರುಗಳು ಜನಾರ್ದನ, ವಿಷ್ಣು ಮೊದಲಾದ ವೈಷ್ಣವ ದೇವರುಗಳು ಜೈನ ಅಧಿಕಾರಿಗಳ ವ್ಯವಸ್ಥೆಗೆ ಒಳಪಟ್ಟಿರುವುದನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲ ಈ ಎಲ್ಲಾ ದೇವಾಲಯಗಳ ನಿರ್ಮಾಣ, ಸಂರಕ್ಷಣೆ ಮತ್ತು ನಿರ್ವಹಣೆಗೆ ಅಗತ್ಯವಾದ ಉಪಕರಣಗಳು, ಹೊನ್ನು, ಹಣ, ಭೂದಾನ ಮುಂತಾದವುಗಳನ್ನು ನೀಡಿದ ಸೂಚನೆಗಳು ಅಲ್ಲಿಯ ಐತಿಹ್ಯದ ಮೂಲಕ ಸ್ಪಷ್ಟವಾಗುತ್ತದೆ.

೩. ೧. ೩. ವೈದಿಕ (ವಿಷ್ಣು) ಧರ್ಮ:

ಹಿಂದೂ ಧರ್ಮದ ಪ್ರಮುಖ ಶಾಖೆಗಳಲ್ಲಿ ವಿಷ್ಣು ಪಾರಮ್ಯವನ್ನು ನಂಬುವ ವೈಷ್ಣವ ಪಂಥವೂ ಒಂದಾಗಿದೆ. "ತುಳುನಾಡಿನಲ್ಲಿ ೧೨ನೇ ಶತಮಾನದ ಸುಮಾರಿಗೆ ಮಧ್ವಚಾರ್ಯರಿಂದ ಪ್ರತಿಪಾದಿತವಾದ ದ್ವೈತ ಸಿದ್ಧಾಂತವು ವಿಷ್ಣುಪಾರಮ್ಯವನ್ನು ಸಾರುವ ಮಧ್ವ ಪಂಥವಾಗಿ ಜನಪ್ರಿಯತೆಯನ್ನು ಗಳಿಸಿತು" ಕೃಷ್ಣ, ಜನಾರ್ದನ, ಲಕ್ಷ್ಮೀನಾರಾಯಣ, ಅನಂತ ಪದ್ಮನಾಭ, ವಿಷ್ಣುಮೂರ್ತಿಗಳಿಗೆ ಇಲ್ಲಿ ವಿಶೇಷ ಪೂಜೆ ಸಲ್ಲುತದೆ. ಹಯಗ್ರೀವನ ರೂಪದಲ್ಲಿ ವಿಷ್ಣುವನ್ನು ಪೂಜಿಸುವ ವಿಶಿಷ್ಟ ಕ್ರಮವೂ ಉಡುಪಿಯಲ್ಲಿ ಕಂಡುಬರುತ್ತದೆ.

ಸೋದೆ ಮಠದ ವಾದಿರಾಜ ಸ್ವಾಮಿಗಳು ಈ ರೂಪದ ಆರಾಧನೆಯನ್ನು ಪ್ರಚುರಪಡಿಸಿದರೆಂದು ಸೋದೆ ಮಠದ ಕೈಫಿಯತ್ತಿನಿಂದ ತಿಳಿದು ಬರುತ್ತದೆ. ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಮಧ್ವಚಾರ್ಯರ ಪ್ರವೇಶದ ಅನಂತರ ಉಡುಪಿಯು ವೈಷ್ಣವ ಪಂಥದ ಮುಖ್ಯ ಕೇಂದ್ರವಾಗಿ ಅಭಿವೃದ್ಧಿ ಹೊಂದಿತು. ಅಷ್ಟಮಠಗಳೂ ಅಲ್ಲಿ ಅಸ್ತಿತ್ವಕ್ಕೆ ಬಂದವು. ಹಂಚಿಹೋಗಿದ್ದ ವೈಷ್ಣವರನ್ನು ಸಂಘಟಿಸಿ ಪ್ರತ್ಯೇಕ ಪಂಥವೊಂದನ್ನು ರೂಪಿಸಲು ಮಧ್ವಾಚಾರ್ಯರು ಪ್ರಯತ್ನ ಪಟ್ಟದನ್ನು ಕೈಫಿಯತ್ತಿನಲ್ಲಿ ಗೋಚರಿಸುತ್ತದೆ.

ಕೈಫಿಯತ್ತಿನಲ್ಲಿ ಕಂಡುಬರುವ ಸ್ಥಳಪುರಾಣಾದಿಗಳನ್ನು ಗಮನಿಸಿದರೆ, ವೈದಿಕ ಧರ್ಮಒಂದು ಕಡೆಯಿಂದ ತನ್ನ ಪ್ರಭಾವವನ್ನು ಬೀರುತ್ತಿರುವಂತೆ ವಿವಿಧ ದೇವಾಲಯಗಳ ನಿರ್ಮಾಣವಾಗುತ್ತ, ಅದಕ್ಕೆ ಸಂಬಂಧಿಸಿದಂತೆ ರಂಜಕವಾದ ಕಥೆಗಳ ಪ್ರಸರಣವೂ ನಡೆಯುತ್ತದೆ. ಯಾವ ಕಡೆಯಲ್ಲಿಯೋ ನಡೆದಿರಬಹುದಾದ ಮೂಲ ಕಥೆಯೆಲ್ಲ ಇಲ್ಲಿಯೇ ನಡೆಯುತ್ತೆಂದು ಹೇಳುವುದು ಕಂಡುಬರುತ್ತದೆ. ಹೀಗೆ ಭಾರತದ ಪಾಂಡವರು, ರಾಮಾಯಣದ ರಾಮ ಮುಂತಾದವರೆಲ್ಲ ಕೈಫಿಯತ್ತುಗಳನ್ನು ಬರೆಸಿದ ದಕ್ಷಿಣಕನ್ನಡದ ನೆಲದಲ್ಲಿಯೇ ನಡೆದಾಡುವಂತೆ ಗೋಚರಿಸುತ್ತದೆ.

ಒಟ್ಟಿನಲ್ಲಿ ಕೈಫಿಯತ್ತಿನಿಂದ ತಿಳಿಯುವಂತೆ ತುಳುನಾಡಿನ ಸಂಸ್ಕೃತಿಯಲ್ಲಿ ಶೈವ, ಜೈನ, ವೈಷ್ಣವ ಧರ್ಮಗಳು, ತುಳುವರ ಬದುಕಿನಲ್ಲಿ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ಈ ಧರ್ಮಗಳೊಳಗೆ ಎಲ್ಲಿಯೂ ಘರ್ಷಣೆ ನಡೆದ ಉಲ್ಲೇಖಗಳು ಕಂಡುಬರುವುದಿಲ್ಲ. ಪರಸ್ಪರ ಪ್ರೀತಿ, ವಿಶ್ವಾಸ, ಸಹಿಷ್ಣುತೆ ಮತ್ತು ಐಕ್ಯತೆಯ ತಳಹದಿಯ ಮೇಲೆ ತುಳುನಾಡಿನ ಧರ್ಮವು ಸುಂದರವಾಗಿ ರೂಪುಗೊಂಡಿದೆ. ಕುಂದಾಪೂರೆಯ ಕೈಫಿಯತ್ತು ಇಲ್ಲಿನ ಶೈವ, ಜೈನ ಮತ್ತು ವೈಷ್ಣವ ಪಂಥಗಳೊಡನೆ ಇದ್ದ ಸಾಮರಸ್ಯ ಹಾಗೂ ಬಾಂಧವ್ಯವನ್ನು ಸೂಚಿಸುತ್ತದೆ.

೩. ೧. ೪. ಭೂತರಾಧನೆ

ತುಳುನಾಡಿನ ಪ್ರಾಚೀನ ಆರಾಧನೆಗಳಲ್ಲಿ ಭೂತಾರಾಧನೆಯೂ ಒಂದು. ಇದನ್ನು ವಿಶೇಷವಾಗಿ ಕೆಳವರ್ಗದವರಾದ ಬಂಟರು, ಶೆಟ್ಟರು, ಗೌಡರು, ಬಿಲ್ಲವರು, ಮಲೆಕುಡಿಯರು ಹೀಗೆ ಬೇರೆ ಬೇರೆ ವರ್ಗದ ಜನರು ಅತ್ಯಂತ ಭಕ್ತಿಯಿಂದ ಆರಾಧಿಸಿಕೊಂಡು ಬರುತ್ತಿರುವುದನ್ನು ನಾವು ಕಾಣುತ್ತೇವೆ. ಇಲ್ಲಿಯ ಜನರಿಗೆ ಭೂತಗಳು ಒಂದು ದೈವಿಕ ಶಕ್ತಿಯಾಗಿದೆ. ನಿಗದಿ ಮಾಡಿದ ಕಾಲದ ಮತ್ತು ಅವಧಿಯಲ್ಲಿ ಅಲೌಕಿಕವಾದ ಆವರಣವನ್ನು ನಿರ್ಮಿಸಿಕೊಂಡು ಅನೇಕ ಭೂತಗಳನ್ನು ಪೂಜಿಸುವುದನ್ನು ನಾವು ಕಾಣುತ್ತೇವೆ. ಈ ಆರಾಧನೆಯು ಯಾವುದೇ ಒಂದು ನಿರ್ದಿಷ್ಟ ಪ್ರದೇಶಕ್ಕೆ ಅಥವಾ ಒಂದು ಜಾತಿಯ ಜನರಿಗೆ ಮಾತ್ರ ಸೀಮಿತವಾದುದಲ್ಲ. ತುಳುನಾಡಿನಲ್ಲಿ ವಾಸಿಸುವ ಎಲ್ಲಾ ವರ್ಗದವರಿಗೂ ಇದು ಅನ್ವಯಿಸುತ್ತದೆ. ಅವರು ಒಂದಿಲ್ಲೊಂದು ರೀತಿಯಲ್ಲಿ ಸೇರಿಕೊಂಡು ಸಾರ್ವತ್ರಿಕವಾಗಿ ಇದನ್ನು ಆಚರಿಸುತ್ತಾ ಬಂದಿದ್ದಾರೆ. ಪ್ರಾಚೀನ ಕಾಲದ ತುಳುನಾಡಿನ ಭೌಗೋಳಿಕ ಪರಿಸ್ಥಿತಿ, ಪ್ರಾಕೃತಿಕ ವಿಕೋಪಗಳು, ಹುಟ್ಟು ಮತ್ತು ಸಾವಿನ ಆಚೆಯ ಜಗತ್ತಿನ ಕುರಿತಾದ ನಂಬಿಕೆ, ಸತ್ತವರನ್ನು ಮತ್ತೆ ಬರಮಾಡಿಕೊಂಡು ನೋಡುವ ಪಿತೃಪೂಜೆಯ ಬಯಕೆ, ದುಷ್ಟಪ್ರಾಣಿಗಳ ಬಗೆಗಿನ ಭಯ, ಅದೇ ಭಯದಿಂದ ಹುಟ್ಟಿಕೊಂಡಿರುವ ಅರಾಧನೆಯ ಮನೋಭಾವ ಅಸಮಾನ್ಯವಾದ ರೀತಿಯಲ್ಲಿ ಬದುಕಿನ ವ್ಯಕ್ತಿಗಳು ಆಕಸ್ಮಿಕವೂ ಅಸಹಜವೂ ಆದ ಸಾವನ್ನು ಹೊಂದಿದಾಗ

ಅಂಥವರನ್ನು ಬರಮಾಡಿಕೊಂಡು ನಡೆಸುವ ವೀರರಾಧನೆ. ಇವೆಲ್ಲವೂ ಭೂತಾರಾಧನೆಯ ಹುಟ್ಟಿಗೂ ಕಾರಣವಾಯಿತ್ತೆಂದು ಅಭಿಪ್ರಾಯ ಪಡುತ್ತಾರೆ. (ತುಳುನಾಡಿನ ಜೈನಧರ್ಮ - ಡಾ। ಎಸ್. ಡಿ. ಶೆಟ್ಟಿ)

ತುಳುನಾಡಿನ ಜನಜೀವನದ ಮೇಲೆ ಭೂತರಾಧನೆ ಬೀರಿದಷ್ಟು ಪ್ರಭಾವ ಇತರ ಯಾವುದೇ ಪಂಥಗಳು ಬೀರಲಿಲ್ಲ ಎಂದೇ ಹೇಳಬಹುದು. ಭೂತಗಳನ್ನು ಆರಾಧಿಸಿಕೊಂಡು, ನಂಬಿಕೊಂಡು ಬಂದ ಇಲ್ಲಿಯ ಜನರು ಅವುಗಳಿಗೆ ವರ್ಷಕ್ಕೊಮ್ಮೆ ಪರ್ವ ಮಾಡುವುದು, ನಡಾವಳಿ ನಡೆಸುವುದು, ಭೂತಕೋಲ ಮತ್ತು ನೇಮಗಳನ್ನು ಕೊಡಿಸುವುದು ಇಂದಿಗೂ ದ. ಕ. ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಸಂಗತಿಗಳಾಗಿವೆ.

ಕೈಫಿಯತ್ತಿನಲ್ಲಿಯೂ ಇದು ಗೋಚರಿಸುತ್ತದೆ. ಜುಮಾದಿ, ರೇವಂತ, ಧೂಮಾವತಿ, ದೈವಂತೆ ದೇವತೆ ಮೊದಲಾದ ಭೂತಗಳ ಉಲ್ಲೇಖಗಳು ಕಂಡುಬರುತ್ತವೆ. ಇವುಗಳು ಆಯಾ ಅರಸರ ಪ್ರದೇಶಗಳಿಗೆ ಬಂದು ತಮ್ಮ ಮಹಿಮೆಯನ್ನು ಪ್ರದರ್ಶಿಸಿ ಅಲ್ಲಿಯ ಜನರಿಂದ ಗುಡಿಯನ್ನು ಕಟ್ಟಿಸಿಕೊಂಡು ಪೂಜೆ, ಆರಾಧನೆ ಮುಂತಾದ ಗೌರವಗಳನ್ನು ಪಡೆಯುವುದನ್ನು ಕಾಣುತ್ತೇವೆ. ಹೀಗೆ ತುಳುನಾಡಿನ ಜನರು ಪ್ರಾಚೀನ ಕಾಲದಿಂದಲೂ ಭೂತಾರಾಧನೆ ಮಾಡುತ್ತಿದ್ದರೆಂಬುದನ್ನು ಕೈಫಿಯತ್ತು ಸ್ಪಷ್ಟಪಡಿಸುತ್ತದೆ.

೩. ೨. ಮಠ ಮಾನ್ಯಗಳು

ಕೈಫಿಯತ್ತುಗಳಲ್ಲಿ ಮಠಮಾನ್ಯಗಳ, ಉಲ್ಲೇಖಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕೆಲವೆಡೆ ಮಠಗಳ ಉಲ್ಲೇಖ ಪರೋಕ್ಷವಾಗಿ ನಮೂದಿತವಾಗಿದ್ದರೆ, ಇನ್ನು ಕೆಲವೆಡೆ ಮಠಗಳ ಬಗ್ಗೆ ಸ್ವತಂತ್ರವಾದ ಕೈಫಿಯತ್ತುಗಳು ರಚನೆಗೊಂಡಿವೆ ಉದಾಹರಣೆಗೆ ಉಡುಪಿಯ ಅಷ್ಟಮಠಗಳಾದ ಪುತ್ತಿಗೆ ಮಠ, ಕೃಷ್ಣಾಪುರ ಮಠ, ಸೋದೆಮಠ, ಅದಮಾರು ಮಠ, ಪಲಿಮಾರು ಮಠ, ಶಿರೂರು ಮಠ, ಕಾಣೂರು ಮಠ, ಮತ್ತು ಪೇಜಾವರ ಮಠ, ಈ ಎಂಟು ಮಠಗಳ ಕೈಫಿಯತ್ತುಗಳು ಹೇಳುವಂತೆ ಆಯಾ ಮಠಗಳ ನಿರ್ಮಾಣ, ಅಲ್ಲಿಯ ಮುಖ್ಯಸ್ಥರು ಮಠ ಸ್ಥಾಪನೆಗೆ ನೀಡಿದ ಹಿನ್ನೆಲೆಯ ಐತಿಹ್ಯಗಳು ಇತ್ಯಾದಿ ಮಾಹಿತಿ ಕಂಡುಬರುತ್ತವೆ. ಕೆಲವು ಸಂದರ್ಭದಲ್ಲಿ ಆ ಮಠಗಳಲ್ಲಿ ನಡೆಯುವ ಪೂಜಾದಿ ವಿವರಗಳು ಮಠದ ಆದಾಯಗಳು, ಮಠದಲ್ಲಿರುವ ಚರ-ಸ್ಥಿರ ವಸ್ತುಗಳು ಇವುಗಳ ಬಗ್ಗೆಯೂ ವಿವರಗಳೂ ದೊರಕುತ್ತವೆ. ಹೀಗೆ ಕೈಫಿಯತ್ತುಗಳು ವಿವರಿಸಿದ ಸ್ಥೂಲ ಪರಿಚಯವನ್ನು ನಾವು ನೋಡಬಹುದು.

ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲೂಕು ಮತ್ತು ತಾಲೂಕಿನ ಮುಖ್ಯ ಊರು. ಇದು ಉತ್ತರದಲ್ಲಿ ಕುಂದಾಪುರ, ದಕ್ಷಿಣದಲ್ಲಿ ಮಂಗಳೂರು ಪೂರ್ವದಲ್ಲಿ ಕಾರ್ಕಳ ತಾಲೂಕುಗಳಿಂದಲೂ ಪಶ್ಚಿಮದಿಂದ ಅರಬ್ಬೀ ಸಮುದ್ರದಿಂದಲೂ ಸುತ್ತುವರಿದಿದೆ.

ಇಲ್ಲಿನ ಕೃಷ್ಣದೇವಾಲಯ ಅಖಿಲ ಭಾರತದಲ್ಲೇ ಸಾಕಷ್ಟು ಖ್ಯಾತಿ ಪಡೆದಿದೆ. ಶ್ರೀ ಕೃಷ್ಣ ಮಠವೆಂದು ಕರೆಯಲ್ಪಡುವ ಈ ದೇವಾಲಯ ಅನಂತೇಶ್ವರ ದೇವಾಲಯದ ಪರಿಸರದಲ್ಲಿ ಈಶಾನ್ಯ ದಿಕ್ಕಿಗಿದೆ. ಈ ಮಠದ ರಚನೆ ಸರಳವಾಗಿದ್ದರೂ ಇದೊಂದು ಆಯತಾಕಾರದ ಕಟ್ಟಡವಾಗಿದ್ದು ಉತ್ತರ ಭಾಗದಲ್ಲಿ ಒಳಗೆ ಪ್ರವೇಶವಿದ್ದು ಪಶ್ಚಿಮ ಭಾಗದ ಕಿಂಡಿಯಿಂದ (ಕನಕನ ಕಿಂಡಿ) ಶ್ರೀ ಕೃಷ್ಣನ ದರ್ಶನವನ್ನು ಮಾಡುವ ವ್ಯವಸ್ಥೆಯಿಂದ ಕೂಡಿದೆ. ಈ ಮೂರ್ತಿಯನ್ನು ಮಧ್ವಾಚಾರ್ಯರು ೧೩ನೇ ಶತಮಾನದ ಅಂತ್ಯಭಾಗದಲ್ಲಿ ಪ್ರತಿಷ್ಠಾಪಿಸಿದರು.

ಈಗಾಗಲೆ ತಿಳಿಸಿದಂತೆ ಉಡುಪಿಯಲ್ಲಿ ಅಷ್ಟಮಠಗಳಿವೆ. ಈ ಮಠಗಳ ಯತಿಗಳು ಶ್ರೀ ಕೃಷ್ಣನ ಪೂಜೆಯನ್ನು ಪರ್ಯಾಯ ಕ್ರಮದಲ್ಲಿ ಎರಡೆರಡು ವರ್ಷಗಳ ತನಕ ಮಾಡುತ್ತಾರೆ. ಅಷ್ಟಯತಿಗಳ

ಪರಂಪರೆಯನ್ನು ಸ್ಥಾಪಿಸಿದುದು ಶ್ರೀ ಮಧ್ವಾಚಾರ್ಯರಾದರೂ ಪರ್ಯಾಯ ಕ್ರಮವನ್ನೂ ಅನುಷ್ಠಾನಕ್ಕೆ ತಂದುದು ಸೋದೆ ಮಠದ ಯತಿವರ್ಯರಾದ ಶ್ರೀ ವಾದಿರಾಜರು.

ಅನುಕ್ರಮವಾಗಿ ಒಂದು ಮಠದ ಸ್ವಾಮಿಗಳಿಂದ ಇನ್ನೊಂದು ಮಠದ ಸ್ವಾಮಿಗಳು ಶ್ರೀ ಕೃಷ್ಣಮಠದ ಪೂಜಾಧಿಕಾರ ವಹಿಸಿಕೊಳ್ಳುವ ಸಮಾರಂಭವೇ ಪರ್ಯಾಯ ಮಹೋತ್ಸವ. ಇದು ಉಡುಪಿಯ ಅತ್ಯಂತ ದೊಡ್ಡ ಉತ್ಸವ. ಈ ಸಂದರ್ಭದಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಉಡುಪಿಗೆ ಬರುತ್ತಾರೆ. ಉಡುಪಿಯಲ್ಲಿ ನಡೆಯುವ ಲಕ್ಷದೀಪೋತ್ಸವ, ಮಕರ ಸಂಕ್ರಮಣೋತ್ಸವ, ಶ್ರೀ ಕೃಷ್ಣ ಜಯಂತಿ ಇತರ ಪ್ರಮುಖ ಉತ್ಸಹಗಳು.

೩. ೨. ೧. ಪುತ್ತಿಗೆ ಮಠದ ಕೈಫಿಯತ್ತು

ಪುತ್ತಿಗೆ ಮಠದ ಕೈಫಿಯತ್ತಿನಲ್ಲಿ [2] "ನಮ್ಮ ಉಪೇಂದ್ರ ತೀರ್ಥ ಶ್ರೀಪಾದಂಗಳವರು ಶ್ರೀ ವಿಠಲ ದೇವರ ಪೂಜೆಯನ್ನು ಮಾಡಿಕ್ಕುಂಡು ಕ್ರಮಪ್ರಾಪ್ತವಾದ ಶ್ರೀ ಕೃಷ್ಣ ದೇವರ ಪೂಜಾ ಧರ್ಮಗಳನ್ನು ಮಾಡಿಕ್ಕುಂಡು ಸಭಾಸ್ತ್ರ ಪ್ರವಚನ ಮಾಡುತ್ತ ಮಹಾ ತಪೋನಿಷ್ಟರಾಗಿ ತೀರ್ಥಯಾತ್ರೆಗಳನ್ನು ಮಾಡಿಕ್ಕುಂಡು ಕೃಷ್ಣ ತೀರದಲ್ಲು ಶಕವರುಷ ೧೨೧೧ನೆ ಸರ್ವದಾರಿ ಸಂವತ್ಸರ ಮಾಷ ಶು॥ ೧೨ ಯಲ್ಲು ವೈಕುಂಠಯಾತ್ರೆಯನ್ನು ಮಾಡಿದರು"

ಎಂಬಲ್ಲಿ ಉಪೇಂದ್ರತೀರ್ಥ ಶ್ರೀಪಾದರು ಶ್ರೀ ವಿಠಲ ದೇವರನ್ನು ಭಕ್ತಿಯಿಂದ ನಮಿಸುತ್ತಾ ಶ್ರೀ ದೇವರ ಪೂಜೆಯನ್ನು ಮಾಡಿಕೊಂಡಿದ್ದರು ಎಂದು ತಿಳಿಯುತ್ತದೆ. ಇಲ್ಲಿ ಪುತ್ತಿಗೆ ಮಠದ ಮೊದಲ ಸ್ವಾಮಿಗಳು ಉಪೇಂದ್ರ ತೀರ್ಥರೆಂದು ಅರ್ಥೈಸಬಹುದು. ಇವರ ನಂತರ ಹಲವಾರು ಅವರ ಶಿಷ್ಯರ ಪರಂಪರೆ ಮುಂದುವರಿದು ಅವರ ಕಾರ್ಯಗಳನ್ನು ಕೈಫಿಯತ್ತುಗಳಲ್ಲಿ ವಿವರಿಸುತ್ತವೆ.

[3]"ಅವರ ಶಿಷ್ಯರು ಅಸುರೇಂದ್ರ ತೀರ್ಥ ಶ್ರೀಪಾದಂಗಳವರು ಯಾತ್ರಾ ನಿಮಿತ ಕಾಸಿಗೆ ಹೊರಟು ಹೋಗುವಾಗ್ಯೆ ನಾಗಪುರಿಯಲ್ಲು ನದಿ ತೀರದಲ್ಲು ಸಉಮ್ಯ ಸಂವತ್ಸರ ಪಾಲ್ಗುಣ ಶು ೧೨ ಯಲ್ಲು ದೇವರ ಯಾತ್ರೆ ಮಾಡಿದರು ಯಂತ ಉಪೇಂದ್ರ ತೀರ್ಥ ಶ್ರೀಪಾದಂಗಳವರ ಆರಭ್ಯ ಗುರುಗಳು ಪಾರಂಪರ್ಯ ಬರಸಿಕೊಟ್ಟ ಕೈಫಿಯತ್ತು ನಾಮೆ" ಎಂಬುದನ್ನು ನೋಡಿದಾಗ ಇದನ್ನು ಯಾರು ಬರೆಸಿದರು ಎಂಬುದನ್ನು ಈ ಕೈಫಿಯತ್ತಿನಲ್ಲಿ ವಿವರಿಸಲಾಗಿದೆ.

ಪುತ್ತಿಗೆ ಮಠದ ಕೈಫಿಯತ್ತಿನಲ್ಲಿ ಮಠದ ೨೨ ಗುರು ಪರಂಪರೆಯ ಸ್ವಾಮಿಗಳ ಹೆಸರು ಕೈಫಿಯತ್ತಿನಲ್ಲಿ ಉಲ್ಲೇಖಿತವಾಗಿದೆ. ಇದರಲ್ಲಿ ೨೦ನೆಯ ಕುರಿತು ಇವರು ಬಹು ವಿದ್ವಾಂಸ, ಬಹಳ ಸ್ವಾಮಿಗಳಿಗೆ ಪಾಠ ಹೇಳಿಕೊಂಡು, ಅನೇಕ ದೇಶಗಳನ್ನು ಸಂಚಾರ ಮಾಡಿ, ರಾಜರುಗಳಿಂದ ಆನೆ ಮೊದಲಾದುವನ್ನು ಪಡೆದು ರಾಜಾಧಿರಾಜರಿಂದಲೂ ವಿದ್ವಾಂಸರಿಂದಲೂ ಸನ್ಮಾನಿಸರಾದವರು ಎಂದು ಕೈಫಿಯತ್ತು ತಿಳಿಸಿದೆ. ಅಷ್ಟೇ ಅಲ್ಲ ಈ ಮಠದಲ್ಲಿರುವ ೬೮ ಪುಸ್ತಕಗಳ ಪಟ್ಟಿಯನ್ನು ನೀಡುತ್ತದೆ.

೩. ೨. ೨. ಕೃಷ್ಣಾಪುರ ಮಠದ ಕೈಫಿಯತ್ತು

ಕೃಷ್ಣಾಪುರ ಮಠದ ಕೈಫಿಯತ್ತಿನ ವಿವರ ಹೀಗೆ ಪ್ರಾರಂಭವಾಗುತ್ತದೆ . [4]"ನಮ್ಮ ಮೂಲ ಗುರುಗಳು ಮಧ್ವಾಚಾರ್ಯರು ಅವತಾರ ಮಾಡಿದ್ದು" ಎಂಬಲ್ಲಿ ಕೃಷ್ಣಾಪುರ ಮಠ ಮಧ್ವಾಚಾರ್ಯರಿಂದ ಪ್ರಾರಂಭವಾದದ್ದು ಎಂದು ತಿಳಿಯಬಹುದು. ಬದರಿಕಾಶ್ರಮದಿಂದ ಬಂದು ಸಾಲಿಗ್ರಾಮಗಳಲ್ಲಿ ಮಧ್ವವಾಚಾ ಮಠದಲ್ಲಿ ಒಂದು ಮೂರ್ತಿಯನ್ನು, ಸುಬ್ರಹ್ಮಣ್ಯ ಕ್ಷೇತ್ರದಲ್ಲೊಂದು ಮೂರ್ತಿಯನ್ನು ಪ್ರತಿಷ್ಠೆ ಮಾಡಿದರೆಂದು ಕೈಫಿಯತ್ತಿನಲ್ಲಿ

ಉಲ್ಲೇಖವಿದೆ. ಪೂಜಾಕಾರ್ಯಗಳನ್ನು ಪ್ರಸ್ತಾವಿಸುತ್ತಾ ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ಸ್ಥಳಗಳಲ್ಲಿ ಪ್ರಾತಃ ಕಾಲಾದಿ ಪೂಜೆ ಮಾಡುತ್ತಿರುವಾಗ ಮಧ್ವವಾಟಾ ಮಠದಲ್ಲಿ ಮಧ್ಯಾಹ್ನ ಪೂಜೆಯೇ ಘಟಿಸಿದುದರಿಂದ ಅಲ್ಲಿ ಮಾತ್ರ ಮಧ್ಯಾಹ್ನ ಕಾಲದ ಪೂಜೆಯೇ ನಡೆಯುವಂತೆಯೂ, ಉಳಿದೆರಡು ಸ್ಥಳಗಳಲ್ಲಿ ತ್ರಿಕಾಲದಲ್ಲಿಯೂ ಪೂಜೆ ನಡೆಯುವಂತಾಯಿತ್ತೆಂದು ಕೈಫಿಯತ್ತು ವಿವರ ನೀಡುತ್ತದೆ. ಆ ಮೇಲೆ ಆಚಾರ್ಯರು ಬದರೀಕಾಶ್ರಮಕ್ಕೆ ತೆರಳುವ ಸಮಯ ಎಂಟು ಮಂದಿ ಬ್ರಹ್ಮಚಾರಿಗಳಿಗೆ ಮಂತ್ರೋಪದೇಶವನ್ನು ಕೊಟ್ಟು, ಒಬ್ಬೊಬ್ಬರು ಎರಡೆರಡು ವರ್ಷ ಶ್ರೀ ಕೃಷ್ಣನ ಪೂಜಾಕಾರ್ಯಗಳನ್ನೂ ನೆರವೇರಿಸಬೇಕೆಂದೂ, ಶಾಸ್ತ್ರ ಪ್ರವಚನ ಮಾಡುತ್ತಾ ಸಜ್ಜನರನ್ನು ಉದ್ಧರಿಸಿಕೊಂಡಿರಬೇಕೆಂದೂ ಆಜ್ಞಾಪಿಸಿದರೆಂದು ಕೈಫಿಯತ್ತು ತಿಳಿಸಿದೆ.

ಗುರು ಪರಂಪರೆಯಲ್ಲಿ ಮಧ್ವಾಚಾರ್ಯರ ಅನಂತರ ಅವರ ಕರಕಮಲ ಸಂಜಾತರಾದ ಜನಾರ್ದನ ತೀರ್ಥರೆಂದೂ, ಇವರು ಶ್ರೀವತ್ಸಾಂಕರೆಂಬ ಶಿಷ್ಯರನ್ನು ತಮ್ಮ ಸಂಸ್ಥಾನಕ್ಕೆ ಮಾಡಿಕೊಂಡು ಪರ್ಯಾಯ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದ್ದರೆಂದು ಕೈಫಿಯತ್ತಿನಿಂದ ಗೋಚರಿಸುತ್ತದೆ. ಶ್ರೀವತ್ಸಾಂಕರ ಶಿಷ್ಯರಾದ ವಾಗೀಶರು ಸದ್ಧರ್ಮನಿರತರಾಗಿ ಕೃಷ್ಣ ಪೂಜಾಪರಾಯಣರಾಗಿ, ಶಿಷ್ಯರಿಗೆ ಭಾಷ್ಯಾದಿಗಳ ಉಪದೇಶ ಮಾಡಿ, ತೀರ್ಥಯಾತ್ರೆ ಮುಗಿಸಿಕೊಂಡು ವಾರಣಾಸಿಯ ಕ್ಷೇತ್ರವನ್ನು ತಲುಪಿ ಬ್ರಹ್ಮಾವರ್ತದಲ್ಲಿ ಶಾ. ಶ. ೧೩೦೧ ನೇ ಕಾಳಯುಕ್ತಿ ಸಂವತ್ಸರದ ಮಾರ್ಗಶಿರ ಶುದ್ಧ ೯ರಲ್ಲಿ ಗತಿಸಿದರೆಂದೂ ಅನಂತರ ಲೋಕೇಶರು ಗುರುಗಳಾದ ವಿಚಾರವೂ ಮುಂದೆ ಇನ್ನು ಅನೇಕ ಆಚಾರ್ಯರು ಆಗಿ ಹೋದ ವಿವರ ಮತ್ತು ಅವರ ಹೆಸರುಗಳನ್ನು ಕೈಫಿಯತ್ತು ದೃಢಪಡಿಸುತ್ತದೆ.

೩. ೨. ೩. ಸೋದೆ ಮಠದ ಕೈಫಿಯತ್ತು

ಸೋದೆ ಮಠದ ಕೈಫಿಯತ್ತಿನಲ್ಲಿ [5]"ನಮ್ಮ ಮೂಲ ಗುರುಗಳು ಮಧ್ವಾಚಾರ್ಯರು ಅವತಾರ ಮಾಡಿದ್ದು" ಎಂಬಲ್ಲಿಯೂ ಸೋದೆ ಮಠ ಮಧ್ವಾಚಾರ್ಯರ ಮಠವಾಗಿತ್ತು ಎಂಬುವುದನ್ನು ತಿಳಿಯಬಹುದು. ಆಚಾರ್ಯರುಯಿದ್ದು ಆ ಮೇಲೆ ತಾವು ಬದರಿಕಾಶ್ರಮವನ್ನು ಹೋಗುವ ಅಪೇಕ್ಷೆವಂತರಾಗಿ ಶ್ರೀ ಕೃಷ್ಣದೇವರ ಪೂಜಾ ಸ್ವಮತ ಸ್ಥಾಪನಾರ್ಥವಾಗಿ ತಮ್ಮ ಅನುಜರಾದ ವಿಷ್ಣುತೀರ್ಥಾಚಾಯರು ಸಹವಾಗಿ ಅಷ್ಟಬ್ರಹ್ಮಾಚಾರಿಗಳು ಮುಂದೆ ಆ ಮಠವನ್ನು ಮುನ್ನಡೆಸಿಕೊಂಡು ಹೋದರು ಎಂದು ಹೇಳಲಾಗಿದೆ.

[6]"೧೭ನೇಯ ಶ್ರೀವಾದಿರಾಜತೀರ್ಥರು ಪ್ರಾಕು ಆಚಾರ್ಯರು ಕಲ್ಪಿತ ಮಾಡಿದ ಪೂಜಾ ವಿಶೇಷಗಳಲ್ಲಿ ಸಂಕೋಜಿಗಳಾಗುತ್ತ ಬಂದದರಿಂದ ತಾಉ ಶ್ರೀಹಯಗ್ರೀವ ದೇವರ ಉಪಸಕರಾಗಿ ಅಪರೂಕ್ಷಿ ಪರಿಸಿಕೊಂಡವರಾಗಿ ಕಾರಣ ಶ್ರೀ ಮಧ್ವಾಚಾರ್ಯರ ಸಂಕಲ್ಪಾನುಸಾರವಾಗಿ ಶ್ರೀ ದೇವರ ಪೂಜಾ ಧರ್ಮಗಳೆಲೆ ಮೊದಲಾದ ಮರಿಯಾದ ವಿಶೇಷಗಳನ್ನು ವಿಸ್ತಾರ ಮಾಡಿ ಶ್ರೀಕೃಷ್ಣ ದೇವರ ಗರ್ಭಗೃಹ ಜೀರ್ನೋದ್ದಾರ ಮಾಡಿದರು"

ಮಧ್ವಾಚಾರ್ಯರ ಆಸೆಯಂತೆ ಶ್ರೀವಾದಿರಾಜತೀರ್ಥರು ದೇವರ ಪೂಜಾಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನೆರವೇರಿಸಲು ನಾನಾ ರೀತಿಯ ಸುಧಾರಣೆಯನ್ನೂ ಕೈಗೊಂಡರೆಂದು ಕೈಫಿಯತ್ತು ತಿಳಿಸುತ್ತದೆ. ಅವುಗಳೆಂದರೆ ಶ್ರೀ ಕೃಷ್ಣದೇವರ ಗರ್ಭಗುಡಿಯ ಜೀರ್ಣೋದ್ಧಾರ, ಮುಖ್ಯಪ್ರಾಣ, ಗರುಡ ಮುಂತಾದ ದೇವರುಗಳ ಪ್ರತಿಷ್ಠೆ ಶ್ರೀ ಕೃಷ್ಣ ದೇವರಿಗೆ ಕಿರೀಟ, ಕವಚಾದಿ ಆಭರಣಗಳನ್ನು ಮಾಡಿಸಿದರೆಂದು ಕೈಫಿಯತ್ತು

ಉಲ್ಲೇಖಿಸುತ್ತದೆ. ಶ್ರೀವಾದಿ ರಾಜತೀರ್ಥರು ತೀರ್ಥಯಾತ್ರೆ ಮಾಡಿ ಪರಮತಗಳನ್ನೂ ಗೆದ್ದು, ಅರಸರಿಂದ ಹೇರಳವಾಗಿ ಕಾಣಿಕೆಯನ್ನು ಪಡೆದರೆಂದೂ ಕೈಫಿಯತ್ತಿನಿಂದ ತಿಳಿದು ಬರುತ್ತದೆ. ಅವರು ಅನೇಕ ಧಾರ್ಮಿಕ ಗ್ರಂಥಗಳನ್ನೂ, ಟೀಕೆಗಳನ್ನೂ ಮತ್ತು ಹಾಡುಗಳನ್ನು ಬರೆದರೆಂದು ಕೈಫಿಯತ್ತು ದೃಢಪಡಿಸುತ್ತದೆ. ಸೋದಾಪುರದಲ್ಲಿ ಶಿಲಾಮಯ ದೇವಸ್ಥಾನ ನಿರ್ಮಾಣ, ಸರೋವರದ ನಿರ್ಮಾಣ ಇವರ ಕಾಲದಲ್ಲಿಯೇ ನಡೆದವೆಂದು ಸೋದೆ ಮಠದ ಕೈಫಿಯತ್ತಿಂದ ತಿಳಿದು ಬರುತ್ತದೆ.

೩. ೨. ೪. ಅದಮಾರು ಮಠದ ಕೈಫಿಯತ್ತು

ಅದಮಾರು ಮಠದ ಕೈಫಿಯತ್ತಿನಲ್ಲಿ [7] "ಅದಮಾರು ಮಠದ ಕೃಷ್ಣ ಭಟ್ಟನು ಬರಶಿದ ವಂಶಾವಳಿ, ನಮ್ಮ ಮೂಲಗುರು ಮಧ್ವಾಚಾರ್ಯರು ಅವತಾರ ಮಾಡಿದ್ದು ಚತುಸಾಹಶ್ರೆ" ಎಂಬಲ್ಲಿ ಅದಮಾರು ಮಠವೂ ಮಧ್ವಾಚಾರ್ಯರ ಮಠವಾಗಿತು ಎಂಬುವುದನ್ನು ತಿಳಿಯಬಹುದು. ಶ್ರೀ ಕೃಷ್ಣ ದೇವರ ಪ್ರತಿಷ್ಠೆಯನ್ನು ಮಾಡಿ ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲು ಮದ್ಯತಾಳ ಮಠದಲ್ಲುವೊಂದು ಮೂರ್ತಿಯನ್ನು ಪ್ರತಿಷ್ಠೆ ಮಾಡಿ ಸುಬ್ರಹ್ಮಣ್ಯ ಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಠೆ ಮಾಡಿ ಯಿೂ ಮೂರು ಸ್ಥಳದಲ್ಲು ಪ್ರಾತಃ ಕಾಲಾದಿ ಕ್ರಮದಿಂದ ತಲೆ ಸರ್ವದಾ ಪೂಜೆಗಳನ್ನೂ ಮಾಡುತ್ತಾ ಕೆಲಉ ದಿವಸಯಿದ್ದರು. ಎಂದು ಕೈಫಿಯತ್ತುಗಳಿಂದ ಬದರಿಕಾಶ್ರಮದಿಂದ ಶ್ರೀಕೃಷ್ಣನ ದೇವರ ಮೂರ್ತಿ ತಂದು ಪ್ರತಿಷ್ಠೆ ಮಾಡಿದ ಬಗ್ಗೆ ಉಲ್ಲೇಖಗಳಿವೆ.

[8] "ಶ್ರೀ ಮದ್ವಾಚಾರ್ಯರ ಶಿಷ್ಯರಾದ ಯೇತದ್ವತಿರತ್ತ ಅನೇಕ ತುರಿಯಾಶ್ರಮಗಳು ಅನೇಕ ಗ್ರಹಸ್ತಾಶ್ರಮಗಳಲ್ಲು ವಿಶೇಷವಾಗಿ ಪರಮಾನುಗ್ರಹಪಾತ್ರರಾದ ವಿಕುಚಕುಲೋತ್ಪನ್ನರಾದ ಶ್ರೀ ವಿಕ್ರಮ ಪಂಡಿತಾಚಾರ್ಯರು" ಎಂದು ಕೈಫಿಯತ್ತುಗಳಲ್ಲಿ ಉಲ್ಲೇಖಿಸಿರುವುದು ಅದಮಾರು ಮಠದಲ್ಲಿ ಮುಂದೆ ಅಧಿಕಾರ ವಹಿಸಿಕೊಂಡು ಮಠವನ್ನು ಮುಂದುವರೆಸಿಕೊಂಡು ಹೋದ ವ್ಯಕ್ತಿಯನ್ನು ಉಲ್ಲೇಖಿಸಿ ಬರೆಯಲಾಗಿದೆ. ಅದಮಾರು ಮಠದ ಕೈಫಿಯತ್ತನ್ನು ಕೃಷ್ಣ ಭಟ್ಟನು ಬರೆಸಿದ್ದು ಎಂದು ತಿಳಿದು ಬರುತ್ತದೆ.

ಹೀಗೆ ಅದಮಾರು ಮಠದ ಕೈಫಿಯತ್ತಿನಲ್ಲಿ ಸೋದೆ ಮಠದ ಕೈಫಿಯತ್ತಿನಲ್ಲಿ ಹೇಳಿದಂತೆಯೇ ಮಧ್ವಾಚಾರ್ಯರ ವಿಷಯ, ಅವರು ಅಷ್ಟಯತಿಗಳಿಗೂ, ಗೋದಾವರಿ ತೀರದ ದೆಸೆಯಿಂದ ಬಂದ ಪದ್ಮನಾಭತೀರ್ಥರಿಗೆ ರಾಮ ಪ್ರತಿಮೆಯನ್ನು ಕೊಟ್ಟು ದೇಶ ಸಂಚಾರ ಮಾಡುತ್ತಾ ಧರ್ಮೋದ್ಧಾರ, ದ್ರವ್ಯಾರ್ಜನೆ ಮಾಡುತ್ತಾ ಇರಬೇಕೆಂದು ಅಪ್ಪಣೆ ಕೊಟ್ಟ ವಿವರವೂ ಮತ್ತು ಆ ಮಠದ ಗುರು ಪರಂಪರೆಯನ್ನು ಅದಮಾರು ಮಠದ ಕೈಫಿಯತ್ತು ನೀಡುತ್ತದೆ.

೩. ೨. ೫. ಪಲಿಮಾರು ಮಠದ ಕೈಫಿಯತ್ತು

ಪಲಿಮಾರು ಮಠದ ಕೈಫಿಯತ್ತಿನಲ್ಲಿ ಹೀಗೆ ಬರುತ್ತದೆ. [9]"ನೀಲು ಪ್ರತ್ಯೇಕತಃ ಯರಡು ಯರಡು ವರುಷ ನಮ್ಮ ಆಜ್ಞಾನುಸಾರ ತಂತ್ರಸಾರೋಕ್ತ ವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡುತ್ತ ಸ್ವಮತ ಸ್ಥಾಪನೆಮಾಡಿಕೊಂಡು. ಸಜ್ಜನರನ್ನು ಉದ್ದರಿಸಿಕೊಂಡು ಯಿರಿ"ಎನ್ನುವಲ್ಲಿ ಅಷ್ಟಮಠಗಳಲ್ಲಿ ಒಂದೊಂದು ಮಠಗಳು ಎರಡೆರಡು ವರ್ಷಕ್ಕೊಮ್ಮೆ ಶ್ರೀ ಕೃಷ್ಣ ಪೂಜಾ ಕಾರ್ಯಗಳನ್ನು ಮಾಡಲು ಮತ್ತು ಧರ್ಮವನ್ನು ಬಿತ್ತರಿಸಲು ಅಧಿಕಾರ ಕೊಡಲಾಗದೆಂದು ತಿಳಿದುಬರುತ್ತದೆ. ಇಂದು ಶ್ರೀ ಕೃಷ್ಣ ಮಠದ ಪರ್ಯಾಯ ಮಹೋತ್ಸವವನ್ನು ಕಾಣಬಹುದು.

[10]"ನೀಲು ಯೇತನ್ಮತ ಸ್ಥಾಪನೆಯನ್ನು ಮಾಡಿಕೊಂಡು ಸಕಲದೇಶಗಳಲ್ಲಿ ಸಂಚಾರಮಾಡುತ್ತಾ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶದ್ವಾರ ಉದ್ಧಿರಿಸಿಕೊಂಡು ದ್ರವ್ಯಾರ್ಜನಮಾಡಿಕೊಂಡು ಶ್ರೀಕೃಷ್ಣ ಪೂಜೋಪಯುಕ್ತ ದ್ರವ್ಯ ಸಹಾಯವನ್ನು ಮಾಡಿಕ್ಕೊಂಡು ಯಿರಿ" ಎಂದು ಬರೆಸಿದ್ದನ್ನು ನೋಡಬಹುದು.

ಈ ಕೈಫಿಯತ್ತಿನಿಂದ ಪರಿಮಾರು ಮಠಕ್ಕೆ ಬದರಿಕಾಶ್ರಮದಿಂದ ಮೂರ್ತಿಯೊಂದನ್ನು ತಂದು ಪ್ರತಿಷ್ಠೆಮಾಡಿ ಅದನ್ನು ಪೂಜಿಸಿಕೊಂಡು ಬರುತ್ತಿದ್ದರು ಎಂದು ತಿಳಿದುಬರುತ್ತದೆ.

ಪಲಿಮಾರು ಮಠದ ದೇವರ ಬಗ್ಗೆ ಮತ್ತು ಅಲ್ಲಿಯ ಅರಸರು ಯಾವ ರೀತಿ ಈ ಮಠಕ್ಕೆ ಪ್ರೋತ್ಸಾಹ ಕೊಟ್ಟರು ಎಂಬ ಉಲ್ಲೇಖ ಅಂತೆಯೇ ಅರಸರಿಗೂ ಐಶ್ವರ್ಯ ಹೆಚ್ಚಾಗಲೆಂದು ಪ್ರಾರ್ಥಿಸಿದ ಬಗ್ಗೆ ಮತ್ತು ಮಠವನ್ನು ಯಾರ್‍ಯಾರು ಮುನ್ನೆಡೆಸಿಕೊಂಡು ಹೋದರೆಂಬ ಬಗ್ಗೆ ಪಲಿಮಾರು ಮಠದ ಕೈಫಿಯತ್ತಿನಿಂದ ತಿಳಿದುಕೊಳ್ಳಬಹುದು.

೩. ೨. ೬. ಶಿರೂರು ಮಠದ ಕೈಫಿಯತ್ತು

ಶಿರೂರು ಮಠದ ಕೈಫಿಯತ್ತಿನಲ್ಲಿ ಈ ರೀತಿ ಹೇಳಿದ್ದಾರೆ. [11]"ಈ ಕೈಫಿಯತ್ತಿನಲ್ಲಿ ಅಕ್ಷಯ ಸಂವತ್ಸರದ ಜೇಷ್ಟ ಶು. ೬ ಯಲ್ಲು ಶ್ರೀ ವಿಠಲಾರಾದಕ್ಕೆ ಶಿರೂರು ಮಠ ಲಕ್ಷ್ಮಿಮನೋಹರಸ್ವಾಮಿಗಳವರ ಮಠದ ವಿಠಲಾಚಾರು ಬರಸಿಕೊಟ್ಟ ಗುರುಪೇಳಿಕಾ ಕ್ರಮಾ" ಈ ಕೈಫಿಯತ್ತಿನಲ್ಲಿ ಶಿರೂರು ಮಠದ ಬಗ್ಗೆ ಲಕ್ಷ್ಮಿ ಮನೋಹರ ಸ್ವಾಮಿ ಮಠದ ವಿಠಲಾಚಾರು ಬರಸಿಕೊಟ್ಟ ಬಗ್ಗೆ ಉಲ್ಲೇಖವಿದೆ. ವಾಮನತೀರ್ಥಚಾರ್ಯರು ಶ್ರೀ ಮಧ್ವಾಚಾರ್ಯರು ಆಜ್ಞಾನುಸಾರವಾಗಿ ಧನ ವಿಠಲ ದೇವರ ಚರಣಾರವಿಂದವನ್ನು ಸರ್ವದಾ ಪೂಜೆ ಮಾಡುತ್ತಾ ಕಾಲಪ್ರಾಪ್ತ ಶ್ರೀ ಕೃಷ್ಣ ಪರಿಯಾ ಪೂಜೆಯನ್ನು ಚೆನ್ನಾಗಿ ಮಾಡಿಕೊಂಡು ಸಕಲ ಸ್ವಮತಗ್ರಂಥಗಳನ್ನು ಶಿಷ್ಯರಲ್ಲಿ ಪ್ರವಚನ ಪೂರ್ವಕವಾಗಿ ಗಂಗಾನದಿ ಸಕಲ ತೀರ್ಥಗಳು ಕುರುಕ್ಷೇತ್ರಗಳಲ್ಲಿ ಮತ್ಸರವತ್ಸಾರಾರ್ಧ ಪರಿಯಂತ್ರ ಮಹಾತಪೋನಿಷ್ಟರಾಗಿ, ಎಂದು ಕೈಫಿಯತ್ತಿನಲ್ಲಿ ವಾಮನತೀರ್ಥಚಾರ್ಯರು ಮಧ್ವಾಚಾರ್ಯರು ಆಜ್ಞಾನುಸಾರವಾಗಿ ವಿಠಲದೇವರ ಪೂಜೆಯನ್ನು ಮಾಡಿದ ಉಲ್ಲೇಖವಿದೆ.

[12]"ಲಕ್ಷ್ಮಿರಮಣ ತೀರ್ಥ ಶ್ರೀಪಾದಂಗಳವರು ಜಪ ವ್ಯಾಖ್ಯಾನ ಶೀಲರಾಗಿ ಶಮದಮಾಧಿ ಸತ್ವನ್ನರಾಗಿ ಬಹುವಾವರ್ತಿ ಶ್ರೀ ಕೃಷ್ಣ ಪೂಜೆಯನ್ನು ಮಾಡಿ ಶ್ರೀ ಲಕ್ಷ್ಮಿಮನೋಹರಾರ್ಥ ಶ್ರೀ ಪಾದಂಗಳವರಲ್ಲಿ ಸಂಸ್ಥಾನ ಸಾಂಬ್ರಾಜ್ಯವಿಟ್ಟು ಉಡುಪಿ ಕ್ಷೇತ್ರದಲ್ಲಿ ವಿಕಾರಿ ಸಂವತ್ಸರ ಜೇಷ್ಟ ಬಹುಳ ೫ಲ್ಲು ಶ್ರೀ ಕೃಷ್ಣ ಚರಣಾರವಿಂದವನ್ನು ಸೇರಿದರುಯಂತ ಬರದ ವಂಶಾವಳಿ ವಿಠಲಾಚಾರ ರುಜು". ಎಂದು ಕೈಫಿಯತ್ತಿನಲ್ಲಿ ಶಿರೂರು ಮಠದ ವಿವರಣೆಯನ್ನು ನೀಡಲಾಗಿದೆ.

ಒಟ್ಟಿನಲ್ಲಿ ಶಿರೂರು ಮಠದ ಕೈಫಿಯತ್ತಿನಲ್ಲಿ ಹೇಳುವುದಾದರೆ ಹಿಂದಿನ ಮಠದ ಕೈಫಿಯತ್ತುಗಳಲ್ಲಿ ಹೇಳಿರುವಂತೆಯೇ ಮಧ್ವಚಾರ್ಯರಿಂದ ಆರಂಭಿಸಿ ಅವರು ಬದರಿಕಾಶ್ರಮವನ್ನು ಪ್ರವೇಶಿಸುವ ವರೆಗಿನ ವಿವರ ಇಲ್ಲಿಯೂ ಇದೆ. ಹಾಗೆಯೇ ಅಲ್ಲಿಯ ಗುರು ಪರಂಪರೆ, ಅವರು ಗತಿಸಿದ ವರ್ಷ, ಸ್ಥಳ ಇತ್ಯಾದಿ ವಿವರಗಳು ಈ ಕೈಫಿಯತ್ತಿನಿಂದ ಲಭಿಸುತ್ತದೆ.

೩. ೨. ೭. ಕಾಣೂರು ಮಠದ ಕೈಫಿಯತ್ತು

ಕಾಣೂರು ಮಠದ ಕೈಫಿಯತ್ತಿನಲ್ಲಿ ಕಾಣೂರು ಮಠದ ನರಸಿಂಹ ಭಟ್ಟನು ಬರಶಿದ ವಂಶಾವಳಿ ನಮ್ಮ

ಮೂಲಗುರು ಮಧ್ವಾಚಾರ್ಯರು ಅವತಾರ ಮಾಡಿದ್ದು ಕಾಣೂರು ಮಠದ ಬಗ್ಗೆ ನರಸಿಂಹಭಟ್ಟನು ಅದರ ವಂಶಾವಳಿ ಮತ್ತಿತತರ ವಿಚಾರಗಳನ್ನು ಕುರಿತು ಬರೆಸಿದ್ದಾಗಿ ಹೇಳಲಾಗಿದೆ.

ವಿಬುಧಪ್ರಿಯತೀರ್ಥರು ಮಹಾತಪೋನಿಷ್ಟರಾಗಿ ಮಧ್ವ ಶಾಸ್ತ್ರ ಪ್ರವಚರಾಗಿ ಉತ್ತರ ಯಾತ್ರೆ ಪ್ರಯುಕ್ತರಾಗಿ ಸಕಲ ಯಾತ್ರೆಗಳು ಮಾಡಿಕೊಂಡು ಗೋದಾವರಿ ತೀರಕ್ಕೆ ಬಂದು, ತಪೋ ನಿಷ್ಠರಾಗಿ ಕುಳಿತು ಯಿರೋ ವೇಳ್ಯದಲ್ಲಿ ವಜ್ರಸಂಗಮದಲ್ಲು ಗಂಗಾಭಾಗೀರತಿ ಅಮ್ಮನವರು ಶಿರಾರೂಪದಿಂದ ಸಂಗಮ ಮಧ್ಯದಲ್ಲಿರುವ ಆಸನ ಪ್ರಾಣಾಯಮಗಳ ಮಾಡುತ್ತ ಯಿರುತ್ತಿರುವಲ್ಲಿ, ತರ್ಪಣಕಾಲದಲ್ಲು ಅವರ ಕರಕಮಲ ಮಧ್ಯಕ್ಕೆ ಪ್ರಸನ್ನರಾಗಿ ಬಂದು ಯಿರುವ ಭಾಗೀರತಿ ಅಮ್ಮನವರನ್ನು ಸರ್ವಜನರು ನೋಡಿ ಆ ಊರಾಳುವಂತಾ ಅರಸುಗಳ ಬಂದು ನೋಡಿ ಪರಮ ಆಶ್ಚರ್ಯರಾಗಿ ಯಿವರು ಮಹಾದೊಡ್ಡಯತೀಶ್ವರರು ಯಂತ ಸನ್ಮಾನಾದಿ ಸಕಲ ವೈಭವಂಗಳನ್ನು ಕೊಟ್ಟು ಯೀ ಭಾಗೀರತಿ ಅಮ್ಮನವರಿಗೆ ಗೋಮೇಧಿಕದ ಕರಡಿಕೆಯನ್ನು ಕೊಟ್ಟು ಮಹಾಭಕ್ತಿವಂತರಾಗಿ ನಡಕೊಂಡು, ಎಂದು ಕಾಣೂರು ಮಠದ ಬಗ್ಗೆ ವಿವರವಿದೆ.

[13]"ಶ್ರೀ ಹರಿಪಾದವ ಶೇರಿದರು ಅವರ ಶಿಷ್ಯರಾದ ವಾಗೀಶ ತೀರ್ಥರು ಮಹಾವಿದ್ವತ್ತವನ್ನು ಪಡಕೊಂಡು ದಕ್ಷಿಣ ಯಾತ್ರೆ ಮಾಡಿ ಅನೇಕ ಶಿಷ್ಯರಿಗೆ ಸನ್ಮಥ ಗ್ರಂಥಗಳ ಪ್ರವಚನೆಯನ್ನು ಮಾಡಿಸಿ ವಿರಕ್ತರಾಗಿ ಉತ್ತಯಾತ್ರೆ ನಿಮಿತ್ತ ತೆರಳಿ ಹೋದರು" ಎಂದೂ ಕೈಫಿಯತ್ತುಗಳಲ್ಲಿ ಕಾಣೂರು ಮಠ ಹೇಗೆ ಕಾರ್ಯ ನಿರ್ವಹಿಸುತ್ತಿತ್ತೆಂದು ವಿವರಗಳಿವೆ.

೩. ೨. ೮ ಪೇಜಾವರ ಮಠದ ಕೈಫಿಯತ್ತು

ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಮಠದ ಬಗ್ಗೆ ಕೈಫಿಯತ್ತಿನಲ್ಲಿ ಬರುವ ಉಲ್ಲೇಖಗಳು [14]"ಶ್ರೀ ಭೂವರಹಾನೃಸಿಹ್ಮ ಮೂರ್ತಿಗಳನ್ನು ಕೊಟ್ಟು ನೀಉಯೆಂಟು ಮಂದಿ ಬಾಲಯತಿಗಳು ಪ್ರತ್ಯೇಕತ್ತಿತಿಯರಡು ವರುಷ ನಮ್ಮ ಆಜ್ಞಾನುಸಾರ ಸತಂತ್ರ ಸಾರೋಕ್ತ ವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡುತ್ತಯಿರಿವಂತ ಅಪ್ಪಣೆ ಕೊಟ್ಟು ಪದ್ಮನಾಭ ತೀರ್ತರಿಗೆ ಶ್ರೀರಾಮ ಪ್ರಥಮೆಯನ್ನು ಕೊಟ್ಟು ನೀಉ ಯೇತನ್ಮತ ಸ್ಥಾಪನೆ ಮಾಡಿಕೊಂಡು ಸಕಲ ದೇಶಗಳಲ್ಲಿ ಸಂಚಾರ ಮಾಡುತ್ತಾ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶ ದ್ವಾರವುಧರಿಸಿಕೊಂಡು ದ್ರವ್ಯಾರ್ಜನ ಮಾಡಿಕೊಂಡು ಶ್ರೀಕೃಷ್ಣ ಪೂಜೋಪಯುಕ್ತ ಶವ್ಯ ಸಹಾಯವನ್ನು ಮಾಡಿಕೊಂಡು ಯಿರಿಯೆಂತಲು ಅಷ್ಟಯತಿಗಳಿಗೆ ಅಪ್ಪಣೆಕೊಟ್ಟು" ಎಂಬಲ್ಲಿ ಪೇಜಾವರ ಮಠ ಯಾವ ರೀತಿ ಸ್ಥಾಪನೆಯಾಯಿತು. ಹಾಗೂ ಅಲ್ಲಿನ ಆರಾಧ್ಯ ದೇವರ ಬಗ್ಗೆ ಅಲ್ಲಿನ ಭಕ್ತ ವೃಂದರ ಬಗ್ಗೆ ವಿವರಗಳು ಕೈಫಿಯತ್ತುಗಳಿಂದ ವ್ಯಕ್ತವಾಗುತ್ತದೆ.

[15]" ವಿಶ್ವಪತಿತೀರ್ಥರು ಮಹಾಜ್ಞಾನ ವಿಶೇಷರಾಗಿ ಸ್ವಮತ ಪ್ರತಿಪಾದಕರುಗಳಾದ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಮಾಡುತ್ತಾ ಭಾಗೀರತಿ ಯಾತ್ರೆಯನ್ನು ಮಾಡಿ ನಳ ಸಂವತ್ಸರ ವೈಶಾಖ ಶು ೪ಲ್ಲು ವೈಕುಂಠ ಯಾತ್ರೆಯನ್ನು ಮಾಡಿದರು. ಅವರ ಶಿಷ್ಯರು ವಿಶ್ವನಿಧಿತೀರ್ಥರು ಮಹಾವಿರಕ್ತವಂತರಾಗಿ ಮಹಾತಪೋನಿಷ್ಟರಾಗಿ ಪೇಜಾವರದಲ್ಲೂ ವಿಭವ ಸಂವತ್ಸರ ಪಾಲ್ಗುಣ ಶು ೭ರಲ್ಲು ದೇವರ ಯಾತ್ರೆಯನ್ನು ಮಾಡಿದರು".

ಪೇಜಾವರ ಮಠದ ಕೈಫಿಯತ್ತಿನಲ್ಲಿ ಮಧ್ವಾಚಾರ್ಯರು ಅಷ್ಟಯತಿಗಳಿಗೆ ಮಂತ್ರೋಪದೇಶವನ್ನು ಕೊಟ್ಟದ್ದು, ಪರ್ಯಾಯ ಪೂಜಾಕ್ರಮವನ್ನು ನಿಯಮಿಸಿದುದು, ಮತ್ತು ಬದರಿಕಾಶ್ರಮವನ್ನು ಪ್ರವೇಶಿಸಿದುದು

ಕೈಫಿಯತ್ತಿನಿಂದ ತಿಳಿದುಬರುತ್ತದೆ. ಇಲ್ಲಿನ ಅಷ್ಟಯತಿಗಳ ಹೆಸರು, ಅವರಿಗೆ ಮಧ್ವಾಚಾರ್ಯರು ಕೊಟ್ಟ ಮೂರ್ತಿಗಳು ಮುಂತಾದ ವಿವರಗಳು ಕೈಫಿಯತ್ತಿನಿಂದ ದೊರಕುತ್ತದೆ. ಹಾಗೆಯೇ ಮಧ್ವಾಚಾರ್ಯರ ಶಿಷ್ಯರು, ಲಿಕುಚ ಕುಲೋತ್ಪನ್ನರಾದ ಶ್ರೀ ವಿಕ್ರಮ ಪಂಡಿತಾಚಾರ್ಯರು, ಅವರ ಮಗ ನಾರಾಯಣ ಪಂಡಿತಾಚಾರ್ಯರು ಶಂಕರಾಚಾರ್ಯರೆಂಬ ಮೂರು ಮಂದಿ ಗ್ರಂಥಗಳಿಗೆ, ಮಧ್ವವಿಜಯಾದಿ ಕಾವ್ಯಗಳಿಗೆ ವ್ಯಾಖ್ಯಾನ ಬರೆದರೆಂದು ಕೈಫಿಯತ್ತಿನಲ್ಲಿ ಮಾಹಿತಿ ದೊರಕುತ್ತದೆ. ಅಂತೆಯೇ ಈ ಮಠದಲ್ಲಿದ್ದ ೫೪ ಪುಸ್ತಕಗಳ ಪಟ್ಟಿಯನ್ನೂ ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ.

ಉಡುಪಿಯ ಕೇಂದ್ರ ಸ್ಥಾನ ಹಾಗೂ ಆಕರ್ಷಣೆಯ ಕೇಂದ್ರ ಇಲ್ಲಿಯ ರಥಬೀದಿ. ಇಲ್ಲಿ ಶ್ರೀ ಮಧ್ವಾಚಾರ್ಯರಿಂದ ರಚಿಸಲ್ಪಟ್ಟ ಅಷ್ಟ ಮಠಗಳಿವೆ. ಶ್ರೀ ಕೃಷ್ಣ ಮಂದಿರದ ದಕ್ಷಿಣ ಮಹಾದ್ವಾರದಿಂದ ಹೊರಗೆ ಬಂದಾಗ ನಮಗೆದುರಾಗುವುದು ಮೂಡುದೇವ ಚಂದ್ರಮೌಳೀಶ್ವರ ದೇವಸ್ಥಾನ, ಎಡಕ್ಕೆ ಹೊರಳಿ ಮುಂದೆ ನಡೆದರೆ ಎಡಭಾಗದಲ್ಲಿ ಮಧ್ವಸರೋವರ ಮತ್ತು ಎದುರಿಗೆ ಕಾಣಿಯೂರು ಮಠವನ್ನೂ ಕಾಣುತ್ತೇವೆ. ಇಲ್ಲಿ ದಕ್ಷಿಣ ಮುಖವಾಗಿರುವ ರಥಬೀದಿಯಲ್ಲಿ ಮುಂದೆ ಸಾಗಿದರೆ ಆಗ್ನೇಯ ಮೂಲೆಯಲ್ಲಿ ಉತ್ತರಾಭಿಮುಖವಾಗಿರುವ ಸೋದೆ ಶ್ರೀ ವಾದಿರಾಜ ಮಠ ಮತ್ತು ಅದರ ಎಡಭಾಗದಲ್ಲಿರುವ ಪುತ್ತಿಗೆ ಮಠಗಳನ್ನು ನೋಡಬಹುದು. ಪೂರ್ವ ಪಶ್ಚಿಮವಾಗಿರುವ ರಥಬೀದಿಯ ಮುಂದುವರಿದ ಭಾಗವು ಈಗ ಬಹಳ ವಿಶಾಲವಾಗಿದ್ದು ಸುಂದರವಾದ ನೋಟವನ್ನು ಹೊಂದಿದೆ. ರಥೋತ್ಸವಕ್ಕೆ ಸಂಬಂಧಪಟ್ಟ ಎಲ್ಲ ಮುಖ್ಯ ಕಾರ್ಯಕ್ರಮಗಳ ಆಕರ್ಷಣೀಯ ನೋಟ ಪ್ರೇಕ್ಷಕರಿಗೆ ಇಲ್ಲಿ ದೊರೆಯುತ್ತದೆ.

ರಥಬೀದಿಯ ನೈರುತ್ಯಭಾಗದಲ್ಲಿ ಉತ್ತರಾಭಿಮುಖವಾಗಿ ಅದಮಾರು ಮಠ ಮತ್ತು ಪೂರ್ವಾಭಿಮುಖವಾಗಿ ಪೇಜಾವರ ಮಠಗಳಿವೆ. ದಕ್ಷಿಣ ದಿಕ್ಕಿನ ರಥಬೀದಿಯಲ್ಲಿ ಉತ್ತರಾಭಿಮುಖವಾಗಿ ಸಾಗಿದರೆ, ಪೂರ್ವಾಭಿಮುಖವಾಗಿರುವ ಕೃಷ್ಣಾಪುರ ಮತ್ತು ಶಿರೂರು ಮಠಗಳನ್ನು ಕಾಣಬಹುದು.

'ಸಂಪ್ರದಾಯ ಪದ್ಧತಿ' ಎಂಬ ಗ್ರಂಥದ ಪ್ರಕಾರ ಆಚಾರ್ಯ ಮಧ್ವರು ಕಣ್ವತೀರ್ಥದಲ್ಲಿ 'ಚಾತುರ್ಮಾಸ್ಯ' ದೀಕ್ಷೆಯಲ್ಲಿದ್ದಾಗ ಒಂದೊಂದು ಗುಂಪಿನಲ್ಲೂ ಇಬ್ಬಿಬ್ಬರು ಯತಿಗಳು ಇರುವಂತೆ ತಮ್ಮ ಎಂಟು ಜನ ಶಿಷ್ಯರನ್ನೂ ನಾಲ್ಕು ಗುಂಪುಗಳನ್ನಾಗಿ ಮಾಡಿದರು. ಈ ವರ್ಗೀಕರಣ ಈ ರೀತಿ ಇದೆ.

೧. ಪಲಿಮಾರು ಮತ್ತು ಅದಮಾರು

೨. ಕೃಷ್ಣಾಪುರ ಮತ್ತು ಪುತ್ತಿಗೆ

೩. ಶೀರೂರು ಮತ್ತು ಕುಂಬಾಸಿ

೪. ಕಾಣಿಯೂರು ಮತ್ತು ಪೇಜಾವರ

ಶ್ರೀ ಹೃಷೀಕೇಶತೀರ್ಥರು ಪಲಿಮಾರು ಮಠದ ಮೂಲಯತಿಗಳು ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಈ ಮಠದ ಪಟ್ಟದ ದೇವರು. ಪಲಿಮಾರಿನಲ್ಲಿ ಮೂಲ ಮಠವಿದೆ. ಆ ಕಾರಣದಿಂದ ಇದಕ್ಕೆ ಪಲಿಮಾರು ಮಠ ಎಂಬ ಹೆಸರು. ಮಧ್ವಪರಂಪರೆಯ ಖ್ಯಾತ ವಿದ್ವಾಂಸರಾಗಿದ್ದ ಈ ಮಠದ ಶ್ರೀ ವಿದ್ಯಾಮಾನ್ಯ ತೀರ್ಥರು ಕ್ರಿ. ಶ. ೨೦೦೦ ದಲ್ಲಿ ವೃಂದಾ ವನಸ್ಥರಾದರು. ಶ್ರೀ ವಿದ್ಯಾಧೀಶತೀರ್ಥರು ಈ ಮಠದ ಈಗಿನ ಯತಿಗಳು.

ಶ್ರೀ ನರಸಿಂಹತೀರ್ಥರು ಅದಮಾರು ಮಠ ಪರಂಪರೆಯ ಮೂಲ ಯತಿಗಳು, ಅದಮಾರಿನಲ್ಲಿ ಮೂಲ ಮಠ ಇದೆ. ಕಾಳಿಯ ಮರ್ದನ ಚತುರ್ಭುಜ ಶ್ರೀ ಕೃಷ್ಣ ಈ ಮಠದ ಪಟ್ಟದ ದೇವರು ಶಿಕ್ಷಣ ಕ್ಷೇತ್ರದಲ್ಲಿ ಈ ಮಠದ ಕೊಡುಗೆ ಅಪಾರ. ವಿಜ್ಞಾನ ಕ್ಷೇತ್ರದಲ್ಲಿ ನಿರಂತರ ಸಂಶೋಧನಾಕಾರ್ಯಕ್ಕೆ ಅನುವುಮಾಡಿಕೊಡುವಂತಹ ಅಪಾರ ವೆಚ್ಚಾದ ಬೃಹತ್ ಯೋಜನೆಯೊಂದು ಬೆಂಗಳೂರಿನಲ್ಲಿ ಸಾಕಾರಗೊಳ್ಳುತ್ತಿದೆ. ಹಿರಿಯ ಯತಿಗಳಾದ ಶ್ರೀ ವಿಬುಧೇಶತೀರ್ಥರ ಮಹಾನ್ ಯೋಜನೆ ಇದು. ಇವರ ಶಿಷ್ಯರಾದ ಶ್ರೀ ವಿಶ್ವಪ್ರಿಯತೀರ್ಥರು ಈ ಮಠದ ಕಿರಿಯ ಯತಿಗಳು.

ಶ್ರೀ ಜನಾರ್ದನ ತೀರ್ಥರು ಕೃಷ್ಣಾಪುರ ಮಠದ ಮೂಲ ಯತಿಗಳು. ಕೃಷ್ಣಾಪುರದಲ್ಲಿ ಮೂಲ ಮಠವಿದೆ. ಕಾಳಿಯಮರ್ದನ ದ್ವಿಭುಜ ಕೃಷ್ಣ ಈ ಮಠದ ಪಟ್ಟದ ದೇವರು. ಶಿಷ್ಯರ ಕೋರಿಕೆಯ ಮೇರೆಗೆ ಆಚಾರ್ಯ ಮಧ್ವರು ಉಗ್ರನರಸಿಂಹನ ವಿಗ್ರಹವನ್ನು ಈ ಮಠಕ್ಕೆ ದಯಪಾಲಿಸಿದ್ದಾರೆ. ಶ್ರೀ ವಿದ್ಯಾಸಾಗರ ತೀರ್ಥರು ಈ ಮಠದ ಈಗಿನ ಪೀಠಾಧಿಪತಿಗಳು.

ಶ್ರೀ ಉಪೇಂದ್ರತೀರ್ಥರು ಪುತ್ತಿಗೆ ಮಠದ ಮೂಲ ಯತಿಗಳು ಹಿರಿಯಡಕದ ಬಳಿಯ ಪುತ್ತಿಗೆಯಲ್ಲಿ ಸ್ವರ್ಣನದಿಯ ದಂಡೆಯ ಮೇಲೆ ಮೂಲ ಮಠ ಇದೆ. ರುಕ್ಮಿಣಿ ಸತ್ಯಭಾಮ ಸಹಿತ ವಿಠಲ ಈ ಮಠದ ಪಟ್ಟದ ದೇವರು ಈ ವಿಠಲನನ್ನು 'ಉಪೇಂದ್ರವಿಠಲ' ಎಂದು ಕರೆಯಲಾಗುತ್ತಿದೆ. ಈ ಮಠದ ಈಗಿನ ಯತಿವರ್ಯರಾದ ಶ್ರೀ ಸುಗುಣೇಂದ್ರ ತೀರ್ಥರು ವಿದೇಶ ಪರ್ಯಟನೆ ಮೂಲಕ ಧರ್ಮಜಾಗೃತ ಕಾರ್ಯ ಕೈಗೊಂಡಿದ್ದಾರೆ. ವಿಶ್ವಧರ್ಮ ಸಂಸತ್ತಿನಲ್ಲಿ ಅತ್ಯಂತ ಪ್ರಭಾವ ಪೂರ್ಣ ಕಾರ್ಯನಿರ್ವಹಿಸಿದ್ದಾರೆ.

ಶಿರೂರು ಮಠದ ಮೂಲ ಯತಿಗಳು ಶ್ರೀ ವಾಮನ ತೀರ್ಥರು ಹಿರಿಯಡಕ ಬಳಿಯ ಶೀರೂರು ಗ್ರಾಮದಲ್ಲಿ ಸ್ವರ್ಣಾನದಿ ದಂಡೆಯ ಮೇಲೆ ಮೂಲ ಮಠ ಇದೆ. ಶ್ರೀ ದೇವಿ, ಭೂದೇವಿ ಸಹಿತವಾದ ವಿಠಲ ಈ ಮಠದ ಪಟ್ಟದ ದೇವರು. ಈ ದೇವರನ್ನು 'ವಾಮನ ವಿಠಲ' ಎಂದು ಕರೆಯಲಾಗುತ್ತಿದೆ. ಶ್ರೀ ಲಕ್ಷ್ಮೀವರ ತೀರ್ಥರ ಪರ್ಯಾಯ ಕಾಲದಲ್ಲಿ ಜನವರಿ ೧೯೯೪ ರಿಂದ ಜವರಿ ೧೯೯೬ ಶ್ರೀ ಕೃಷ್ಣನಿಗೆ ಮಾಡಿದ ೩೦೦ ಅಲಂಕಾರಗಳು ಇತ್ತೀಚಿನ ಇತಿಹಾಸದಲ್ಲೊಂದು ಮೈಲುಗಲ್ಲಾಗಿದೆ!

ಶ್ರೀ ವಿಷ್ಣುತೀರ್ಥರು ಕುಂಭಾಸಿ ಮಠದ ಮೂಲ ಯತಿಗಳು ಪರಶುರಾಮ ಸೃಷ್ಟಿಯ ಕರಾವಳಿಯಲ್ಲಿರುವ ಸಪ್ತ ಮೋಕ್ಷದಾಯಕ ಸ್ಥಳಗಳಲ್ಲಿ ಕುಂಬಾಸಿಯೂ ಒಂದು. ಶ್ರೀ ವಾದಿರಾಜ ಹುಟ್ಟಿದ ಸ್ಥಳ ಹೂವಿನ ಕೆರೆ ಇದರ ಹತ್ತಿರವೇ ಇದೆ. "ಭೂವರಾಹ"ಈ ಮಠದ ಪಟ್ಟದ ದೇವರು. ಶ್ರೀ ವಾದಿರಾಜರು ಈ ಮಠದ ಪೀಠವನ್ನೇರಿದ ಮೇಲೆ ಸೋದೆಯ ರಾಜ ಅರಸಪ್ಪ ನಾಯಕನಿಂದ ಅತಿಶಯವಾಗಿ ಪುರಸ್ಕೃತರಾದರು. ಸುಪ್ರೀತರಾದ ಗುರುಗಳು ಸೋದೆಯಲ್ಲಿ ಭವ್ಯವಾದ ತಮ್ಮ ಮಠವನ್ನು ನಿರ್ಮಾಣ ಮಾಡಿ ಅಂದಿನಿಂದ ತಮ್ಮ ಕುಂಬಾಸಿ ಮಠವನ್ನು 'ಸೋದೆ ಮಠ' ಎಂದು ಮರು ನಾಮಕರಣ ಮಾಡಿದರು.

ಶ್ರೀ ರಾಮತೀರ್ಥರು ಕಾಣಿಯೂರು ಮಠದ ಮೂಲ ಯತಿಗಳು. ಪುತ್ತೂರು ತಾಲೂಕಿನ ಕಾಣಿಯೂರಿನಲ್ಲಿ ಇದರ ಮೂಲ ಮಠ ಇದೆ ಸ್ವಸ್ತಿಕದ ಮೇಲೆ ಆಸೀನನಾದ ಚತುರ್ಭುಜ ಯೋಗನರಸಿಂಹ ಈ ಮಠದ ಪಟ್ಟದ ದೇವರು. ಶ್ರೀ ವಿದ್ಯಾವಾರಿನಿಧಿತೀರ್ಥರು ತಮ್ಮ ಪರ್ಯಾಯದ ಒಂದು ವರ್ಷ ಕಾಲ ಪೂರೈಸುವಷ್ಟರಲ್ಲೇ ವೃಂದಾಪನಸ್ಥರಾದರು ಉಳಿದ ಅವಧಿಯನ್ನು ಅವರ ಶಿಷ್ಯರಾದ ಶ್ರೀ ವಿದ್ಯಾವಲ್ಲಭ ತೀರ್ಥರು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಳಿಸಿದರು.

ಶ್ರೀ ಅಧೋಕ್ಷಜ ತೀರ್ಥರು ಪೇಜಾವರ ಮಠದ ಮೂಲ ಯತಿಗಳು. ಸುರತ್ಕಲ್ ಬಳಿಯ ಪೇಜಾವರದಲ್ಲಿ ಇದರ ಮೂಲ ಮಠವಿದೆ. ಶ್ರೀ ದೇವಿ ಭೂದೇವಿ ಸಹಿತ ವಿಠಲ ಈ ಮಠದ ಪಟ್ಟದ ದೇವರು. ಈ ದೇವರನ್ನು 'ಅಜವಿಠಲ' ಎಂದು ಕರೆಯುತ್ತಾರೆ. ಅಷ್ಟೇ ಅಲ್ಲ, ಮಠವನ್ನು ಪೇಜಾವರ ಅಧೋಕ್ಷಜ ಮಠ ಎಂತಲೂ ಕರೆಯುತ್ತಾರೆ. ಈ ಮಠದ ಈಗಿನ ಹಿರಿಯ ಯತಿಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತಮ್ಮ ತಾವು ನಿರಂತರ ತೊಡಗಿಸಿಕೊಂಡು ದೀನ-ದಲಿತರ ಉದ್ಧಾರ ಕಾರ್ಯವನ್ನು ಅವರದ್ದೇ ಆದ ವಿಶಿಷ್ಟ ರೀತಿಯಲ್ಲಿ ನಡೆಸುತ್ತಾ ಬಂದಿದ್ದಾರೆ. ತಮ್ಮ ನಿರಂತರ ಕಾರ್ಯ ಚಟುವಟಿಕೆಯಿಂದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ದೇಶ-ವಿದೇಶಗಳಲ್ಲಿ ಖ್ಯಾತನಾಮರಾಗಿದ್ದಾರೆ. ಶ್ರೀ ವಿಶ್ವವಿಜಯ ತೀರ್ಥರು ಈ ಮಠದ ಕಿರಿಯ ಯತಿಗಳು.

ಹೀಗೆ ಅಷ್ಟಮಠಗಳ ಬಗ್ಗೆ ಕೈಫಿಯತ್ತು ನೀಡುವ ವಿವರ, ಅಲ್ಲಿಯ ಗುರುಪರಂಪರೆ, ಪರ್ಯಾಯ ಉತ್ಸಾಹ, ದೇವರ ಪ್ರತಿಷ್ಠಾಪನೆ ಮುಂತಾದ ವಿಚಾರಗಳು ಇಂದು ಕೂಡ ವಾಸ್ತವಿಕಗೆ ಹತ್ತಿರವಾದಂತೆ ಕಂಡು ಬರುತ್ತವೆ.

ಕೃಷ್ಣಾಪುರ ಮಠದ ಕೈಫಿಯತ್ತು

ಕೃಷ್ಣಾಪುರ ಮಠದಲ್ಲಿ ನಡೆದು ಬಂದ ಗುರುಪರಂಪರೆ ಕೈಫಿಯತ್ತಿನಲ್ಲಿ ಈ ರೀತಿ ಕೊಟ್ಟಿದೆ.

ಹೆಸರು		ಗತಿಸಿದ ಕಾಲ ಸ್ಥಳಗಳ ವಿವರ
ಲೋಕನಾಥಯತಿಗಳು	:	ಶಾ. ಶ. ಶಿ ೧೩೫೩ ಪ್ರಮಾದೀಚ ಸಂ. ಮಾರ್ಗಶಿರ ೬ ಹರಿದ್ವಾರದಲ್ಲಿ
ಲೋಕಪೂಜ್ಯರು	:	ಶ. ೧೩೮೮ (?) ಕ್ರೋಧನ ಸಂ. ಆಶ್ವೀಜ ಶು. ೪ ರುತುಮತಿ ಘಟ್ಟದಲ್ಲಿ
ವಿದ್ಯಾರಾಜ ಸ್ವಾಮಿಯವರು	:	ಶ. ೧೩೭೯ ಧಾತು ಸಂ. ಕಾರ್ತಿಕ ಶು. ೮ (?)
ವಿಶ್ವಾಧಿರಾಜತೀರ್ಥ ಶ್ರೀಪಾದಂಗಳು	:	ಶ. ೧೩೮೯ ವ್ಯಯ ಸಂ. ಮಾರ್ಗಶಿರ ಪ್ರತೀ ಸಾಲುಗಳು ಒಂದರ ಕೆಳಗೆ ನೇರವಾಗಿರಲಿ. ಶುದ್ಧ ೫ ಜಗನ್ನಾಥದಲ್ಲಿ
ವಿಶ್ವದೀಶತೀರ್ಥ ಶ್ರೀಪಾದಂಗಳು	:	ಶ. ೧೪೦೨ ವಿಕಾರಿ ಸಂ. ಮಾಘ ಶು. ೧೦ (?)
ವಿಶ್ವೇಶ ತೀರ್ಥರು	:	ಶ. ೧೪೧೫ ಪರಿಧಾವಿ ಸಂ. ಆಷಾಢ ಶು. ೩ (?)
ವಿಶ್ವವಂದ್ಯತೀರ್ಥ ಶ್ರೀಪಾದಂಗಳು	:	ಶ. ೧೪೨೬ ರುಧಿರೋದ್ಧಾರಿ ಸಂ. ಶ್ರಾವಣ ಶುದ್ಧ ೬, ಮಣಿಕರ್ಣಿಕಾಘಾಟ್
ವಿಶ್ವರಾಜ ಶ್ರೀಪಾದಂಗಳು	:	ಶ. ೧೪೩೨ ಭಾವ ಸಂ. ಅಶ್ವೀಜ ಬಹುಳ ೩೦ ನೇತ್ರಾವತೀತೀರದಲ್ಲಿ
ಧರಣೀಧರ ಶ್ರೀಪಾದಂಗಳು	:	ಶ.೧೪೫೧ ನೇ ಸರ್ವಧಾರಿ ಸಂ. ವೈಶಾಖ ಬಹುಳ ೩೦ ಶುಕ್ತಿಮತಿತೀರದಲ್ಲಿ

ಧರಧರತೀರ್ಥ ಶ್ರೀಪಾದಂಗಳು	ಶ. ೧೪೬೩ ಶಾರ್ವರಿ ಸಂ. ಚೈತ್ರ ಬಹುಳ ೩ ಪ್ರವಾಸಕ್ಷೇತ್ರ (ಪ್ರಯಾಗ ?)
ಪ್ರಜ್ಞಾನಮೂರ್ತಿ ತೀರ್ಥ ಶ್ರೀಪಾದಂಗಳು	ಶ. ೧೪೭೫ ನೇ ಪರಿಧಾವಿ ಸಂ. ಮಾಘ ಬಹುಳ ೩ ಶುತಿತೀರದಲ್ಲಿ (ಶುಕ್ತಿಮತಿ ?)
ತಪೋಮೂರ್ತಿ ಶ್ರೀಪಾದಂಗಳು	ಶ. ೧೪೮೫ನೇ ದುಂದುಭಿ ಸಂ. ಪಾಲ್ಗುಣ ಬಹುಳ ೫ ನೆರಂಬಳಿ ಸ್ಥಳದಲ್ಲಿ
ಶೂರೇಶತೀರ್ಥ ಶ್ರೀಪಾದಂಗಳು	ಶ. ೧೪೯೮ ನೇ ಯುವ ಸಂ. (?) ಚೈತ್ರ ಶು. ೩ ರಲ್ಲಿ (?)
ಜಗನ್ನಾಥತೀರ್ಥರು	ಶ. ೧೫೧೦ ಸರ್ವಜಿತು ಸಂ. ವೈಶಾಖ ೭ರಲ್ಲಿ ಪ್ರಯಾಗ ಕ್ಷೇತ್ರದಲ್ಲಿ
ಸೂರೇಶ ತೀರ್ಥಶ್ರೀಪಾದಂಗಳು	ಶ. ೧೫೨೪ ಪ್ಲವ ಸಂ. ಆಷಾಢ ಶು. ೩ (ಗಂಡಕೀತೀರದಲ್ಲಿ)
ವಿಶ್ವ ಪುಂಗವರು	ಶ. ೧೫೩೪ ? ಸಂ. ಕಾರ್ತಿಕ ಶುದ್ಧ ೧೦ (ಗುರುಗಳ) ವೃಂದಾವನ ಸಮೀಪದಲ್ಲಿ
ವಿಶ್ವವಲ್ಲಭತೀರ್ಥ ಶ್ರೀಪಾದಂಗಳು	ಶ. ೧೫೪೫ ದುಂದುಭಿ ಸಂ. ಮಾರ್ಗಶಿರ ಬಹುಳ ೩೦, ಸ್ವಗುರುಸನ್ನಿಧಾನದಲ್ಲಿ
ವಿಶ್ವಭೂಷಣ	ಶ. ೧೫೫೫ ನೇ ಅಂಗೀರಸ ಸಂ. ಕಾರ್ತಿಕ ಶುದ್ಧ ೮ರಲ್ಲಿ ನೆರಂಬಳಿಯಲ್ಲಿ
ಯಾದವೇಂದ್ರ ಸ್ವಾಮಿಯವರು	ಶ. ೧೫೬೬? ಸಂ. ಫಾಲ್ಗುಣ ಬಹುಳ (೧೦?)
ಪ್ರಜ್ಞಾನ ಮೂರ್ತಿಗಳು	ಶ. ೧೫೭೮ ವಿಶ್ವಾವಸು ಸಂ. ಮಾಘ (ಬಹುಳ ೯ರಲ್ಲಿ) ಆದೇಶ ಸ್ಥಳದಲ್ಲಿ?
ವಿದ್ಯಾರಾಜ ಶ್ರೀಪಾದಂಗಳು	? ಸೌಮ್ಯ ಸಂ. ವೈಶಾಖ ಬಹುಳ ೫?
ವಿದ್ಯಾಮೂರ್ತಿಗಳು	ಶ. ೧೬೫೨ ಸೌಮ್ಯ ಸಂ. ಭಾದ್ರಪದ (ಶುದ್ಧ ೮ (?))
ವಿದ್ಯಾವಲ್ಲಭತೀರ್ಥ ಶ್ರೀವಲ್ಲಭರು	ಶ. ೧೬೬೧ ಕಾಳಯುಕ್ತಿ ಸಂ. ಭಾದ್ರಪದ ಶುದ್ಧ ೭ರಲ್ಲಿ ಪೇಜಾವರ ಸ್ಥಳದಲ್ಲಿ ಸ್ವಗುರು ಸನ್ನಿಧಿ
ವಿದ್ಯೇಂದ್ರತೀರ್ಥ ಶ್ರೀಪಾದಂಗಳು	ಶ. ೧೬೭೦ ಪ್ರಭವ ಸಂ. ಭಾದ್ರಪದ ಶುದ್ಧ ೧, ಪ್ರಯಾಗಕ್ಷೇತ್ರ ಗಂಗಾ ಯಮುನಾ ಸಂಗಮದಲ್ಲಿ
ವಿದ್ಯಾನಿಧಿತೀರ್ಥ ಶ್ರೀಪಾದಂಗಳು	ಶ. ೧೭೧೫ ಪರಿಧಾವಿ ಸಂ. ಸಿಂಹ ಮಾಸ, ಭಾದ್ರಪದ ಶುದ್ಧ ೯ರಲ್ಲಿ ಕೃಷ್ಣಾಪುರದಲ್ಲಿ
ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳು	ಕೈಫಿಯತ್ತನ್ನು ಬರೆಯುವ ಕಾಲದಲ್ಲಿದ್ದವರು

ಇನ್ನು ಮಠದಲ್ಲಿರುವ ಪುಸ್ತಕಗಳ ಪಟ್ಟಿಯನ್ನು ಕೊಟ್ಟಿದೆ. ಪಟ್ಟಿಯ ಪ್ರಕಾರ ೯ ಪುಸ್ತಕಗಳು ಆ ಕಾಲದಲ್ಲಿ ಮಠದಲ್ಲಿದ್ದುವು.

ಪೇಜಾವರ ಮಠದ ಕೈಫಿಯತ್ತು

ಕ್ಷಯ ಸಂವತ್ಸರದ ಜ್ಯೇಷ್ಠ ಶುದ್ಧ ೫ರಲ್ಲಿ ಪೇಜಾವರ ಮಠದ ವಿಠಲ ಭಟ್ಟನು ಬರೆಸಿದ ವಿವರ ಮಧ್ವಾಚಾರ್ಯರು ಅಷ್ಟ ಯತಿಗಳಿಗೆ ಮಂತ್ರೋಪದೇಶವನ್ನು ಕೊಟ್ಟುದು, ಪರ್ಯಾಯ ಪೂಜಾಕ್ರಮವನ್ನು ನಿಯಮಿಸಿದುದು ಮತ್ತೆ ಬದರಿಕಾಶ್ರಮವನ್ನು ಪ್ರವೇಶಿಸಿದುದು. ಅಷ್ಟಯತಿಗಳ ಹೆಸರುಗಳು, ಅವರಿಗೆ ಮಧ್ವಾಚಾರ್ಯರು ಕೊಟ್ಟ ಮೂರ್ತಿಗಳು ಮುಂತಾದ ವಿವರಗಳು ಹಿಂದಿನ ಮಠದ ಕೈಫಿಯತ್ತುಗಳಲ್ಲಿರುವಂತೆಯೇ ಇವೆ. ಗುರುಪರಂಪರೆಯು ಈ ಕೆಳಗಿನಂತಿದೆ.

ಹೆಸರು ಗತಿಸಿದ ವರ್ಷ ಸ್ಥಳ ಇತ್ಯಾದಿ ವಿವರ

ಅಧೋಕ್ಷಜತೀರ್ಥರು	:	ಶ. ೧೨೩೫ ನೇ ಪರಿಧಾವಿ ಸಂ. ಮಾಘ ಶುದ್ಧ ೭, ಧನುಷ್ಕೋಟಿಯಲ್ಲಿ
ಕಮಲಾಕ್ಷತೀರ್ಥರು	:	? ಪ್ರಮೋದೂತ ಸಂ. ಕಾರ್ತಿಕ ಶುದ್ಧ ೫ ಭಾಗೀರಥೀ
ಪುಷ್ಕರಾಕ್ಷತೀರ್ಥರು	:	ನಂದನ ಸಂ. ಪುಷ್ಯ ಶುದ್ಧ ೧ (ದ್ವಾದಶಿ) ದ್ವಾರಕಿ/
ಅಮರೇಂದ್ರ ತೀರ್ಥರು	:	? ರಾಕ್ಷಸ ಸಂ. ಫಾಲ್ಗುಣ ಶುದ್ಧ ೯ ರಲ್ಲಿ ಮೂಲ ಕಾವೇರಿ
ವಿಜಯತೀರ್ಥರು	:	? ಈಶ್ವರ ಸಂ. ಜ್ಯೇಷ್ಠ ಬಹುಳ ದಶಮಿಯಲ್ಲಿ ವೃಂದಾವನದಲ್ಲಿ
ಮಹೇಂದ್ರ ತೀರ್ಥರು	:	? ಗೋದಾವರೀ ತೀರ ನಿವೃತಿ ಸಂಗಮದಲ್ಲಿ
ವಿಜಯಧ್ವಜ ಆಚಾರ್ಯರು	:	ಶ. ೧೩೪ ನೇ ಪರಾಭವ ಸಂ. ವೈಶಾಖ ಶುದ್ಧ ೧೨ ಕಣ್ವತೀರ್ಥಕ್ಷೇತ್ರ
ಚಿಂತಾಮಣಿತೀರ್ಥರು	:	? ರೌದ್ರಿ ಸಂ. ಜ್ಯೇಷ್ಠ ಶುದ್ಧ ೫; ಕಣ್ವತೀರ್ಥಕ್ಷೇತ್ರ
ದಾಮೋದರ ತೀರ್ಥರು	:	? ಹೇವಿಳಂಬಿ ಸಂ. ಭಾದ್ರಪದ ಬಹುಳ ೧೪, ಉಡುಪಿ
ವಾಸುದೇವತೀರ್ಥರು	:	? ರಾಕ್ಷಸ ಸಂ. ಕಾರ್ತಿಕ ಶುದ್ಧ ೧೫ರಲ್ಲಿ ಭಾಗೀರಥಿಯಲ್ಲಿ
ಯೋಗೇಂದ್ರ ತೀರ್ಥರು	:	?ದುಂದುಭಿ ಸಂ. ಪುಷ್ಯ ಶುದ್ಧ ೧೫ರಲ್ಲಿ ಮೂಲಕಾವೇರಿಯಲ್ಲಿ
ವೇದಗರ್ಭತೀರ್ಥರು	:	? ಯುವ ಸಂತ್ಸರ ಅಶ್ವೀಜ ಶುದ್ಧ ೧೫ರಲ್ಲಿ ವೃಂದಾವನಕ್ಷೇತ್ರ
ಅಣಿಪ್ರಜ್ಞತೀರ್ಥರು	:	? ವಿಕೃತಿ ಸಂ. ಜ್ಯೇಷ್ಠ ಬಹುಳ ೫ರಲ್ಲಿ ಜಗನ್ನಾಥದಲ್ಲಿ
ವಿಶ್ವಪ್ರಜ್ಞತೀರ್ಥರು	:	? ಪ್ಲವಂಗ ಸಂ. ಶ್ರಾವಣ ಬಹುಳ ೭ರಲ್ಲಿ ಗೋದಾವರೀ ತೀರ, ನಾಸಿಕ ತ್ರ್ಯಂಬಕದಲ್ಲಿ
ವಿಶ್ವೇಶತೀರ್ಥರು	:	? ದುಂದುಭಿ ಸಂ. ಜ್ಯೇಷ್ಠ ಬಹುಳ ೯ರಲ್ಲಿ ಪ್ರೋಷ್ಟಿಯಲ್ಲಿ
ವಿದ್ವದ್ಭೂಷಣತೀರ್ಥರು	:	? ಪ್ರಮಾಥೀ ಸಂ. ಕಾರ್ತಿಕ ಬಹುಳ ೫ರಲ್ಲಿ ಕಾವೇರಿತೀರದ ರಾಮಾನಾಥಪುರದಲ್ಲಿ

ವಿಶ್ವವಂದ್ಯತೀರ್ಥರು	:	? ಶುಭಕೃತು ಸಂ. ಮಾಘ ಶುದ್ಧ ೧೪ರಲ್ಲಿ ತುಂಗಭದ್ರಾ ಸಂಗಮ ಕೂಡಲ ಕ್ಷೇತ್ರದಲ್ಲಿ
ವಿದ್ಯಾರಾಜತೀರ್ಥರು	:	? ವಿಭವ ಸಂ. ಫಾಲ್ಗುಣ ಶುದ್ಧ ೫ರಲ್ಲಿ ಕಾವೇರಿ ತೀರದ ಹಿರೆ ಶ್ರೀರಂಗದಲ್ಲಿ
ವಿಶ್ವಮೂರ್ತಿತೀರ್ಥರು	:	? ವಿಳಂಬಿ ಸಂ. ಪುಷ್ಯ ಶುದ್ಧ ೧೨ರಲ್ಲಿ ಪೇಜಾವರ ಮಠದಲ್ಲಿ
ವಿಶ್ವಪತಿತೀರ್ಥರು	:	? ನಳ ಸಂ. ವೈಶಾಖ ಶುದ್ಧ ೩ರಲ್ಲಿ -?
ವಿಶ್ವನಿಧಿತೀರ್ಥರು	:	? ವಿಭವ ಸಂ. ಫಾಲ್ಗುಣ ಶು. -೭
ವಿಶ್ವಾದಿಶಕ್ತತೀರ್ಥರು	:	? ವಿಳಂಬಿ ಸಂ. ಕಾರ್ತಿಕ ಶುದ್ಧ ೧೧ರಲ್ಲಿ ಉಡುಪಿಯಲ್ಲಿ
ವಿಶ್ವಾಧಿರಾಜತೀರ್ಥರು	:	ಭಾವ ಸಂ. ಜ್ಯೇಷ್ಠ ಶುದ್ಧ ೩ರಲ್ಲಿ ಉಡುಪಿಯಲ್ಲಿ
ವಿಶ್ವಬೋಧತೀರ್ಥರು	:	ವಿಕಾರಿ ಸಂ. ಆಷಾಢ ಬಹುಳ ೪ರಲ್ಲಿ ಪೇಜಾವರ
ವಿಶ್ವವಲ್ಲಭತೀರ್ಥರು	:	ರಕ್ತಾಕ್ಷಿ ಸಂ. ಫಾಲ್ಗುಣ ಬಹುಳ ಚತುರ್ದಶಿ, ಶ್ರೀಪಾದರಾಯರ ವೃಂದಾವನ ಸನ್ನಿಧಿಯಲ್ಲಿ

ಕೈಫಿಯತ್ತಿನಲ್ಲಿ ಕೊಟ್ಟಿರುವ ಮಠದ ಗುರುಪರಂಪರೆಯ ಹೆಸರುಗಳು ಎಷ್ಟು ಚಾರಿತ್ರಿಕವಾದುದು ಎಂದು ಹೇಳುವುದು ಕಷ್ಟ ಆದರೂ ಇಲ್ಲಿ ಯತಿಗಳ ಹೆಸರನ್ನು ಉಲ್ಲೇಖಿಸಿರುವುದು ಕುತೂಹಲದ ಸಂಗತಿಗಳಾಗಿವೆ.

೩.೩. ಇತರ ದೇವಾಲಯಗಳು

ದೇವಾಲಯಗಳು ಮನುಷ್ಯನ ನಂಬಿಕೆಯ ನೆಲೆಗಳು. ಸಮಾಜದಲ್ಲಿ ದೇವರಿಗೆ ಒಂದು ಆಕಾರ ರೂಪ ಕೊಟ್ಟು ಮೂರ್ತಿರೂಪದಿಂದ ಗೌರವಿಸಿ ಪೂಜಿಸುವ ಸಂಪ್ರದಾಯ ರೂಢಿಗೆ ಬಂದಂತೆ ಒಂದೊಂದು ಮತ, ಪಂಥದ ಗುಂಪಿನವರು ತಮ್ಮ ತಮ್ಮ ಗುಡಿಗಳನ್ನು, ಆಲಯಗಳನ್ನು ನಿರ್ಮಿಸಿಕೊಂಡು ಆರಾಧಿಸುತ್ತಾ ಬಂದರು. ಕೈಫಿಯತ್ತುಗಳ ಅವಲೋಕದ ಹಿನ್ನೆಲೆಯಲ್ಲಿ ಹೇಳುವುದಾದರೆ, ಇಲ್ಲಿ ರೂಢಿಯಲ್ಲಿದ್ದ ಶೈವ, ಜೈನ, ವೈಷ್ಣವ ಪರಂಪರೆಯ ದೇವಾಲಯಗಳ ಜೊತೆಗೆ ದೈವ, ಭೂತ, ನಾಗ ಬ್ರಹ್ಮ ಇವರುಗಳ ಗುಡಿಗಳು, ಸಾಕಷ್ಟು ಪ್ರಮಾಣದಲ್ಲಿ ಇದ್ದುದು ಕಂಡು ಬರುತ್ತವೆ. ಜೊತೆಗೆ ತುಳು ಸಮಾಜದಲ್ಲಿ ಗೋಚರಿಸುವ ಸೂರ್ಯ, ಗಣಪತಿ, ದುರ್ಗಿ, ಕಾರ್ತಿಕೇಯ ಮೊದಲಾದ ದೇವಾಲಯಗಳ ಉಲ್ಲೇಖಗಳು ಇದರಲ್ಲಿ ಕಂಡು ಬರುತ್ತವೆ.

ಯಾವುದೇ ದೇವಾಲಯಗಳ ವಿಷಯವನ್ನು ಅಧ್ಯಯನದ ದೃಷ್ಟಿಯಿಂದ ವಿವೇಚಿಸಿದರೆ ಆಯಾ ಮತಧರ್ಮಗಳು ಪಾಲಿಸಿಕೊಂಡು ಬಂದ ಪೂಜೆ, ಆರಾಧನೆ, ಪರ್ವ ಅಲ್ಲಿಯ ಸ್ಥಳ ಮಹಾತ್ಮೆ, ದೇವರ ಪವಾಡ, ಕಾರಣೀಕೆಗಳು ಮುಂತಾದ ಮಾಹಿತಿಗಳು ನಮಗೆ ಅಲ್ಲಲ್ಲಿ ಗೋಚರಿಸುತ್ತದೆ. ಹೀಗೆ ಕೈಫಿಯತ್ತುಗಳಿಂದ ತುಳುನಾಡಿನ ಧಾರ್ಮಿಕ ಪರಿಚಯವಾಗುತ್ತದೆ.

೩.೩.೧. ಕುಂದಾಪೂರೆ (ಧರ್ಮಸ್ಥಳ) ಕೈಫಿಯತ್ತು

ರಾಷ್ಟ್ರವ್ಯಾಪ್ತೀ ಖ್ಯಾತಿಯನ್ನು ಪಡೆದಿರುವ ಧರ್ಮಸ್ಥಳವು ಬೆಳ್ತಂಗಡಿ ತಾಲೂಕಿನ ಪುಟ್ಟ ಊರು. ದೊಡ್ಡ ಕ್ಷೇತ್ರ. ತನ್ನ ದಕ್ಷಿಣ ದಂಡೆಗೆ ಅನತಿದೂರದಲ್ಲಿ ಮೈದಳೆದಿರುವ ಈ ಪುಣ್ಯಧಾಮವನ್ನು ಪಾವನಗೊಳಿಸಿ ಹರಿಯುತ್ತಿದ್ದಾಳೆ ನೇತ್ರಾವತಿ.

ಧರ್ಮಸ್ಥಳದ ಮಂಜುನಾಥನ ದೇವಾಲಯದ ಒಂದು ಪ್ರಾಚೀನ ಬೃಹದ್ದೇವಾಲಯ. ಈ ದೇವಾಲಯಕ್ಕೆ ಮಾಡಿದ ಭೂದಾನವೊಂದನ್ನು ದಾಖಲಿಸುವ ಕ್ರಿ. ಶ. ೧೨೦೦ರ ಶಾಸನವೊಂದು ಈ ದೇವರನ್ನು 'ಮಂಜುನಾಥ' ಎಂದೇ ಹೆಸರಿಸಿದೆ. ಅಂದ ಮೇಲೆ 'ಮಂಜುನಾಥ' ಎಂಬ ಹೆಸರಿನಿಂದಲೇ ಖ್ಯಾತವಾಗಿದ್ದ ಈ ದೇವರು ಮತ್ತು ದೇವಸ್ಥಾನ ಪ್ರಾಯಶಃ ಕ್ರಿ. ಶ. ೧೦-೧೧ನೆಯ ಶತಮಾನಕ್ಕೆ ಹೋಗುವಷ್ಟು ಪ್ರಾಚೀನವಾದುದು. ಭವ್ಯವಾದ ಎರಡು ಪ್ರಾಕಾರಗಳು ಇದಕ್ಕೆ ಹೊರ ಪ್ರಾಕಾರವು ಭದ್ರ, ವಿಶಾಲ ಮತ್ತು ಎತ್ತರವಾಗಿದ್ದು ಪ್ರಾಚೀನ ಅರಮನೆಗಳ ರಕ್ಷಣಾ ಕೌಶಲ ಇಲ್ಲಿ ಮೆರೆದಿದೆ. ಪ್ರವೇಶ ಭಾಗದಲ್ಲಿ ಎತ್ತರವಾದ ಸ್ತಂಭರಾಜಿಯುಳ್ಳ ಸುಂದರ ಮಂಟಪವಿದೆ. ಎತ್ತರವಾದ ಜಗುಲಿ, ಪಾವಟಿಗೆಗಳನ್ನೇರಿ ಮೇಲೆ ನಡೆದರೆ ವಿಶಾಲವಾದ ಹೊರ ಪ್ರಾಕಾರ ಮಂಟಪವನ್ನು ಕಾಣುತ್ತೇವೆ. ಈ ಹೊರ ಸುತ್ತಿನಲ್ಲಿ ಕ್ಷೇತ್ರದ ರಕ್ಷಕ ದೈವವಾದ ಅಣ್ಣಪ್ಪ. ಅನಂತರ ಕಲ್ಲೇರಿತ್ತಾಯ, ನಾಗ, ವಿಷ್ಣುಮೂರ್ತಿ, ಪಂಜುರ್ಲಿ ಇತ್ಯಾದಿಯಾಗಿ ಪರಿವಾರ ದೇವ- ದೈವಗಳಿಗೆ ಈ ಹೊರ ಪ್ರಾಕಾರವು ಭದ್ರಕೋಟೆಯಂತಿರುವ ರಚನೆ. ಕಳೆದ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾದ ಈ ಹೊರ ಪ್ರಾಕಾರದ ರೂವಾರಿ ಆಗ ಧರ್ಮಾಧಿಕಾರಿಗಳಾಗಿದ್ದ ಇಮ್ಮಡಿ ಮಂಜಯ್ಯ ಹೆಗ್ಗಡೆಯವರು.

ಹೊರ ಪ್ರಾಕಾರದಲ್ಲಿರುವಂತೆ ಒಳ ಪ್ರಾಕಾರಕ್ಕೆ ಎರಡು ಪ್ರವೇಶದ್ವಾರಗಳಿವೆ. ಇವು ಮಂಜುನಾಥ ಸ್ವಾಮಿ ಮತ್ತು ಅಮ್ಮನವರ ಗುಡಿಗಳಿಗೆದುರಾಗಿವೆ. ಇಲ್ಲಿಯ ಪೌಳಿ, ತೀರ್ಥಮಂಟಪಗಳು ಮತ್ತು ಗರ್ಭಗುಡಿಗಳು ಹಲವು ಬಾರಿ ಜೀರ್ಣೋದ್ಧಾರಗೊಂಡಿದೆ. ಶ್ರೀ ವಾದಿರಾಜ ಸ್ವಾಮಿಗಳ ಸಮಕಾಲೀನರಾದ ಶ್ರೀ ದೇವರಾಜ ಹೆಗ್ಗಡೆಯವರ ಕಾಲದಲ್ಲಿ ದೇವರ ಪುನಃಪ್ರತಿಷ್ಠೆ ಅಷ್ಟ ಬಂಧಾದಿ ಕಾರ್ಯಗಳು ಅಭೂತಪೂರ್ವ ಈ ಕ್ಷೇತ್ರಕ್ಕೆ ಕುಡುಮ ಎಂಬ ಹೆಸರಿತ್ತು, ಧರ್ಮಸ್ಥಳದ ವಿವರವು ಕೈಫಿಯತ್ತಿನಿಂದ ಈ ರೀತಿ ತಿಳಿದುಬರುತ್ತದೆ.

ಧರ್ಮಸ್ಥಳವು ಕರ್ನಾಟಕದ ಸುಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಇದು ಅನೇಕ ವೈಶಿಷ್ಟ್ಯತೆಯನ್ನು ಮೆರೆದಿದೆ. ಇಲ್ಲಿನ ಆರಾಧ್ಯದೈವಗಳು ಮಂಜುನಾಥ, ಚಂದ್ರನಾಥ ಮತ್ತು ಧರ್ಮದೇವತೆಗಳು. ಮಂಜುನಾಥ ಶಿವ ದೇವನಾದರೆ ಚಂದ್ರನಾಥನು ಜೈನ ತೀರ್ಥಂಕರ. ಕಾಳರಾಹು, ಕಾಳರ್ಕಾಯಿ, ಕುಮಾರಸ್ವಾಮಿ, ಕನ್ಯಾಕುಮಾರಿ ಮತ್ತು ಅಣ್ಣಪ್ಪ ಸ್ವಾಮಿಗಳು ಧರ್ಮದೇವತೆಗಳು. ಮಂಜುನಾಥನ ಅರ್ಚಕರು ವೈಷ್ಣವ ಬ್ರಾಹ್ಮಣರು. ಈ ಕ್ಷೇತ್ರವನ್ನು ಮುನ್ನಡೆಸಿಕೊಂಡು ಬರುವ ಧರ್ಮಾಧಿಕಾರಿಗಳು ಜೈನ ಮತಾವಲಂಬಿಗಳಾದ ಶ್ರೀ ಹೆಗ್ಗಡೆಯವರು ಆದ್ದರಿಂದ ಇಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಕಾಣಬಹುದು.

ಈ ಕ್ಷೇತ್ರದ ಬಗ್ಗೆ ಒಂದು ಕೈಫಿಯತ್ತನ್ನು ಬರೆಸಲಾಗಿದೆ. ಕೈಫಿಯತ್ತಿನ ಆರಂಭದಲ್ಲಿಯೇ ಕೈಫಿಯತ್ತನ್ನು ಬರೆಸಿದ ಉದ್ದೇಶದ ಬಗ್ಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. [16]"ಶ್ರೀ ಧರ್ಮಸ್ಥಳದ ದೇವಸ್ಥಾನದ ದೇವರು ನಿರ್ಮಾಣವಾಗಿ ಯಷ್ಟು ವರುಷವಾಯಿತು. ಆ ದೇವರು ಯಾರಿಗೆ ಪ್ರಸನ್ನರಾದರು ಆ ದೇವಸ್ಥಾನಕ್ಕೆ ಬ್ರಾಹ್ಮರ ಪೂಜಾ ಯಾವತ್ತು ಜಾತಿಯವರು ನಡಕೊಳ್ಳುತ್ತಾಯಿದ್ದಂತೆ ಜೈನ ಜಾತಿಯವರು ಹುಕುವಕು ನಡಉದಕ್ಕೆ ಕಾರಣವೇನು? ಜೈನರ ಜಾತಿಯವರ ದೇವಸ್ಥಾನದಲ್ಲಿ ಬ್ರಾಹ್ಮರ ಪೂಜಾ ಆಗುವುದಕ್ಕೆ ಸಬಿಬಿಯೇನು? ಯೀ ಬಗ್ಗೆ ಚೆನ್ನಾಗಿ ವಿಚಾರಿಸಿ ಆ ಬಗ್ಗೆ ಕೈಫಿಯತ್ತು ಬರಸಿ ಕಳುಹಿಸುವಂತೆ ಅಪ್ಪಣೆ ಬಂದ ಪ್ರಕಾರ ಧರ್ಮಸ್ಥಳದ ಕುಮಾರೈ ಹೆಗ್ಗಡೆರಿಗೆ ಕರಿಸಿ ಸ್ಥಳದ ಕೈಫಿಯತ್ತು ವಿಚಾರಿಸಿದಲ್ಲಿ ತಮಗೆ ತಿಳಿದಷ್ಟು ಅನುಭವ ಬರಶಿ ಕೊಡುತ್ತೇನೆ ಯಂಬದಾಗಿ ಹೇಳಿ ಹೆಗ್ಗಡೆ ಮಜಕೂರನು ಸ್ಥಳದ ಕೈಫಿಯತ್ತು ಬರಸಿದ ವಿವರಾ."

ಧರ್ಮಸ್ಥಳ ದೇವಸ್ಥಾನಕ್ಕೆ ಸಂಬಂಧಿಸಿದ ಕೈಫಿಯತ್ತನ್ನು "ಕುಂದಾಪೂರೆ ಕೈಫಿಯತ್ತು" ಎಂದು ಕರೆಯಲಾಗಿದೆ. ಇದಕ್ಕೆ ಕಾರಣ ಹೀಗೆ ಇರಬಹುದು. ಪೂರ್ವದಲ್ಲಿ ಧರ್ಮಸ್ಥಳವನ್ನು 'ಕುಡುಮಪುರ' ಎಂದೇ ಕರೆಯಲಾಗುತ್ತಿತ್ತು. ಇಂದಿಗೂ ಹಳ್ಳಿಗಳಲ್ಲಿ ಕೆಲವೆಡೆ 'ಕುಡುಮಪುರ' ವೆಂದೇ ಪ್ರಖ್ಯಾತವಾಗಿದೆ. 'ಕುಡು' ಎಂದರೆ ಕೊಡು, ನೀಡು, ದಾನಮಾಡು ಎಂಬ ಅರ್ಥವು ಬಂದಿರುವುದರಿಂದ ದಾನ ಧರ್ಮ ನೀಡುವ ಪ್ರದೇಶವಾದ್ದರಿಂದ 'ಕುಡುಮ' ಎಂಬ ಹೆಸರು ಬಂದಿರಬಹುದು. ಕುಡುಮಪುರದ ಕೈಫಿಯತ್ತನ್ನು ಮೆಕೆಂಜಿ ಬರೆಸಿದ್ದಿರಬೇಕು. ಆದರೆ ಈ ಕುಡುಮಪುರವನ್ನು ಮುಂದಿನ ಪ್ರತಿಕಾರನಾದ ಸಿ. ಪಿ. ಬ್ರೌನ್ ಮತ್ತು ಆತನ ಸಂಗಡಿಗರು. ಕುಂದಾಪುರೆವೆಂದು ಕೈತಪ್ಪಿ ಬರೆದಿರಬೇಕು.

[17]" ಉಡುಪಿಯ ಅಷ್ಟಮಠಗಳಲ್ಲಿ ಹೆಗ್ಗಡೆಯವರು ಸೋದೆ ಮಠದ ವಾದಿರಾಜ ಸ್ವಾಮಿಗಳು ಕ್ಷೇತ್ರಕ್ಕೆ ಬಂದರು ಹೆಗ್ಗಡೆಯವರು ಅವರನ್ನು ಸತ್ಕರಿಸಿ "ಭಿಕ್ಷೆ ಸ್ವಿಕರಿಸಬೇಕು" ಎಂದರು. ದೈವಗಳು ತಂದು ಪ್ರತಿಷ್ಠಿಸಿದ ಲಿಂಗವಿರುವ ಸ್ಥಳದಲ್ಲಿ ಭಿಕ್ಷೆ ಸ್ವೀಕರಿಸುವುದಿಲ್ಲ" ಎಂದರು. ಆಗ ಹೆಗ್ಗಡೆಯವರು ಅವರನ್ನೇ ಕೇಳಿ, ಅವರೇ ಹೇಳಿದ ಸರ್ವಸನ್ನಾಹಗಳನ್ನೂ ಒದಗಿಸಿಕೊಟ್ಟು ಅವರ ಕೈಯಿಂದಲೇ ವೈಷ್ಣವ ವಿಧಿ ಪ್ರಕಾರ ಕಲಶ, ಪ್ರಾಣ ಪ್ರತಿಷ್ಠೆಗಳನ್ನು ಮಾಡಿಸಿದರು. ಆಗ ಶ್ರೀ ವಾದಿರಾಜ ಸ್ವಾಮಿಯವರು ಸಂತೋಷಪಟ್ಟು ಆಗಲೇ ಸ್ಥಳದಲ್ಲಿ ನಡೆಯುತ್ತಿದ್ದ ದಾನಧರ್ಮಗಳನ್ನು ಕಂಡು "ಧರ್ಮಸ್ಥಳ" ಎಂದು ಹೆಸರಿಟ್ಟರು. ಅಂದಿನಿಂದ ಕುಡುಮಪುರ ಧರ್ಮಸ್ಥಳ ಎಂಬ ಹೆಸರಿನಿಂದ ಪ್ರಸಿದ್ದಿಗೆ ಬಂತು."

ಕೈಫಿಯತ್ತಿನಲ್ಲಿ ಹೇಳಿರುವಂತೆ ಧರ್ಮಸ್ಥಳದ ಇತಿಹಾಸವು ಅಮ್ಮುದೇವಿ ಬಲ್ಲಾಳತಿಯಿಂದ ಆರಂಭವಾಗುತ್ತದೆ. ಕನ್ಯಾಕುಮಾರಿ ಎಂಬ ಧರ್ಮದೇವತೆ ಬಲ್ಲಾಳತಿಗೆ ಕನಸಿನಲ್ಲಿ ಬಂದು [18]"ನಾವು ಯಿದೆ ನೆಲ್ಯಾಡಿ ಬೀಡಿನಲ್ಲಿ ವಾಸವಾಗಿರುತ್ತೇವೆ. ಯೀ ಸ್ಥಳದಲ್ಲಿ ಮನಶ್ಯಾನಯಿರಿಸಿ ದೀಪಾಹಚ್ಚಿ ಪೂಜೆ ಮಾಡಿಕೊಂಡು ನೀವು ಬಾಹುದು, ಯೀ ಬೀಡಿನ ಸಮೀಪದಲ್ಲಿ ಬದಲು ಬೀಡು ಕಟ್ಟಿಕೊಂಡು ಅಲ್ಲೆಯಿದ್ದು ನಿತ್ಯಗಟ್ಲೆ ಶೇವೆ ಮಾಡುತ್ತಾ ಬರುವುದು. ಮುಂದೆ ನಿಮ್ಮ ಸಂತಾನ ಪಾರಂಪರ್ಯವಾಗಿ ಶೇವೆ ತೆಗೆದುಕೊಳ್ಳುತ್ತೇವೆ. ಕಾರ್ಯಕಾರಣ ಬಹಳವದೆ" ಎಂದು ಅಪ್ಪಣೆ ಮಾಡುತ್ತಾಳೆ. ಅಮ್ಮುದೇವಿ ಈ ಅಪ್ಪಣೆಯನ್ನು ನೆರವೇರಿಸುತ್ತಾಳೆ.

ಅಮ್ಮುದೇವಿಗೆ ಬಿದ್ದ ಕನಸು ಎಲ್ಲರಿಗೂ ತಿಳಿದಿದ್ದರೂ ಅಮ್ಮುದೇವಿಯ ಕಾಲ ಯಾವುದೆಂದು ಮಾತ್ರ ಯಾರಿಗೂ ತಿಳಿದಿಲ್ಲ. ಅಮ್ಮುದೇವಿಯ ಗಂಡನ ಹೆಸರು 'ಬರ್ಮಣ್ಣ ಹೆಗ್ಗಡೆ' ಒಟ್ಟಿನಲ್ಲಿ ಅಮ್ಮುದೇವಿಯವರಿಂದಲೇ ಧರ್ಮಸ್ಥಳದ ಚರಿತ್ರೆ ಆರಂಭವಾಗುತ್ತದೆ. ಅಮ್ಮುದೇವಿಯ ಕಾಲದಲ್ಲಿಯೇ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಬಂದಿದ್ದರೆಂದು ಕೈಫಿಯತ್ತಿನಲ್ಲಿ ಹೇಳಲಾಗಿದೆ. ಆದರೆ ಇದು ಸರಿಯಲ್ಲ '[19] ದೇವರಾಜ ಹೆಗ್ಗಡೆಯವರ ಕಾಲದಲ್ಲಿ ಉಡುಪಿಯ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಬಂದ ವಿಚಾರವನ್ನು ಇತರ ದಾಖಲೆಗಳು ಸ್ಪಷ್ಟಪಡಿಸುತ್ತವೆ."

ಧರ್ಮದೇವತೆಯ ಆಜ್ಞೆಯಂತೆ ಅಮ್ಮುದೇವಿ ತಾನು ವಾಸಿಸುತ್ತಿದ್ದ ನೆಲ್ಯಾಡಿ ಬೀಡನ್ನು ಧರ್ಮದೇವತೆಗಳಿಗೆ ಬಿಟ್ಟುಕೊಡುತ್ತಾಳೆ. ಮಂಚ ಇಟ್ಟು ದೀಪ ಹಚ್ಚಿ ಪೂಜೆ ಮಾಡುತ್ತಾಳೆ. ಹೀಗೆ ಹೆಗ್ಗಡತಿಯ ಬೀಡು ದೈವಗಳ ಬೀಡಾಯಿತು. ಇಂದಿಗೂ ನೆಲ್ಯಾಡಿ ಬೀಡಿನಲ್ಲಿ ತೂಗು ಮಂಚದ ಮೇಲೆ ದೀಪವಿಟ್ಟು ದೈವಗಳನ್ನು ಪೂಜಿಸುವ ಸಂಪ್ರದಾಯ ನಡೆದುಕೊಂಡು ಬರುತ್ತಿದೆ.

ಧರ್ಮಸ್ಥಳ ಕೈಫಿಯತ್ತಿನ ಪ್ರಕಾರ ಕ್ರಿ. ಶ. ೧೪೭೪ರಲ್ಲಿ ಉಡುಪಿಯ ಸೋದೆ ಮಠದ ವಾದಿರಾಜ ಸ್ವಾಮಿಗಳು ಧರ್ಮಸ್ಥಳದ ಮಾರ್ಗವಾಗಿ ಬಂದು ಒಂದು ದಿನ ಧರ್ಮಸ್ಥಳದಲ್ಲಿಯೇ ತಂಗುತ್ತಾರೆ.

ಅಮ್ಮುದೇವಿಯು ಸ್ವಾಮಿಗಳನ್ನು ಕಂಡು ಭಿಕ್ಷೆ ತೆಗೆದುಕೊಳ್ಳಬೇಕೆನ್ನುತ್ತಾಳೆ. ಆಗ ಸ್ವಾಮಿಗಳು [20]" ಯೀ ಸ್ಥಳ ದೈವಿಕ ಆದ್ದರಿಂದಾ ಯೀ ಸ್ಥಳದಲ್ಲು ದೇವತಾ ಪ್ರತಿಷ್ಟೆ ಮಾಡಿದರೆ ಬಿಕ್ಷಾ ತೆಗೆದುಕೊಳ್ಳಬಹುದು" ಎಂದು ಹೇಳುತ್ತಾರೆ. ಆಗ ಬಲ್ಲಾಳತಿಯು ಅದೇ ದಿನ ರಾತ್ರಿ ಧರ್ಮದೇವತೆಯಾದ ಕನ್ಯಕುಮಾರಿ ಅಮ್ಮನವರು ಕನಸಿನಲ್ಲಿ ಕಾಣಿಸಿಕೊಂಡು [21]"ನೀವು ಚಿಂತೆ ಮಾಡುವುದು ಕೆಲಸವಿಲ್ಲ. ಸ್ವಾಮಿಗಳಿಗೆ ಬಿಕ್ಷಾ ಆಗುವ ಸನ್ನಾಹ ಮಾಡಿಶಿ ನಾವು ಕದರಿಯಿಂದ ದೇವರ ತಂದು ಪ್ರತಿಷ್ಠೆ ಮಾಡುತ್ತೇವೆ. ನಮಗು ಯೀ ದೇವರ ಯಡಭಾಗದಲ್ಲಿ ವಿಂಗಡ ಗರ್ಭಗೃಹ ಕಟ್ಟಿಸಿ ಪ್ರತಿಮಾ ರೂಪದಲ್ಲಿ ಮೂರ್ತಿ ಮಾಡಿಶಿ ಯಿಟ್ಟು ಶ್ರೀ ದೇವರಿಗೆ ತಮಗೆ ಸಹ ಬ್ರಾಹ್ಮರ ಕೈಯಿಂದಲೆ ಪೂಜೆ ಮಾಡಿಸುವುದು" ಎಂದು ಅಜ್ಞಾಪಿಸುತ್ತಾರೆ. ಬಲ್ಲಾಳತಿ ಬೆಳಗೆದ್ದು ನೋಡಿದಾಗ 'ಮಂಜುನಾಥ' ಲಿಂಗ ಗರ್ಭ ಗೃಹ ಸಹಿತವಾಗಿ ಪ್ರತಿಷ್ಠೆಯಾಗಿತು. ಇದನ್ನು ನೋಡಿ ಸಂತಸಗೊಂಡ ವಾದಿರಾಜ ಸ್ವಾಮಿಗಳು ಭಿಕ್ಷೆ ಸ್ವೀಕರಿಸಿ ಮುಂದೆ ಸಾಗಿದರು.

ದೇವರ ಅಪ್ಪಣೆಯಂತೆ ಬಲ್ಲಾಳತಿಯು ಮಂಜುನಾಥನ ಎಡಭಾಗದಲ್ಲಿ ಅಮ್ಮನವರ ಪ್ರತಿಷ್ಠೆ ಮಾಡಿಸಿ ಬ್ರಾಹ್ಮಣರನ್ನು ಪೂಜೆಗೆ ನೇಮಿಸಿದಳು.

ಹೀಗೆ ಧರ್ಮಸ್ಥಳದ ಕೈಫಿಯತ್ತಿನಲ್ಲಿ ಧರ್ಮಸ್ಥಳದ ಹಿನ್ನಲೆ, ಮಂಜುನಾಥ ಸ್ವಾಮಿಯ ದೇವಸ್ಥಾನದ ರಚನೆಯ ಬಗ್ಗೆ ತಿಳಿದುಬರುತ್ತದೆ.

೩.೩.೨. ಕಾಪಿನ ದೇವಾಲಯದ ಕೈಫಿಯತ್ತು

ಉಡುಪಿ ನಗರದಿಂದ ದಕ್ಷಿಣಕ್ಕೆ ಹೆದ್ದಾರಿಯಲ್ಲಿ ಸುಮಾರು ೧೩ ಕಿ. ಮೀ. ದೂರದಲ್ಲಿದೆ ಕಾಪು. ಸರಕಾರದ ಕಂದಾಯ ಇಲಾಖಾ ಪಟ್ಟಿಯಲ್ಲಿ 'ಕಾಪು' ಎಂಬ ಗ್ರಾಮ ಇಲ್ಲ. ಆದರೂ ಕಾಪು ಎಂಬ ಸ್ಥಳವಿದೆ. ವಿಧಾನ ಸಭಾ ಕ್ಷೇತ್ರವಿದೆ. ಇದು ಈ ಸ್ಥಳದ ವಿಶೇಷ. ಈ ವಿಶೇಷತೆಗೆ ಗರಿಕಟ್ಟಿದಂತಿದೆ. ಇಲ್ಲಿಯ ಮೂರು ಗುಡಿಗಳು. ಮತ್ತು ವೀರಭದ್ರ ಹಾಗೂ ಜನಾರ್ದನ ದೇವಸ್ಥಾನಗಳು.

ಶ್ರೀ ಜನಾರ್ದನ ದೇವಸ್ಥಾನವು ಮಲ್ಲಾರು ಗ್ರಾಮದ ಪಶ್ಚಿಮದ ಗಡಿಯಲ್ಲಿದೆ. ಕಾಪು ಪೇಟೆಗೆ ಅತಿ ಸಮೀಪದಲ್ಲಿದೆ. ಹಾಗಾಗಿ ಇದು ಕಾಪು ಜನಾರ್ದನ ದೇವಸ್ಥಾನ ಪೂರ್ವಾಭಿಮುಖವಾಗಿರುವ ಈ ದೇವಾಲಯದ ಎರಡು ಪ್ರಾಕಾರಗಳನ್ನು ಹೊಂದಿದೆ. ಹೊರ ಪ್ರಾಕಾರದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಮಹಾದ್ವಾರ ಮತ್ತು ಅದಕ್ಕೊಪ್ಪುವ ಗೋಪುರಗಳಿವೆ. ಇವುಗಳ ಒಳಭಾಗದಲ್ಲಿ ಸುಂದರವಾದ ಮಂಟಪಗಳಿವೆ. ದಕ್ಷಿಣ ಭಾಗದಲ್ಲಿ ಸಾಮಾನ್ಯಗೋಡೆ ಇದ್ದು ಅಲ್ಲಿ ಸಾಮಾನ್ಯ ಪ್ರವೇಶ ಸೌಕರ್ಯ ಇದೆ. ಉತ್ತರ ಭಾಗದ ಹೊರಗೆ ಕಲ್ಯಾಣ ಮಂಟಪವಿದೆ. ಇದು ಈಗ ಜೀರ್ಣೋದ್ಧಾರಗೊಂಡು ತನ್ನದೇ ಆದ ಸೌಂದರ್ಯ ಪಡೆದಿದೆ.

ಕಾಪುವಿನಲ್ಲಿರುವ ಮೂರು ಮಾರಿಗುಡಿಗಳಲ್ಲಿ ವರ್ಷಕ್ಕೆ ಪ್ರಮುಖವಾಗಿ ಮೂರು ಬಾರಿ ವಿಶೇಷ ಪೂಜೆ, ಜಾತ್ರೆ ಉತ್ಸಾಹಗಳು ನಡೆಯುತ್ತವೆ. ಈಗ ಮೂರು ದೇವಾಲಯಗಳಿಂದ ಮಾರಿದೇವಿಯರು ಜನಾರ್ದನ ದೇವಸ್ಥಾನಕ್ಕೆ ಬಂದು, ಇಲ್ಲಿ ಪೂಜೆ ನೆರವೇರಿಸಿ ಅನಂತರ ಇಲ್ಲಿಂದ ಮೆರವಣಿಗೆಯಲ್ಲಿ ಊರ ದರ್ಶನಮಾಡಿ ತಮ್ಮ ಸಂಸ್ಥಾನ ಸೇರಬೇಕು. ಆ ಮೂರು ಪ್ರಮುಖ ದಿವಸಗಳೆಂದರೆ ಕರ್ಕಾಟಕ, ವೃಶ್ಚಿಕ ಮತ್ತು ಮೀನ ಸಂಕ್ರಮಣಾನಂತರದ ಮಂಗಳವಾರಗಳು. ಇವುಗಳಲ್ಲಿ ಅತ್ಯಂತ ಪ್ರಮುಖವು ಮತ್ತು ಹಿರಿದಾದುದೆಂದರೆ ಮೀನ ಮಾಸದ ಜಾತ್ರೆ. ಆಗ ಊರು ಮತ್ತು ದೇವಾಲಯಗಳೆಲ್ಲವೂ ನವವಧುವಿನಂತೆ ಸಿಂಗರಿಸಿಕೊಂಡಿರುತ್ತವೆ.

ಈ ರೀತಿಯಲ್ಲಿ ಕಾಪು ಶ್ರೀ ಜನಾರ್ದನ ಹಿರಿಮೆ ಬೆಳೆದು ಸೀಮೆ ದೇವಾಲಯದ ಗುರಿಗಾರಿಕೆಯನ್ನು ಈ ದೇವಾಲಯ ಹೊತ್ತಿದೆ. ದೇವಾಲಯದ ಬೆಳವಣಿಗೆಯಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವಾಗಿದೆ. ಕೈಫಿಯತ್ತಿನಲ್ಲಿ ಈ ದೇವಾಲಯದ ವಿವರ. ಈ ರೀತಿ ಕಂಡುಬರುತ್ತದೆ.

[22]" ಸದರಿ ಕಾಪಿನ ಮಾಗಣೆ ಶ್ರೀ ಜನಾರ್ದನ ದೇವರ ದೇವಾಲಯವು ಪೂರ್ವದಲ್ಲಿ ಕಲಿಯುಗದಲ್ಲಿ ಭಾರ್ಗವ ರುಷೀಶ್ವರರು ಪಿಲಾರಕಾನಾಯಂಬ ವನದಲ್ಲಿ ತಪೋ ನಿಷ್ಟರಾಗಿ ಯಿರುವಾಗ್ಯೆ ಆ ತಮ್ಮ ಆಶ್ರಮದಲ್ಲು ಈಶ್ವರನ ಪ್ರತಿಷ್ಠೆಯನ್ನು ಮಾಡಿ ಬಹುಕಾಲ ಅಲ್ಲಿ ಆವಾಸಾ ಮಾಡಿಕೊಂಡು ಇದ್ದು ಅನಂತರದಲ್ಲಿ ಯೀ ಋಷೀಶ್ವರರು ಸಮುದ್ರ ಸ್ನಾನಾರ್ಥವಾಗಿ ಬಂದರು" ಎಂಬ ಕೈಫಿಯತ್ತಿನ ಆಧಾರದಲ್ಲಿ ಕಾಪಿನಕಾಡು ದೇವಾಲಯದಲ್ಲಿ ಶ್ರೀ ಜನಾರ್ದನ ದೇವರನ್ನು ಪೂಜಿಸಲಾಗುತ್ತಿದೆ ಎಂದು ತಿಳಿಯುವುದಲ್ಲದೆ, ಅದು ಯಾವಾಗ ಪ್ರಾರಂಭವಾಯಿತು ಜನಾರ್ದನ ದೇವರ ಪ್ರತಿಷ್ಠೆ ಯಾವಾಗ ನಡೆಯಿತು ಎಂಬುದನ್ನು ತಿಳಿಯಬಹುದು.

ಜನಾರ್ದನ ದೇವರ ಪೂಜಾ ಪ್ರತಿದಿನದಲ್ಲು ಮಾಡಿಕೊಳ್ಳುತ್ತಾಯಿರಿ ಎಂದು ಅಪ್ಪಣೆಕೊಟ್ಟು ತಮ್ಮ ಆಶ್ರಮಕ್ಕೆ ತೆರಳಿ ಹೋದರು. ಆ ತರುವಾಯ ಯೀ ಗ್ರಾಮಸ್ಥರಾಧಾ ಅಶೇಷ ಬ್ರಾಹ್ಮರು ಬಾರ್ಗವ ರುಷೀಶ್ವರರ ಆಜ್ಞಾನುಸಾರ ಈ ಜನಾರ್ದನ ದೇವರಿಗೆ ತಮ್ಮ ತಮ್ಮ ಸ್ವಾರ್ಜನೆಯಿಂದಾ ನಡೆಸಿಕೊಂಡು ಕೆಲವು ದಿವಸ ಇರುತ್ತಿದ್ದಲ್ಲಿ ಆ ತರುವಾಯ ಈ ಗ್ರಾಮ ಪ್ರಭುವಾದ ಚಿನ್ನ ಸಾವಂತನಾದ ಎದ್ದ ಹೆಗಡೆಗೆ ವೊಂದು ದಿವಸ ರಾತ್ರಿ ಸ್ವಪ್ನದಲ್ಲು ಬ್ರಾಹ್ಮಣ ಸ್ವರೂಪನಾಗಿ ಬಂದು ಭಾರ್ಗವ ಋಷಿ ಯಿಂದಾ ಪ್ರತಿಷ್ಟಿತನಾದೆ ನಾನು ಯೇತ ಗ್ರಾಮ ಸ್ವಾಮಿಯಾಗಿಯಿದ್ದೇನೆ ದೇವಾಲಯ ಕಟ್ಟಿಸಿ ಪೂಜೋತ್ಸಾಹಗಳನ್ನು ವಿಶೇಷವಾಗಿ ಮಾಡು ಅಂತ ಅಪ್ಪಣೆ ಆಯಿತು.

[23]"ಆ ಹೆಗಡೆಯ ಬುದ್ಧಮತಪ್ರವಿಷ್ಟನಾದ ಪ್ರಯುಕ್ತ ಯೀ ದೇವತಾ ಆಜ್ಞೆಯಲ್ಲಿ ಸಂದೇಹಂದಿದಾ ಉಪೇಕ್ಷಾ ಮಾಡಲಾಗಿದೆ." ಯೇಕದೇಶದಲ್ಲಿ ಅಶನಿಪಾತ ಅಕಾಲಮೃತ್ಯು ಮುಂತಾದ ಮಹಾ ಧನಿಷ್ಟಗಳು ಆದ್ದರಿಂದ ಈ ಗ್ರಾಮಪ್ರಭು ಸ್ವದೇಶದಲ್ಲಿ ಇದ್ದ ಅಶೇಷಬ್ರಾಹ್ಮರನ್ನು ಕರೆದು "ಈ ಅನಿಷ್ಟ ಕಾರಣ ಯೇಕೆ ಇದರ ಪರಿಹಾರ ಹೇಗೆ ಎಂದು ಕೇಳಿದಾಗ ಸಕಲ (ವ್ಯಾದ) ವೇದ ಸಂಪನ್ನರಾದ ಈ ಬ್ರಾಹ್ಮರನಿನ್ನು ಋಷೀಕರ ಪೂಜಿತನಾದ ದುಷ್ಟನಿಗ್ರಹ ಶಿಷ್ಯ ಪರಿಪಾಲನ ನಿರತನಾದ ಶ್ರೀ ಜನಾರ್ದನ ಸ್ವಾಮಿಯ ಅಲಂಗನವನ್ನು ಮಾಡಿದ ಕಾರಣವೇ ಸರಿ ಈ ದೇವರಿಗೆ ದೇವಾಲಯ ಕಟ್ಟಿಸಿ ನಿತ್ಯ ಪೂಜಾ ಪ್ರತಿವರುಷಕ್ಕೂ ರಥೋತ್ಸವ ಮೊದಲಾದನ್ನು ಮಾಡಿಸಿ ನಿನ್ನ ಕುಲಸ್ವಾಮಿಯನ್ನು ಮಾಡಿಕೊಂಡು ಪ್ರಸನ್ನ ಎನಿಸಿಕೋ ಎಂದು ಹೇಳಲಾಗಿ ಈ ಗ್ರಾಮಪ್ರಭು ಬ್ರಾಹ್ಮರ ಆಗ್ನೆಗೆ ಪೊಡಂಬಟ್ಟು ದೇವಾಲಯ ಕಟ್ಟಿಸಿ ಶಾಲಿವಾಹನ ಶಕ ವರುಷ ೬೮೫ ನೆ ಶೋಭಕೃತು ಸಂವತ್ಸರದ ಮಾಘ ಶು। ೧೦ಯು ಬ್ರಹಸ್ಪತಿ ವಾರದಲ್ಲು ಬ್ರಹ್ಮಕಲಶಾ ಸಂಪ್ರೊಕ್ಷಣೆಯನ್ನು ಮಾಡಿಸಿ ಈ ದೇವರ ಪೂಜೋತ್ಸವದ ಬಗ್ಗೆ ತನ್ನ ಒಳಗಣ ಉಂಬಳಿಯಿಂದಾ ಶ್ರೀ ದೇವರ ಸಮ್ಮುಖದಲ್ಲಿ ನಾನಾ ದೇಶಸ್ತರಾದಾ ಅಶೇಷಬ್ರಾಹ್ಮರ ಸಭಾ ಮಧ್ಯದಲ್ಲು ಸಹಿರಣ್ಯೊದಕವಾಗಿ ಭೂದಾನವನ್ನು ಮಾಡಿ, ಕುಂಭ ಸಂಕ್ರಮಣ ದಿವಸದಲ್ಲು ಧ್ವಜಾರೋಹಣ ರಥೋತ್ಸವ ಮುಂತಾದ ಉತ್ಸಾಹಗಳು ಮಾಡಿ ತನ್ನ ವಂಶಪಾರಂಪರಿಯಕ್ಕೆ ಈ ದೇವರನ್ನು ಕುಲಸ್ವಾಮಿಕ್ಕನ ಪ್ರಸನ್ನ ಕರಿಸಿಕೊಂಡು ಎಂದು ಹೇಳಿ ಕಾಪಿನ ದೇವಸ್ಥಾನ ಯಾವ ರೀತಿಯಲ್ಲಿ ಮುಂದುವರಿದುಕೊಂಡು ಬಂತೆಂದು ಹೇಳಲಾಗಿದೆ.

೩. ೩. ೩. ಎಲ್ಲೂರು ದೇವಾಲಯದ ಕೈಫಿಯತ್ತು

'ಎಲ್ಲೂರು' ಉಡುಪಿ ತಾಲೂಕಿನ ಕಾಪು ಹೋಬಳಿಯಲ್ಲಿರುವ ಒಂದು ಗ್ರಾಮ. ರಾಷ್ಟ್ರೀಯ ಹೆದ್ದಾರಿ ೧೭ರಲ್ಲಿಯ ಉಚ್ಚಿಲ ಎಂಬಲ್ಲಿಂದ ಪೂರ್ವಕ್ಕೆ ನಾಲ್ಕು ಕಿ. ಮೀ. ದೂರದಲ್ಲಿ ಈ ದೇವಾಲಯವಿದೆ. ಇದು ಉಡುಪಿಯಿಂದ ಸುಮಾರು ೨೩ ಕಿ. ಮೀ. ದೂರದಲ್ಲಿದೆ.

ತುಳುನಾಡಿನ ಇತಿಹಾಸದಲ್ಲಿ, ಪ್ರಾಚೀನ ದಾಖಲೆಗಳಲ್ಲಿ ಉಲ್ಲೇಖಿತಗೊಂಡು, ಹಲವು ಧಾರ್ಮಿಕ ವಿಧಿ, ವಿಧಾನಗಳನ್ನು ಮೂಲ ಸ್ವರೂಪದಲ್ಲಿ ಉಳಿಸಿಕೊಂಡು ಬರುತ್ತಿರುವ ಜಿಲ್ಲೆಯ ಕೆಲವೇ ದೇವಾಲಯಗಳಲ್ಲಿ ಎಲ್ಲೂರಿನ ವಿಶ್ವೇಶ್ವರ ದೇವಾಲಯವೂ ಒಂದು.

ಸ್ಕಾಂದ ಪುರಾಣಾಂತರ್ಗತ ಸಹ್ಯಾದ್ರಿಖಂಡದ ಎಲ್ಲೂರು ಮಹಾತ್ಮೆಯ ಪ್ರಕಾರ ಕುಂದ ಕುಲಸಂಜಾತನಾದ ಭೂರಿಕೀರ್ತಿ ಎಂಬ ಅರಸನ ತಪಸ್ಸಿಗೆ ಮೆಚ್ಚಿ ಕಾಶಿ ವಿಶ್ವನಾಥನು ಎಲ್ಲೂರಿಗೆ ಬಂದು ಲಿಂಗರೂಪದಲ್ಲಿ ಉದ್ಭವಿಸಿದನೆಂದೂ ಕಥೆಯಿದೆ. ಕೈಫಿಯತ್ತಿನಲ್ಲಿ ಎಲ್ಲೂರು ದೇವಾಲಯದ ವಿವರ ಈ ರೀತಿ ಇದೆ.

[24]"ಯೆಲ್ಲೂರು ದೇವಸ್ಥಳದ ಈ ಮಾಗಣೆಯ ಸಹಾ ಶ್ಯಾನುಭಾಗ ವಿಶ್ವೇಶ್ವರೈಯ್ಯ ಗಂಗಾಧರಯ್ಯ ದೇವಸ್ಥಾನದ ಶಾನಭಾಗ ನರಸಯ್ಯ ನಾರಣ ತಂತ್ರಿ ಅಡಿಗಳು ಮುಕ್ತಿಬಿಟ್ಟು ಅಣ್ಣೈಯ್ಯ ಭಟ್ಟ ಕಿಳುಶಾಂತಿ ನಾರಾಯಣ ವಿಶ್ವನಾಥ ಉಪಾದಿವಂತರು ರಾಮಕೃಷ್ಣ ಭಟ್ಟ ಅನಂತ ಭಟ್ಟ ಅಣ್ಣ ಸಚಿದಕೃಷ್ಣ ಜೋಯಿಸ ಮರಿ ಜೊಯಿಸ ಸ್ಥಾನೀಕ ಅನಂತಕೃಷ್ಣ ವಿಶ್ವನಾಥಯಿಚ್ಚು ಕಿಟ್ಟದೆ ಉಡಿಗ ಪದಾರ್ತಿ ಕೆಂಗಬಾಲ ಸುಮಂತದವರು ಬರಸಿಕೊಟ್ಟ ಕೈಫಿಯತ್ತು ನಾಮೆ" ಎಂಬಲ್ಲಿ ಎಲ್ಲೂರು ದೇವಸ್ಥಾನದ ವಿಷಯ ಯಾರೆಲ್ಲ ಬರೆಸಿಕೊಟ್ಟಿದ್ದರೆಂದು ತಿಳಿದು ಬರುತ್ತದೆ.

[25]"ಹಲ್ಲರ ಜಾತಿಯ ಕುಂದ ಹೆಗಡೆಯೆಂಬವರ ಮಗ ಕುಂದಹೆಗಡೇಯು ಪ್ರಾಕು ಹುಟ್ಟಿದ್ದು ಹಲರ ಶೆಟ್ಟಿಯ ಮನೆತನದಲ್ಲಿ ಕುಂದಹೆಗಡೇಯ ಮನೇಗೆ ಸಾಕು ಬಿದ್ದರಿಂದ ಯೀಚೆ ಈ ಮನೆತನಕ್ಕೆ ಯಾರ ಸಾಕು ತಂದಗ್ಗೂ ಕುಂದ ಹೆಗ್ಗಡೆಯಂತ ಹೇಳುತ್ತಾ ಬರುತ್ತಾರಾದ್ದರಿಂದ ಯೀ ಸಾಕು ಬಂದ ಹಲ್ಲರ ಜಾತಿ ಹುಡುಗಗೆ ಕುಂದ ಹೆಗ್ಗಡೆಯೆಂಬ ಹೆಸರು" ಎಂಬ ಕೈಫಿಯತ್ತುನಿಂದ ಎಲ್ಲೂರು ದೇವಸ್ಥಾನದ ಮುಖಂಡರಿಗೆ ಕುಂದ ಹೆಗ್ಗಡೆ ಎಂಬ ಹೆಸರು ಹೇಗೆ ಬಂತು ಎಂದು ವಿವರಿಸಲಾಗಿದೆ.

ಕುಂದ ಹೆಗಡೇಯು ತದ್ದೆಶಿಯಾದ ಬ್ರಾಹ್ಮಣರು ಆ ಮಹಾಋುಷಿಗಳಿಗೆ ಅರ್ಗ್ಯ ಪಾದ್ಯಾದಿಗಳಿಂದ ಪೂಜಿಶಿ ಸಂತುಷ್ಟರಾಗಿ ಕ್ಷೇಮ ವಿಚಾರ ನಂತರದಲ್ಲಿ ಕುಂದ ಹೆಗ್ಗಡೆಯು ವಿನಯದಿಂದ ಹೇಳಿಕೊಂಡನು ಸ್ವಾಮಿ ತಮ್ಮ ಅಪ್ಪಣೆ ಪ್ರಕಾರ ಈ ಸ್ಥಳದಲ್ಲು ಶ್ರೀ ವಿಶ್ವನಾರ್ಥ ದೇವರು ನನ್ನ ಮೇಲೆ ಅನುಗ್ರಹ ಮಾಡಿ ಲಿಂಗ ರೂಪದಿಂದಾ ಆವಿರ್ಭೂತವಾದದ್ದು ತಸ್ಸಹಾ ಬಂದ ಗಣದ ಆಜ್ಞೆ ಪ್ರಕಾ ನಡಕೊಂಡು ಇದ್ದೇನೆ. ಈ ಸ್ಥಳದಲ್ಲಿ ತಾವು ಯಜ್ಞಾದಿಗಳ ಮಾಡಿ ಸ್ತಳ ಮಹಿಮಾ ಅತಿಶಯ ಪುರಸ್ತರವಾಗಿ ನನ್ನ ಹೆಸರು ವಂಶ ಪಾರಂಪರ್ಯ್ಕತವಾಗಿ ನಡೆದು ಬರುವಂತೆ ಅನುಗ್ರಹ ಮಾಡಬೇಕು ಯಂತ ಹೇಳಿ ಕೇಳಲಾಗಿ [26]" ಆ ಋುಷಿಗಳು ಹೀಗೆ ಅನುಗ್ರಹವನ್ನು ಮಾಡಿ ಯಜ್ಞವನ್ನು ಮಾಡಿ ಆ ಸ್ಥಳದ ಪೂರ್ವ, ದಕ್ಷಿಣ, ಪಶ್ಚಿಮೋತ್ತರ ಎಂಬ ನಾಲ್ಕು ದಿಕ್ಕುಗಳಲ್ಲಿ ಭಾರ್ಗವೇಶ್ವರ ಮಹಿಷಾಮರ್ದಿನಿ ಕ್ರೂರ ಮಹಿಷಾಮರ್ದಿನಿ ಉಮಾಮಹೇಶ್ವರ ಈ ನಾಲ್ಕು ಸ್ಥಳದಿಂದಾ ಕೂಡಿದ ಈ ಸ್ಥಳವು ಪರಮಪವಿತ್ರವಾಗಿ ಭಕ್ತ ಮನೋಬಿಷ್ಟಪ್ರಥವಾಗಿ ನಿನ್ನ ವಂಶಸ್ಥರ

ಹೆಸರು ಪ್ರಸಿದ್ಧವಾಗಿ ಇರಲಿ ಯಂತ ತೆರಳಿದರು" ಈ ಸ್ಥಳ ಮಹಿಮೆಯನ್ನು ಪಡೆದ ಬಗ್ಗೆ ಈ ಕೈಫಿಯತ್ತು ಉಲ್ಲೇಖಿಸುತ್ತದೆ.

ಭೂಮಿಯನ್ನು ವಿಂಗಡಿಸಿ ದಾನ ದಾರಾ ಪೂರ್ವಕವಾಗಿ ಬಿಟ್ಟುಕೊಟ್ಟು ಈ ಬಗೆ ಹಣವನ್ನು ತನ್ನ ಕೈಯಿಂದ ಸರಕಾರಕ್ಕೆ ತೆತ್ತುಕೊಂಡು ಬರುತಿದ್ದಾಗ್ಯ ಅಮಲು ನಗರದ ಸಂಸ್ಥಾನದೊಳಗೆ ನಡೆದು ಬರುವ ಬಾರಕೂರ ಹಂಪೆ ಹಳೆಬೀಡು ಬಲಾವಡೆಯರ ಕಾಲ ಪರಿಯಂತ್ರಯಿದೆ ಪ್ರಕಾರದಲ್ಲು ಬಿದನೂರು ಅರಸ್ತನದೊಳಗೆ ಬಾರಕೂರ ಬದುಕುಮಾಡುವ ವೊಡೆಯರ ಕಾಲ ಪರಿಯಂತ್ರ ನಡೆದು ಬಂತು ಸಭಾನು ಸಂವತ್ಸರದಲ್ಲು ದೊಡ್ಡ ನವಾಬನ ಕಾಲದಲ್ಲು ಕೆಲವು ಇದೇ ಪ್ರಕಾರ ನಡೆದು ಬಂತು. ಎಂದು ಎಲ್ಲೂರು ದೇವಸ್ಥಾನದ ಮುಂದಿನ ಚರಿತ್ರೆಯನ್ನು ವಿವರಿಸಿದ್ದಾರೆ.

೩. ೩. ೪. ಕುಂಬಕಾಸಿ ದೇವಾಲಯದ ಕೈಫಿಯತ್ತು

'ಕುಂಭಾಶಿ'ಯು ಕುಂದಾಪುರ ತಾಲೂಕಿಗೆ ಸೇರಿದ ಒಂದು ಗ್ರಾಮ ಆನೆಗುಡ್ಡೆ ಮಹಾಗಣಪತಿ ದೇವಸ್ಥಾನವು ಕುಂದಾಪುರದಿಂದ ದಕ್ಷಿಣಕ್ಕೆ ಎಂಟು ಕಿ. ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ೧೭ರ ಪಕ್ಕದಲ್ಲಿದೆ. ಕುಂಭಾಶಿ ಕ್ಷೇತ್ರವು ತುಳುನಾಡಿನ ಸಪ್ತಕ್ಷೇತ್ರಗಳಲ್ಲಿ ಒಂದಾಗಿದೆ.

ಆನೆಗುಡ್ಡೆಯ ಕುಂಭಾಶಿ ಗ್ರಾಮದ ಒಂದು ಸುಂದರ ಪ್ರಶಾಂತ ಸ್ಥಳ. ಇಲ್ಲಿಯ ದೇವಸ್ಥಾನವು ಬೆಟ್ಟದ ಮೇಲೆ ನಿರ್ಮಾಣಗೊಂಡಿದೆ. ಈ ಕ್ಷೇತ್ರದ ಬಗ್ಗೆ ಸಾಕಷ್ಟು ಪೌರಾಣಿಕ ಹಿನ್ನಲೆಗಳಿವೆ. ತಾಯಿಯ ಆಶಯದ ಪ್ರಕಾರ ಮಹಾಗಣಪತಿಯ ಈ ಗೌತಮ ಕ್ಷೇತ್ರದಲ್ಲಿ ನೆಲೆಸಿ ಗಂಗೆಯ ಬರುವಿಕೆಗೆ ಕಾರಣನಾದನೆಂಬ ಕತೆ ಇದೆ. ಅಲ್ಲದೆ, ತೀರ್ಥಾಟನೆ ಮಾಡುತ್ತಾ ಪಾಂಡವರು ಕುಂಭಾಶಿಗೆ ಬಂದಾಗ ಅಲ್ಲಿ ಮುನಿಗಳ ಯಜ್ಞಕ್ಕೆ ತೊಂದರೆಯನ್ನುಂಟು ಮಾಡುತ್ತಿದ್ದ ಕುಂಭಾಸುರನನ್ನು ಭೀಮನು ಮಹಾಗಣಪತಿಯ ಅನುಗ್ರಹದಿಂದ ವಧಿಸಿದನು ಎಂಬ ಪ್ರತೀತಿಯೂ ಇದೆ. ಕುಂಬಕಾಸಿ ದೇವಾಲಯದ ಬಗ್ಗೆ ಕೈಫಿಯತ್ತಿನಲ್ಲಿ ಈ ರೀತಿಯ ಉಲ್ಲೇಖ ನಮಗೆ ಕಂಡುಬರುತ್ತದೆ.

[27]" ಕುಂಬಕಾಸಿ ಸ್ಥಳದ ಕುಂಭೇಶ್ವರ ದೇವರ ಆಣೆಗುಡ್ಡೆ ಗಣಪತಿ ಸಹಾ ಕೈಫಿಯತ್ತಿನ ವಿವರ ಕ್ಷಯನಾಮ ಸಂವತ್ಸರದ ಜೇಷ್ಠ ಶು॥ ೧೨ ಉ. ಆ ಸ್ಥಳದ ಉಪಾದ್ಯಾಯ ಪುರಾಣಿಕ ರಾಮ ಭದ್ರಾಚಾರ್ಯ ಅರ್ಚಕ ವೆಂಕಣ್ಣಭಟ್ಟ ಮುಂತಾದವರು ಕುಂಪಣಿ ಸರಕಾರಕ್ಕೆ ಬರಸಿ ಕೊಟ್ಟ ಕೈಫಿಯತ್ತು ನಾಮ ವಿವರ"

ಪದ್ಮ ಪುರಾಣ ಪುಷ್ಕರ ಖಂಡ ೬೫ ಅಧ್ಯಯದ ಮೇಲೆ ೮೯ನೆಯ ಅಧ್ಯಯ ಪರಿಯಂತ್ರ ೨೪ ಅಧ್ಯಾಯದಿಂದ ಹೇಳಲ್ಪಟ್ಟ ಆ ಕ್ಷೇತ್ರ ಮಹಿಮಾ ವೈವಸ್ವತ ಮನ್ಮಂತರದಲ್ಲು ೨೮ನೆಯ ತ್ರೇತಾಯುಗ ಅಂತ್ಯ ದ್ವಾಪಯುಗ ಕಾಲದಲ್ಲು ಮಧುನಾ ಮರನಾದ ವಸಂತ ಪುರಷನು ಈ ಸ್ಥಳದಲ್ಲೂ ನಾರಾಯಣನನ್ನು ಕುರಿತು ತಪಸ್ಸು ಮಾಡಿದ್ದರಿಂದ ದೇವರು ಅವನಿಗೆ ಪ್ರಸನ್ನರಾಗಿ ಏನು ಕಾರಣ ತಪಸ್ಸು ಮಾಡಿದೆ ನಿನ್ನ ತಪಸ್ಸಿಗೆ ನಾವು ಸಂತೋಷಚಿತ್ತರಾದೆವು ಏನು ಅನುಗ್ರಹವಾಗಬೇಕೆಂದು ಕೇಳಿದಲ್ಲಿ ಸ್ವಾಮಿ ನಿಮ್ಮ ದರುಶನದಿಂದ ಸಕಲ ಮನೋಸ್ಸಿದ್ದಿ ಆಯಿತು. ಮುಂದೆ ಈ ಸ್ಥಳದಲ್ಲಿ ನೀವು ಇದ್ದುಕೊಂಡು ನನ್ನ ಹೆಸರು ನಡೆವ ರೀತಿ ಈ ಸ್ಥಳ ಪ್ರಸಿದ್ದವಾಗೋ ರೀತಿ ಈ ಸ್ಥಳದಲ್ಲು ತಪಸ್ಸು ಮಾಡಿದವರಿಗೆ ಶ್ರೀಗ್ರಮನ ಸಾಬಿಷ್ಟವಾಗೊ ರೀತಿಗು ಅನುಗ್ರಹ ಮಾಡಬೇಕು ಅಂತ ಕೇಳಿಕೊಂಡ ಕಾರಣ ಅದೇ ರೀತಿ ಆಗಲಿಯೆಂಬುದಾಗಿ ಅನುಗ್ರಹಿಸಿ ಆ

ಸ್ಥಳದಲ್ಲಿ ಸನ್ನಿಧಾನವಾಗಿ ಮಧುರ ನಾಯಂಬದಾಗಿ ಪ್ರಸಿದ್ಧಿಯನ್ನು ಮಾಡಿ ಅಲ್ಲಿ ತಪಸ್ಸು ಮಾಡಿದಂತಾವರಿಗೆ ಸಕಲ ಮನೋಬಿಷ್ಟವ ಕೊಡುತ್ತಾ ಇದ್ದರು.

"[28] ತದನಂತರ ಪರಶುರಾಮ ದೇವರು ತಮ್ಮಿಂದ ನಿರ್ಮಿತವಾದ ಕ್ಷೇತ್ರಗಳನ್ನು ನೋಡಿಕೊಂಡು ಬರುತ ಈ ಕ್ಷೇತ್ರಕ್ಕೆ ಬಂದು ಈ ಕ್ಷೇತ್ರ ವೃತ್ತಾಂತವನ್ನು ತಿಳಿದು ಇದೇ ರೀತಿಯಲ್ಲಿ ಪ್ರಸಿದ್ಧವಾಗಲಿಯೆಂದು ನೇಮಿಸಿದರು. ತದನಂತರ ಗೌತಮ ಕ್ಷೇತ್ರದಲ್ಲು ದ್ವಾದಶ ವರುಷ ಕ್ಷಾಮದ ದೆಸೆಯಿಂದ ವಾಸವಾಗಿಯಿದ್ದು ಕ್ಷಾಮಾ ನಂತರದಲ್ಲಿ ವಿನಾಯಕ ಉಪದೇಶದಿಂದ ಗೌತಮರಿಗೆ ಗೋಹತ್ಯವನ್ನು ಕಲ್ಪಿಸಿದ ಕಾರಣವು ಬ್ರಾಹ್ಮಣರಿಗೆ ಮಹಾಋಷಿಭಾವ ಬಂದಂದರಿಂದ ಈ ಶಾಪ ನಿವಾರಣಾರ್ಥವಾಗಿ ಕೋಟೀಶ್ವರದಲ್ಲು ಶ್ರೀ ಕೃಷ್ಣ ದೇವರನ ಕುರಿತು ತಪಸು ಮಾಡಿದ"

ಶ್ರೀ ಕೃಷ್ಣ ದೇವರು ಪ್ರಸನ್ನರಾಗಿ ಕೋಟಿಲಿಂಗ ರೂಪದಿಂದ ಕಾಣಿಸಿಕೊಂಡ ನಿಮ್ಮ ಮನಸಾಭಿಷ್ಟವೆನೆಂಬದಾಗಿ ಕೇಳಿದಲ್ಲಿ ನಮಗೆ ಮಹಾಋಪಿ ಶಾಪಾ ವಿಮೋಚನೆ ಆಗಬೇಕು ನಮ್ಮ ಮನೋಭಿಷ್ಟ ಸಿದ್ಧಿ ಆಗಬೇಕು ಎಂಬುದಾಗಿ ಕೇಳಿಕೊಂಡಲ್ಲಿ ಈ ಸ್ಥಳಕ್ಕೆ ಆಗ್ನೇಯ ಭಾಗದಲ್ಲಿ ಮಧುನಾಮಕನಾದ ಪುರುಷಗೆ ಶ್ರೀ ನಾರಾಯಣ ದೇವರು ಪ್ರಸನ್ನವಾಗಿ ವರವನ್ನ ಕೊಟ್ಟಿದ್ದಾರೆ ಅಲ್ಲಿ ತಪಸ್ಸು ಮಾಡಿದ್ದಲ್ಲಿ ಸಕಲ ಮನೋಭಿಷ್ಟಸಿದ್ಧಿ ಆಗುತ್ತದೆ. ನೀವು ಅಲ್ಲಿಗೆ ಹೋಗಿ ಶ್ರೀ ನಾರಾಯಣ ದೇವರನ್ನು ಕುರಿತು ತಪಸ್ಸು ಮಾಡಿದಲ್ಲಿ ನಾವು ಅಲ್ಲಿಗೆ ಬಂದು ಉಭಯಸ್ಥರು ಕೂಡಿ ನಿಮಗೆ ಮಹಾಋಷಿ ಶಾಪ ವಿಮೋಚನೆ ಮಾಡಿ ಮನಸಾಭಿಷ್ಟವನ್ನು ಕೊಡುತ್ತೇವೆ ಎಂಬುದಾಗಿ ಆಜ್ಞಾಪಿಸಿದ್ದರಿಂದ ಅದೇ ರೀತಿ ಈ ವಸಿಷ್ಠಾದಿ ಸಕಲ ಋಷಿಗಳು ಆ ಮಧುವನಕ್ಕೆ ಬಂದು ಶ್ರೀ ನಾರಾಯಣ ದೇವರನ ಕುರಿತು ತಪಸು ಮಾಡುವಾಗ ಶ್ರೀ ಕೃಷ್ಣ ದೇವರು ಸಹಾ ಈ ಕೋಟಿ ಋಷಿಗಳಿಗೆ ಪ್ರಸನ್ನರಾಗಿ ಇವರ ಶಾಪ ವಿಮೋಚನೆ ಮಾಡಿ ಯಥಾ ಪ್ರಕಾರ ಜ್ಞಾನಿಗಳಾಗಿರಿ ಎಂಬುದಾಗಿ ವರವನ್ನು ಕೊಟ್ಟ ಈ ಸ್ಥಳದಲ್ಲು ನಾವು ಉಭಯಸ್ಥರು ಇರಬೇಕು ಎಂಬುದಾಗಿ ವರವನ್ನು ಕೊಟ್ಟು ಈ ಸ್ಥಳದಲ್ಲೂ ನಾವು ಉಭಯಸ್ಥರು ಇರಬೇಕು ಎಂಬುದಾಗಿ ಹೇಳಿ ಸುನೇತ್ರದಿಂದ ಎರಡು ತೀರ್ಥವನ್ನು ನೇಮಿಸಿ ಚಂದ್ರ-ಸೂರ್ಯ ಪುಷ್ಕರಣ್ಯಾಭಿದಾನವಾಗಿ ನಿರ್ಮಿಸಿ ವಿಶ್ವಕರ್ಮಗೆ ವಿಜ್ಞಾಪಿಸಿದರು. ಉಭಯತ್ರಕರುಗೆ ವಾಸ ಪ್ರವಾಸ ಪ್ರಯುಕ್ತ ಚಿತ್ತವಾದಂತಾ ದೇವಾಲಯಗಳು ಎರಡು ನಿರ್ಮಿಸುಯಂತಾ ಕೊಟ್ಟು ಆಜ್ಞೆಯನ್ನು ಶಿರಸಾವಹಿಸಿಕ್ಕೊಂಡು ತಮ್ಮಮಯಗಳಾದ [29]" ದೇವಾಲಯಗಳನ್ನು ನಿರ್ಮಿಸಿ ಉಭಯ ದೇವರಿಗೆ ಅರಿಕೆ ಮಾಡಲಾಗಿ ಆಗ ತಾವು ಉಭಯಸ್ತರು ಕೆಲವು ದಿನ ವಾಸಮಾಡಿಯಿದ್ದು ಮುಂದೆ ಕಲ್ಪಾಂತಕವಾಗುತದೆಯೊ ಈ ಎರಡು ಆಲಯನ್ನೆ ನಾಗಚಲವನ್ನು ಆ ದೇವಾಲಯದಿಂದ ಆ ಶಿವನ ಭಾಗೀರತಿಯನ್ನು ಬಿಡೆ ಚಂದ್ರ ಸೂರ್ಯ ಪುಷ್ಕರಣೆಗೆ ಪೂರ್ವದಲ್ಲಿ ಚಿಕ್ಕ ಸರೋವರದಲ್ಲು ಪ್ರಖ್ಯಾತವಾಯಿತು."

ಕ್ಷೇತ್ರಕ್ಕೆ ಕುಂಭಕಾಶಿಯೆಂಬ ಹೆಸರು ಮಹಾಕ್ಷೇತ್ರ ಅಲ್ಲಿ ಪಾಂಡವರಿಂದ ಕೇಶವ ದೇವರನ್ನು ಸ್ಥಾಪಿಸಲಾಯಿತು. ಅನಂತರದಲ್ಲಿ ಆ ಊರುಗಳು ಸ್ವಾಸ್ತಿ ವೃತ್ತಿಗಳು ಕೊಟ್ಟು ನಡೆಸಿಕೊಳ್ಳುತ್ತಾ ಬಂದದಕ್ಕೆ ಶಾಸನದ ಮೇಲೆ ಗಣಪತಿಗೆ ಅನೇಕ ಭಕ್ತರುಗಳು ಹೇಳಿಕೊಂಡರೆ ಸಮಸ್ತ ಪ್ರಯೋಜನವು ಆಗುವುದರಿಂದ ಮೂರು ಯರಡಿಗೆ ಸಾ ಸೀಮಾ ಸಾಚೆ ವಿರ್‍ಯಂತರವನು ವರೆಸರಿಯಿತ್ಯಾದಿ ಮಹಾಮಹಿಮವಾದ ಮಹಾಸ್ತಳಾಯಂತ ಬರಸಿಕೊಟ್ಟ ಕೈಫಿಯತ್ತುನಾಮೆ ಎಂಬ ಕೈಫಿಯತ್ತಿನಲ್ಲಿ ಕುಂಭಕಾಶಿ ಎಂಬ ಹೆಸರು ಆ ಮಹಾಕ್ಷೇತ್ರಕ್ಕೆ ಬಂದ ಬಗ್ಗೆ ವಿವರಗಳಿವೆ. ಅಲ್ಲದೆ ಆ ಕ್ಷೇತ್ರದ ಮಹಿಮೆಯನ್ನು ಬಣ್ಣಿಸಲಾಗಿದೆ.

೩. ೩. ೫. ಬಳಿಸಾಗರ ದೇವಾಲಯದ ಕೈಫಿಯತ್ತು

ಬಳಿಸಾಗರದ ಯೆಣ್ಣೆಗುಡ್ಡೆ ಗ್ರಾಮದ ಮಹಾಲಿಂಗೇಶ್ವರ ದುರ್ಗಾಪರಮೇಶ್ವರಿ ವೀರಸ್ತಂಭದವರ ಕೈಫಿಯತ್ತು ಶಾಲೀವಾಹನ ಶಕಾಬ್ದ ೧೫೧೭ನೆ ಜಯ ಸಂವತ್ಸರ ಕಾರ್ತೀಕದಲ್ಲಿ ಪೂರ್ವದಲ್ಲು ಖರಾಸುರ ಪ್ರತಿಷ್ಟೆ ಮಹಾಲಿಂಗೇಶ್ವರ ದೇವರು ಪೂಜಾರು ಹರಾಗಿ ಯಿರುವಲ್ಲಿ ಆ ಸ್ಥಳದಲ್ಲು ಕುಂಡೆಯಂಬುವ ಬ್ರಾಹ್ಮಣನು ಪರಮ ಭಕ್ತಿಯಿಂದಾ ದೇವರ ಸೇವೆ ಮಾಡಿಕೊಂಡು ಇರುತ್ತಾ ಇದ್ದು ತನಗೆ ಅಮ್ಮಾನೊರಲ್ಲಿ ಭಜನೆ ಬಹುದಿವಸ ಮಾಡಿದ್ದರಿಂದಾ ಅಮ್ಮನೂರು ಪರಮಸಂತೋಷಪಟ್ಟು [30]"ಈ ಬ್ರಾಹ್ಮಣರಿಗೆ ಪ್ರತ್ಯಕ್ಷವಾಗಿ ಏನು ಕಾರಣ ನೀನು ಭಜನೆ ಮಾಡಿದೆ ಎಂಬುದಾಗಿ ಕೇಳಿದಲ್ಲಿ ನನ್ನ ಸ್ಥಳದಲ್ಲಿ ನಿನಗೆ ನೀನು ಪ್ರಸನ್ನಳಾಗಿ ಎಂಬುದಾಗಿ ಹೇಳಿ ಕೊಂಡುದರಿಂದಾ" ಅದೇ ರೀತಿ ಆಗಲಿ ಎಂಬುವುದಾಗಿ ಅಭಯವನ್ನು ಕೊಟ್ಟು ನೀನು ಸ್ಥಳಕ್ಕೆ ಹೋದಲ್ಲಿ ಅಲ್ಲಿಗೆ ನಾನು ವೀರಭದ್ರ ಸಹಿತವಾಗಿ ಬರುತ್ತಾಯಿದ್ದೇವೆ. ಈಶ್ವರ ಸನ್ನಿಧಿಯಲ್ಲಿ ನಿಲ್ಲುತ್ತಾಯಿದ್ದೇವೆ. ನಿನ್ನ ಮನಸಾಭಿಷ್ಟವು ಕೊಡುತ್ತೇನೆಂಬುದಾಗಿ ಅಭಯವನ್ನು ಕೆಟ್ಟುದರಿಂದ ಅದೆ ರೀತಿಗೆ ಮಹಾಪ್ರಸಾದವೆಂದು ತಿಳಿದುಕೊಂಡು ಈ ಬ್ರಾಹ್ಮಣ ತನ್ನ ಸ್ಥಳಕ್ಕೆ ಬಂದು ಸೇರಿದನು. ಅನಂತರ ವಬ್ಬಾನೆಂಬ ಶಿಲ್ಪಿ ತಾನು ಅಮ್ಮನೊರ ಪ್ರಾರ್ಥನೆ ಮಾಡಿಕೊಂಡು ಅಮ್ಮನೂರು ವಿಗ್ರಹವೊಂದ ವೀರಭದ್ರ ವಿಗ್ರಹಾ ಸಹಿತವಾಗಿ ಮಾಡಿಕೊಂಡು ಕೊಲ್ಲೂರಿಗೆ ಹೋಗಿ ಸಮರ್ಪಣೆ ಮಾಡಬೇಕೆಂಬುದಾಗಿ ಹೊರಟು ಬರುವಲ್ಲಿ ಇದೆ. ಮಾರ್ಗಸ್ತವಾಗಿ ಬಂದು ದೇವಸ್ಥಾನದಲ್ಲಿ ರಾತ್ರಿ ವಾಸ ಮಾಡಿದನು. ಆ ರಾತ್ರಿ ಅಮ್ಮನೊರು ಆ ಶಿಲ್ಪಿ ಸ್ವಪ್ನದಲ್ಲಿ ಬಂದು [31]"ನಾನು ಯಿಲ್ಲಿಯೇ ನಿಲ್ಲುತ್ತಿದ್ದೇನೆ. ಮುಂದೆ ತೆಗೆದುಕೊಂಡು ಹೊಗ ಕಾರಣವಿಲ್ಲಾ ಯೀ ಪ್ರತಿಮೆ ಕುಂಡೆಯ ಎಂಬ ಬ್ರಾಹ್ಮಣನ ವಶಕ್ಕೆ ಕುಡುವದೆಂಬುದಾಗಿ ಸ್ವಪ್ನವಾದ್ದರಿಂದಾ ಅದೇ ರೀತಿಗೆ ಉದಯದಲ್ಲಿ ಪ್ರತಿವೆಯನ್ನು ತೆಗೆದುಕೊಂಡು ಬಂದು ಕೊಂಡೆಯೆಂಬ ಬ್ರಾಹ್ಮಣನ ವಶಕ್ಕೆ ಕೊಟ್ಟು ಹೋದನು "ಈ ಬ್ರಾಹ್ಮಣ ಪರಮ ಸಂತೋಷಚಿತ್ತನಾಗಿ ಅಮ್ಮನೊರು ಹೇಳಿದ ಪ್ರಕಾರ ಪ್ರಸನ್ನವಾದರೆಂಬುದಾಗಿ ಈ ಮಹಾಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ದೇವರ ಬಲಭಾಗದಲ್ಲಿ ಒಂದು ದೇವಸ್ಥಾನ ಕಟ್ಟಿಸಿ ಎಡಭಾಗದಲ್ಲಿ ಒಂದು ದೇವಸ್ಥಾನ ಕಟಿ ಶುಭ ಮುಹೂರ್ತದಲ್ಲಿ ದೇವರ ಬಲಭಾಗದಲ್ಲಿ ಅಮ್ಮನೂರನು ಎಡಭಾಗದಲ್ಲಿ ವೀರಭದ್ರ ದೇವರು ಪ್ರತಿಷ್ಠೆ ಮಾಡಿ ಬಹುದಿವಸ ದೇವರ ಸೇವೆ ಮಾಡಿಕೊಂಡು ಇರುವ ಕಾಲದಲ್ಲಿ ದೇವರ ಪೂಜೆ ಬಗ್ಗೆ ಪೂರ್ವದಲ್ಲಿ ಇದ್ದ ಬ್ರಾಹ್ಮಣ ಮೃತ ನಷ್ಟವಾಗಿ ಹೋದುದರಿಂದ ದೇವರ ಪೂಜೆ ಬಗ್ಗೆ ಕಲ್ಲುಮಂಜೆಯಿದ್ದಾರು ಕಶ್ಯಾಖಾದ್ಯಯಿ ಅಶ್ವಲಾಯನ ಸೂತ್ರ ಆಂಗೀರಸ ಗೊತ್ರೋತ್ಪನ್ನನಾದ ನಾರಣ ಭಟ್ಟರು ಎಂಬ ಬ್ರಾಹ್ಮಣನ ಕರುತಂದು ಇಟ್ಟು ಪೂಜೆಯನ್ನು ನಡೆಸುತ್ತಾ ಇದ್ದನು. ಅನಂತರಾ ಅಮೃತಪಡಿ ನಂದಾದೀಪದ ಬಗ್ಗೆ ದೇವರು ಸುತ್ತಾ-ಮುತ್ತಾ ಗ್ರಾಮುಗಳಲ್ಲಿ ಭಕ್ತಾಧಿಗಳಿಗೆ ಮನಸಾಬಿಷ್ಟವನ್ನು ಕೊಟ್ಟು ಅವರವರ ಕೇಣಿಯಲ್ಲಿ ಕೆಲವು ಭೂಮಿ ಸಂಪಾದಿಸಿಕೊಂಡು ಈ ರೀತಿ ಇರುವಲ್ಲಿ ಆ ಕೊಂಡೆಯೆಂಬ ಬ್ರಾಹ್ಮಣನು ಮೋಕ್ಷವನ್ನು ಹೊಂದಿದನು ಎಂದು ಬಳಿಸಾಗರದ ದೇವಾಲಯದ ಕಥೆಯನ್ನು ಕೈಫಿಯತ್ತು ವಿವರಗಳನ್ನು ನೀಡುತ್ತಾರೆ.

೩.೩.೬. ಪೆರಡೂರು ಮಾಗಣೆ ದೇವಲಾಯದ ಕೈಫಿಯತ್ತು

ಪೆರಡೂರು ಮಾಗಣೆ ದೇವಾಲಯವು ಉಡುಪಿ ಹಿರಿಯಡಕ ಹೆಬ್ರಿ ರಸ್ತೆಯಲ್ಲಿ ಹಿರಿಯಡಕದಿಂದ ಸುಮಾರು

೫ ಕಿ. ಮೀ. ದೂರದ ಈಶಾನ್ಯದಲ್ಲಿದೆ. ಬೆಳೆಯುತ್ತಿರುವ ಈ ಗ್ರಾಮಕೇಂದ್ರವು ಇಲ್ಲಿ ಎರಡು ಮುಖ್ಯ ಅಂಶದಿಂದ ಖ್ಯಾತಿಯನ್ನುಗಳಿಸಿವೆ. ಮೊದಲನೆಯದಾಗಿ ಯಕ್ಷಗಾನ ಕೂಡವಾದ "ಶ್ರೀ ಪೆರಡೂರು ಮೇಳ" ಎರಡನೆಯದು ಇಲ್ಲಿಯ ಶ್ರೀ ಅನಂತ ಪದ್ಮನಾಭ ದೇವಸ್ಥಾನ.

ಪೆರಡೂರು ಅನಂತ ಪದ್ಮನಾಭ ದೇವಸ್ಥಾನವು ಸುರಾಲು ಅರಸರ ಸೀಮೆಯ ಒಂದು ಪ್ರಮುಖ ಧಾರ್ಮಿಕ ಕೇಂದ್ರ "ಕ್ರಿ. ಶ. ೧೪೫೬ ಕ್ಕೆ ಸೇರುವ ಇಲ್ಲಿಯ ಶಿಲಾಶಾಸನವೊಂದು ಈ ದೇವರನ್ನು ಜನಾರ್ದನ ಎಂದು ಹೆಸರಿಸಿದೆ" ಬಸವಣ್ಣರಸ ಎಂಬ ರಾಜನು ಈ ಜನಾರ್ದನ ದೇವರಿಗೆ ಭೂದಾನ ಮಾಡಿದ ವಿಚಾರವನ್ನು ಹೇಳುತ್ತದೆ. ಈ ದೇವರ ವಿಗ್ರಹದ ಶಿಲ್ಪ ಲಕ್ಷಣಗಳನ್ನು ನೋಡಿದರೆ ಈಗಲೂ ಇದು ಜನಾರ್ದನನೆ. ಈ ಹೆಸರು ಬದಲಾಗಿ ಯಾವಗ ಅನಂತಪದ್ಮನಾಭ ಆಯಿತು ಎನ್ನುವುದು ತಿಳಿದು ಬರುವುದಿಲ್ಲ. ಏನಿದ್ದರೂ ಈ ಹೆಸರಿನ ಬದಲಾವಣೆ ಕೇವಲ ನೂರಿನ್ನೂರು ವರ್ಷಗಳ ಹಿಂದೆಯಷ್ಟೇ ಆಗಿರಬೇಕು. ಇದಕ್ಕೆ ಪೂರಕವಾಗಿ ಇಲ್ಲಿ ನಡೆಯುವ ಒಂದು ಪರ್ವ ಪೂಜೆಯನ್ನು ಉದಾಹರಿಸಬಹುದು. ಅದೇ ಅನಂತಪದ್ಮನಾಭ ಚತುರ್ದಶಿ ವೃತಾಚರಣೆ. ಇದು ದೇವಾಲಯದ ಪೂಜಾ ಪಟ್ಟಿಯಲ್ಲಿಲ್ಲ. ಹಿಂದೆ ಅರ್ಚಕರು ತಮ್ಮ ಮನೆಯಲ್ಲಿ ನಡೆಸುತ್ತಿದ್ದ. ಅನಂತವೃತವನ್ನು ದೇವಾಲಯದಲ್ಲೆ ಮಾಡಲು ಉಪಕ್ರಮಿಸಿದರು. ಆ ವೃತಾಚರಣೆ ನಡೆಸುತ್ತಿದ್ದ ಇತರರೂ ಇದರಲ್ಲಿ ಭಾಗಿಗಳಾದರೂ ಆಗ ಜನಾರ್ದನ ಮಂತ್ರದಲ್ಲಿ ಅನಂತ ಪದ್ಮನಾಭನಾದ. ಈ ಹೆಸರು ಕಾಲಕ್ರಮದ ವಾಡಿಕೆಯಲ್ಲಿ ಮುಂದುವರೆಯಿತು. ಈಗ ಜನರ ಮನಸ್ಸಿನಲ್ಲಿ ಅನಂತ ಪದ್ಮನಾಭನಿದ್ದಾನೆ.

ಪೆರಡೂರಿನ ಶ್ರೀ ಅನಂತಪದ್ಮನಾಭ ದೇವಾಲಯವು ಒಂದು ಹಿರಿಯ ದೇವಾಲಯ. ಪೂರ್ವಾಭಿಮುಖವಾಗಿರುವ ಇದಕ್ಕೆ ಎರಡು ಪ್ರಾಕಾರಗಳು ಹೊರ ಪ್ರಾಕಾರವು ಬೃಹತ್ತಾದೆ. ಇದಕ್ಕೆ ನಾಲ್ಕು ದಿಕ್ಕಿನಲ್ಲಿ ಪ್ರವೇಶದ್ವಾರಗಳಿವೆ. ಪೂರ್ವ ದಿಕ್ಕಿನ ದ್ವಾರವು ಹೆಸರಿಗೆ ತಕ್ಕದೆ ಮಹಾದ್ವಾರ. ಇದರ ಹೊರ ಮತ್ತು ಒಳ ಭಾಗಗಳಲ್ಲಿ ವಿಶಾಲವಾದ ಮಂಟುಪಗಳಿದ್ದು ಮೇಲೆ ಭವ್ಯವಾದ ಚಂದ್ರಶಾಲೆಯನ್ನು ಹೊಂದಿದೆ. ಈ ಪ್ರಾಕಾರದೊಳಗೆ ಸ್ಥಳದ ಪರಿವಾರ ದೈವಗಳಿವೆ. ನೈಋತ್ಯದಲ್ಲಿ ಪಂಜುರ್ಲಿ-ನಂದಿಕೋಣ, ಈಶಾನ್ಯದಲ್ಲಿ ಖಡ್ಗರಾವಣ, ಪೂರ್ವದಲ್ಲಿ ಬೊಬ್ಬರ್ಯ ಇದ್ದಾರೆ. ಇಲ್ಲಿ ಖಡ್ಗರಾವಣನಿಗೆ ವಿಶೇಷ ಸ್ಥಾನವಿದೆ. ಹಾಗಾಗೆ ಈತನ ಗುಡಿಯನ್ನು ಪ್ರತ್ಯೇಕ ಮತ್ತು ವಿಶೇಷವಾಗಿ ರಚಿಸಲಾಗಿದೆ. ಈ ಗುಡಿಯ ಎದುರು ಕ್ಷೇತ್ರಪಾಲನಿದ್ದಾನೆ. ಇಲ್ಲಿ ಈಶಾನ್ಯಭಾಗದಲ್ಲಿ ಸುಂದರ ಸೋಪಾನಗಳಿಂದ ಕೂಡಿದ ಸದೃಢ ಶಿಲಾಮಯವಾಗಿ ನಿರ್ಮಾಣಗೊಂಡಿರುವ ವಿಶಾಲವಾದ ಕೆರೆಯೂ ಇದೆ. ಕೈಫಿಯತ್ತಿನಿಂದ ಇದರ ವಿವರಣೆ ಈ ಕೆಳಗಿನಂತೆ ತಿಳಿಯಬಹುದು.

[32]"ಬಾರಕೂರ ತಾಲೂಕು, ಪೆರಡೂರ ಮಾಗಣೆ, ಮಾಳಿಗೆ ಹೆಬ್ಬಾರ ಅನಂತಯ್ಯ ನೆಲ್ಲಿ ಸುಬ್ಬಯ್ಯ ಮುಂತಾದವರು ಬರಸಿಕೊಟ್ಟ ಕೈಫಿಯತ್ತು ನಾವು ಪೂರ್ವದಲ್ಲಿ ಪಾರ್ಕಳದ ಗ್ರಾಮದಲ್ಲಿ ರುಕ್ ಶಾಖಾಧ್ಯಯಿ ಆಶ್ವಾಯನ ಸೂತ್ರ ಅಂಗೀರಸ ಗೋತ್ರೊತ್ಪನ್ನನಾದ ಕೃಷ್ಣ ಹೆಬ್ಬಾರಯೆಂಬವನು ಬಹು ಸತ್ಯವಂತನಾಗಿ ತನ್ನ ಸ್ವಕರ್ಮ ನಿರತನಾಗಿ ನಿತ್ಯದಲ್ಲು ಉಡುಪಿ ಅನಂತ ಸೇನ ದೇವರ ಸಂದರ್ಶನವನ್ನೂ ಮಾಡಿಕೊಂಡು ಈ ದೇವರ ಉಪಾಸಕನಾಗಿ ಇರುತ್ತಿದ್ದಲ್ಲಿ" ಮದ್ಯ ತುಳುವ ಪಾಳ್ಯಾಗಾರರಿಂದಾ ಈ ದೇಶದಲ್ಲಿ ಬಹುತರ ಉಪದ್ರವಾದ್ದರಿಂದ ಪೆರಡೂರ ಪಾಳ್ಯಗಾರ ಸಂಕ ಹೆಗ್ಗಡೇನಾ ಸೇರಿಸಿಕೊಂಡು ಈತನ ಆಶ್ರಮದಲ್ಲು ಇರತಕ್ಕ ಬಗ್ಗೆ ತನಗೆ ಆವಾಸಕ್ಕೆ ಸ್ವಲ್ಪ ಸ್ಥಳ ಕೊಡು ಅಂತಾ ಈ ಹೆಗ್ಗಡೆಗೆ ಹೇಳಿದಲ್ಲಿ ಆತನು ಸಂತುಷ್ಟನಾಗಿ ಹನ್ನೊಂದನೆ

ಮುನ್ನೂರು ಎಂಬಿ ಗ್ರಾಮದಲ್ಲು ನಿಮ್ಮಾ ವಿಹಿತ ಚರಣೆ ಮಾಡಿಕೊಂಡು ಇಲಿ ಎಂಬುದಾಗಿ ಹೇಳಿ ಗ್ರಾಮ ನಿರ್ಮಾಣವನ್ನೂ ಮಾಡಿಕೊಟ್ಟು ಆ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟುದರಿಂದಾ ಅಲ್ಲಿ ವಾಸವನ್ನು ಮಾಡಿಕೊಂಡು ಅಲ್ಲಿಂದ ಒಂದು ಉಡುಪಿನ ಅನಂತಸೇನ ದೇವರ ಸಂದರ್ಶನ ಮಾಡುತ್ತಾ ಇರಲಾಗಿ ಶ್ರೀ ದೇವರು ಈತನ ನೇಮವನ್ನು ನೋಡಿ ಬಹಳ ಸಂತುಷ್ಟನಾಗಿ ಪರಮಭಕ್ತನಾದುದರಿಂದಾ ಈತನಿಗೆ ಪ್ರಸನ್ನನಾಗಬೇಕು ಅಂತ ಒಂದು ದಿವಸ ಸ್ವಪ್ನದಲ್ಲಿ ನೆಲ್ಲಿಕಾರಿನಲ್ಲಿ ತನಗೆ ದೇವಸ್ಥಾನ ನಿರ್ಮಾಣ ಮಾಡಲು ಹೇಳಿದ್ದಾಗಿ ಈ ಕೈಫಿಯತ್ತು ವಿವರಿಸುತ್ತದೆ.

ಹಿಂದೂ ಧರ್ಮಕ್ಕೆ ಅನ್ವಯಿಸಿದ ಪುರಾತನ ಧಾರ್ಮಿಕ ಗ್ರಂಥಗಳಲ್ಲಿ ಹೇಳಿರುವ ಕತೆಗಳನ್ನೂ, ಅಂದರೆ ಲೌಕಿಕ ವ್ಯಕ್ತಿ ಮತ್ತು ವಿಷಯಗಳಿಗೆ ಸಂಬಂಧಿಸದೆ, ಅಲೌಖಿಕ ವಿಚಾರಗಳನ್ನು ಕುರಿತಾದ ಘಟನೆಗಳನ್ನು ವರ್ಣಿಸುವ ಕಥೆಗಳೇ ಪುರಾಣ ಕಥೆಗಳು. ದೇವಾಲಯಕ್ಕೆ ಸಂಬಂಧ ಪಟ್ಟ ಕೈಫಿಯತ್ತುಗಳಲ್ಲಿ ಕೆಲವು ಕೈಫಿಯತ್ತುಗಳು ಪೌರಾಣಿಕ ಅಭಾಸವನ್ನು ಮೆರೆದಿದೆ. ಕಾಪಿನ ದೇವಸ್ಥಾನದ ಕೈಫಿಯತ್ತಿನಲ್ಲಿ ಭಾರ್ಗವ ಋಷಿಗಳು ಪಿಲಾರಕಾನ ಎಂಬ ಕಾಡಿನಲ್ಲಿ ತಪಸ್ಸು ಮಾಡಿಕೊಂಡಿದ್ದನೆಂದೂ ಅಲ್ಲಿಯೇ ಅವರು ಈಶ್ವರನ ಪ್ರತಿಷ್ಠೆಯನ್ನು ಮಾಡಿದರೆಂದೂ ಕೈಫಿಯತ್ತಿನಿಂದ ತಿಳಿದುಬರುತ್ತದೆ. ಭಾರ್ಗವ ಋಷಿಗಳು ಸಮುದ್ರ ಸ್ಥಾನ ಮಾಡಲು ಒಮ್ಮೆ ಬಂದಿದ್ದಾಗ ದಡದಲ್ಲಿದ್ದ ಸರೋವರದಲ್ಲಿ ಸ್ನಾನ ಮಾಡಿ, ಆ ಸರೋವರದಲ್ಲಿ ಕಮಲೋತ್ಪತ್ತಿ ಆಗುವಂತೆ ವರಕೊಟ್ಟರು. ಬಳಿಕ ವಾಸುದೇವ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರೆಂದು ಕೈಫಿಯತ್ತಿನಲ್ಲಿ ಬರುವ ವಿವರ ಪೌರಾಣಿಕ ಅಭಾಸದಂತೆ ಭಾಸವಾಗುತ್ತದೆ.

ಎಲ್ಲೂರ ದೇವಸ್ಥಾನದ ಕೈಫಿಯತ್ತಿನಲ್ಲಿ ಶಿವನು ಕನಸಿನಲ್ಲಿ ಕಾಣಿಸಿಕೊಂಡು, ತಾನು ಲಿಂಗರೂಪದಲ್ಲಿ ಆವಿರ್ಭಸುತ್ತನೆಂದು ಹೇಳುವುದು, ಭಾರ್ಗವ ಋಷಿಗಳು ವಿಶ್ವನಾಥ ಲಿಂಗದರ್ಶನಕ್ಕೆಂದು ಬರುವುದು. ಅವರು ಅಲ್ಲಿ ನಾಲ್ಕು ದೇವಾಲಯಗಳನ್ನು ನಿರ್ಮಿಸುವುದು ಇವೆಲ್ಲ ಪೌರಾಣಿಕತೆಯ ಲೇಪವನ್ನು ಪಡೆದಿದೆ.

ಬಳಿಸಾಗರದ ದೇವಾಲಯದ ಕೈಫಿಯತ್ತಿನಲ್ಲಿ, ಪೂರ್ವಾರ್ಧ ಪೌರಾಣಿಕ ವೇಷ ಧರಿಸಿ ಪವಾಡಾದಿಗಳು ನಡೆಯುವ ಮಹಿಮೆಯನ್ನು ಬಿಂಬಿಸುತ್ತವೆ. ಇಲ್ಲಿ ಮಹಾಲಿಂಗೇಶ್ವರ ದೇವರ ಪ್ರತಿಷ್ಠೆ ಖರಾಸುರನಿಂದ ಶಾಲಿವಾಹನ ಶಕ ೧೫೧೭ನೇ ಜಯ ಸಂವತ್ಸರದ ಕಾರ್ತಿಕದಲ್ಲಿ ನಡೆದುದೆಂದು ಕೈಫಿಯತ್ತು ಉಲ್ಲೇಖಿಸುತ್ತದೆ. ಇದು ಯಾವ ಖರಾಸುರನೆಂದು ತಿಳಿಸಿಲ್ಲ. ಇಷ್ಟಕ್ಕೂ ೧೬ನೆಯ ಶತಮಾನದಲ್ಲಿಯೂ ಇಂತಹ ಒಬ್ಬ ಖರಾಸುರನಿದ್ದನೆಂದು ನಂಬಲು ಯೋಚಿಸಬೇಕಾಗುತ್ತದೆ.

[33]"ಕುಂಬಕಾಸಿ ಸ್ಥಳದ ಕುಂಬೇಶ್ವರ ಮಾಹಾತ್ಮ್ಯೆ ಎಂಬ ಕೈಫಿಯತ್ತು ಸಂಪೂರ್ಣವಾಗಿ ಪುರಾಣದ ಲೇಪ ಬಳಿದುದಾಗಿದೆ. ಕೈಫಿಯತ್ತಿನ ಪ್ರಕಾರ ಪದ್ಮ ಪುರಾಣದ ಪುಷ್ಕರಖಂಡದ ೬೫ರಿಂದ ೮೯ನೇ ಅಧ್ಯಾಯಗಳಲ್ಲಿ ಅಂದರೆ ೨೪ ಅಧ್ಯಾಯಗಳಲ್ಲಿ ಈ ಸ್ಥಳದ ಮಹಾತ್ಮ್ಯೆ ವರ್ಣಿತವಾಗಿದೆಯೆಂದು ಕೈಫಿಯತ್ತನ್ನು ಬರೆದವರು ಹೇಳುತ್ತಾರೆ. ಇದನ್ನು ಬರೆದವರು ಇಬ್ಬರು ಒಬ್ಬ ಸ್ಥಳದ ಪುರಾಣಿಕ ರಾಮಭದ್ರಾಚಾಯಃ ಮತ್ತೊಬ್ಬ ಅರ್ಚಕ ವೆಂಕಣ್ಣ ಭಟ್ಟ. ಪುರಾಣಿಕ ತನ್ನ ಹೆಸರಿಗನುಸಾರವಾಗಿ ಇದರಲ್ಲಿ ತನ್ನ ಸಂಪೂರ್ಣ ಪೌರಣಿಕ ಜ್ಞಾನವನ್ನು ವೆಚ್ಚ ಮಾಡಿದ್ದಾನೆ. ಇದರಲ್ಲಿ ನಿಜವಾದ ಪುರಾಣೋಕ್ತವೆಷ್ಟು. ಅವನ ಸ್ವಕಲ್ಪಿತವೆಷ್ಟೆಂದು ತಿಳಿಯಲೂ ಮೂಲದೊಡನೆ ತುಲನೆ ಮಾಡಿ ಅಧ್ಯಯನ ಮಾಡಬೇಕು. ಕುಂಭಾಸುರನೆಂಬ ರಾವಣನ ಮಗ ರಾಮಬಾಣದಿಂದ

ತಪ್ಪಿಸಿಕೊಂಡು ಸಮುದ್ರದಿಂದ ಬಿದ್ದು ಬಂದು ಈ ಹರಿಕ್ಷೇತ್ರದಲ್ಲಿ ಒಂದು ಗುಹೆಯನ್ನು ಸೇರಿಕೊಂಡನು. ಮುಂದೆ ಇವನನ್ನೂ ಭೀಮನ ವಧೆಮಾಡಿದನು. ಅಂದಿನಿಂದ ಇದಕ್ಕೆ ಕುಂಬಾ ಕ್ಷೇತ್ರವೆಂದು ಹೆಸರಾಯ್ತು ಎಂದು ಕೈಫಿಯತ್ತಿನಲ್ಲಿ ಹೇಳಿದೆ. ಇನ್ನೂ ಒಂದು ವ್ಯುತ್ಪತ್ತಿ-ಈಶ್ವರ ಕುಂಭದಿಂದ ಉತ್ಪನ್ನನಾದ. ಆದುದರಿಂದ ಈ ಕ್ಷೇತ್ರಕ್ಕೆ ಕುಂಭಾಸಿಯೆಂಬ ಹೆಸರು ಇತ್ತು. ಇಲ್ಲಿ ಪಾಂಡವರು ಕೇಶವ ದೇವರನ್ನು ಸ್ಥಾಪಿಸಿದರು. ಆ ನಂತರ ಅವರು ದತ್ತಿಕೊಟ್ಟು ನಡೆಸಿಕೊಂಡು ಎಂಬುದಕ್ಕೆ ಶಾಸನದ ಆಧಾರವಿದೆ ಎಂದೂ, ಇದು ಮಹಾಮಹಿಮೆಯ ಸ್ಥಳವೆಂದೂ, ಕೈಫಿಯತ್ತು ಮುಗಿಯುತ್ತದೆ. ಪಾಂಡವರು ದತ್ತಿಕೊಟ್ಟುದಕ್ಕೆ ಶಾಸನಧಾರವಿದೆಯೆಂಬುದು ನಿಶ್ಚಯವಾಗಿಯೂ ಪುರಣಾದ ಹೇಳಿಕೆಯಲ್ಲ. ಮೆಕೆನ್ಜಿ, ಇಂತಹ ಸ್ಥಳದ ಐತಿಹ್ಯಗಳನ್ನು ಸಂಗ್ರಹಿಸುವುವಾಗ, ಅವನ ದೃಷ್ಟಿಗೆ ಇಂತಹ ಆಧಾರಗಳು ಬೇಕಾಗುತ್ತಿದ್ದುವಾದ್ದರಿಂದ, ಅವನಾಗಲೀ ಅವನು ನಿಯಮಿಸಿದ ಅವನ ಜನರಾಗಲೀ ಕೇಳುತ್ತಾರೆಂಬುದಕ್ಕಾಗಿ, ಹಿಂದೆ ಮುಂದೆ ನೋಡದೆ ಶಾಸನಾಧಾರವಿದೆ-ಎಂದು ಕೈಫಿಯತ್ತಿನ ಕರ್ತೃ ಹೇಳಿಬಿಟ್ಟಿದ್ದಾನೆ".

ಹೀಗೆ ದೇವಾಲಯಗಳ ಕೈಫಿಯತ್ತುಗಳಲ್ಲಿ ಕೆಲವು ಕಥೆಗಳು ಪೌರಾಣಿಕ ಲೇಪವನ್ನು ಪಡೆದಿದ್ದರೆ, ಇನ್ನು ಕೆಲವು ಕೈಫಿಯತ್ತುಗಳು ಪೌರಾಣಿಕ ಅಭಾಸದಂತೆ ತೋರುತ್ತವೆ. ಬಳಿಸಾಗರ ದೇವಾಲಯದ ಕೈಫಿಯತ್ತಿನಲ್ಲಿ ನಂಬಲಾರದ ಕಥೆಯನ್ನು ಹೇಳಿದರೆ, ಶಾಸನಾಧಾರವಿಲ್ಲದೆ ಪುರಾಣದಲ್ಲಿ ಶಾಸನಾಧಾರವಿದೆಯೆಂದು ನಿರೂಪಿಸುವುದು ಕುಂಬಕಾಸಿ ಸ್ಥಳದ ಕಂಬೇಶ್ವರ ಮಹಾತ್ಮ್ಯೆ ಎಂಬ ಕೈಫಿಯತ್ತಿನಿಂದ ಕಂಡು ಬರುತ್ತವೆ.

೩. ೪. ಆರಾಧನೆಗಳು

ಕೈಫಿಯತ್ತುಗಳನ್ನು ಬರೆಸಿದ ಆಗಿನ ಕಾಲದಲ್ಲಿ ಚಿಕ್ಕ ಚಿಕ್ಕ ರಾಜರುಗಳು, ತುಂಡರಸರುಗಳ, ಪಾಳೆಗಾರರು ನಡೆಸುತ್ತಿದ್ದ ಪರಸ್ಪರ ಪೈಪೋಟಿ, ಸ್ಪರ್ಧೆ, ಮತ್ಸರ ಮುಂತಾದವು ಪ್ರಜಾ ಸಮೂಹದ ಜೀವನಕ್ಕೆ ಶಾಂತಿಯನ್ನು ನೆಮ್ಮದಿಯನ್ನು ಒದಗಿಸದೆ ಅಸ್ಥಿರತೆಯಿಂದ ಕೂಡಿತು. ಅದು ಕೊನೆಗೊಮ್ಮೆ ಬ್ರಿಟಿಷರ ಕೈಗೆ ರಾಜ್ಯಬಂದ ಮೇಲೆ ಸುಧಾರಿಸತೊಡಗಿತು. ಇದುವರೆಗೆ ಸಮಾಜದಲ್ಲಿ ವ್ಯವಸ್ಥಿತ ರೀತಿಯಲ್ಲಿ ವಿದ್ಯಾಪ್ರಸಾರ ವಿಲ್ಲದೇಯಿದ್ದುದರಿಂದ, ಜನ ಸಾಮಾನ್ಯರಲ್ಲಿ ಪರಂಪರಾಗತವಾಗಿ ಬಂದ ಕೆಲವು ವಿಶಿಷ್ಟ ಆರಾಧನೆ, ಸಂಪ್ರದಾಯಗಳು ರೂಢಿಯಲ್ಲಿದ್ದವು. ಜನರು ತಾವು ನಂಬಿಕೊಂಡು ಬಂದಿದ್ದ ದೇವರುಗಳನ್ನು ಸಾತ್ವಿಕ ಮತ್ತು ತಾಮಸ ಆರಾಧನೆಗಳ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ದೇವಾಲಯ, ಬಸದಿಗಳಲ್ಲಿ ಹಣ್ಣು, ಕಾಯಿ, ಹೂ ಮುಂತಾದ ಸಾತ್ವಿಕ ವಸ್ತುಗಳಿಂದ ಆರಾಧನೆ ನಡೆಸುತ್ತಿದ್ದರೆ, ಮಾರಿಗುಡಿ, ಭೂತಾರಾಧನೆ ಮುಂತಾದುವುಗಳಲ್ಲಿ ಕೋಳಿ, ಕುರಿ, ಕೋಣ ಕೆಲವೊಮ್ಮೆ ಮನುಷ್ಯನನ್ನು ಬಲಿ ಕೊಡುವ ಸಂಪ್ರದಾಯವಿತ್ತು. ಇವುಗಳ ಸೂಚನೆ ಕೈಫಿಯತ್ತಿನಲ್ಲಿ ದೊರಕುತ್ತವೆ. ಉದಾ: ಚೌಟರಸರ ಕೈಫಿಯತ್ತಿನಲ್ಲಿ ದೈವಂತೆ ದೇವತೆಗೆ ಬಲಿ ಕೊಡುವ ಉಲ್ಲೇಖವಿದೆ. ಕೆಲವೊಮ್ಮೆ ಈ ಆರಾಧನೆಗಳನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದ ಸಂದರ್ಭಗಳೂ ಇದ್ದವು. ಕೆಲವು ಕಟ್ಟು ಕಥೆಗಳನ್ನೇ ನಿಜವೆಂದು ಜನರು ನಂಬಿಕೊಳ್ಳುವಂತಾಗಿತ್ತು. ಈ ಹಿನ್ನೆಲೆಯಲ್ಲಿ ಕೈಫಿಯತ್ತುಗಳನ್ನೂ ಪರಿಶೀಲಿಸಿದರೆ ಅದರ ಭಾಷೆ ಮತ್ತು ಬರವಣಿಗೆಯೇ ಆಗಲಿ ಅಥವಾ ಮತಗಳನ್ನು ಕುರಿತ ವಿವರಗಳೇ ಆಗಲಿ ಬರಹಗಾರನ ಪಾಂಡಿತ್ಯ ಪ್ರಬುದ್ಧತೆಯಿಂದ ಕೂಡಿರುವುದು ಅಷ್ಟಾಗಿ

ಕಂಡುಬರುವುದಿಲ್ಲ. ಆದರೆ ಕೆಲವು ಕೈಫಿಯತ್ತುಗಳು ಮಾತ್ರ ತಕ್ಕಮಟ್ಟಿಗೆ ಬರಹಗಾರನ ಪ್ರಬುದ್ಧತೆಯನ್ನೂ, ಪಾಂಡಿತ್ಯ, ಅನುಭವಗಳನ್ನು ಪ್ರದರ್ಶಿಸುತ್ತವೆ.

೩.೪.೧. ನಂಬಿಕೆ ಮತ್ತು ಆಚರಣೆಗಳು

ಕೈಫಿಯತ್ತುಗಳಿಂದ ಆಗಿನ ಕಾಲದ ತುಳುನಾಡಿನ ನಂಬಿಕೆ ಮತ್ತು ಆಚರಣೆಯನ್ನು ಈ ಕೆಳಗಿನಂತೆ ತಿಳಿಯಬಹುದು. ಜನರು ಕಷ್ಟಬಂದಾಗ ಏಕ ಭಕ್ತಿಯಿಂದ ದೇವರನ್ನು ಸ್ಮರಿಸಿಕೊಂಡು ಉಪವಾಸಾದಿ ವ್ರತಗಳನ್ನು ಮಾಡುತ್ತಿದ್ದರು. ಇದು ಚೌಟರಸ ಮತ್ತು ಕಾರ್ಕಳ ಅರಸರ ಕೈಫಿಯತ್ತಿಗಳಲ್ಲಿ ದಾಖಲಾಗಿವೆ. ಅರಸರು ಮನೆಯಿಂದ ಹೊರಡುವ ಮುನ್ನ ಸ್ನಾನ ಕರ್ಮಗಳನ್ನು ಮುಗಿಸಿ ಮಡಿ ಬಟ್ಟೆಯುಟ್ಟು ಕುಲದೇವರಿಗೆ ಪ್ರಾರ್ಥನೆ ಮಾಡುವ ಉಲ್ಲೇಖವು 'ಚೌಟ ಅರಸರ ಕೈಫಿಯತ್ತಿ'ನಿಂದ ನಮಗೆ ಗೋಚರಿಸುತ್ತದೆ.

ಯಾವುದೆ ಕಟ್ಟಡವನ್ನು ಕಟ್ಟಬೇಕಾದ ಸಂದರ್ಭಬಂದಾಗ ಮೊದಲು ತಮ್ಮ ಇಷ್ಟದೇವತೆಗಳಿಗೆ ಪ್ರಾರ್ಥನೆ, ಹರಕೆ ಸಲ್ಲಿಸುತ್ತಿದ್ದರು 'ಪ್ರಾಣಿಬಲಿ' ಕೊಡುವ ಉಲ್ಲೇಖವು 'ಚೌಟ ಅರಸರ ಕೈಫಿಯತ್ತಿ'ನಿಂದ ತಿಳಿದು ಬಂದಿರುವುದನ್ನು ಮೇಲೆ ಉಲ್ಲೇಖಿಸಲಾಗಿದೆ. ಚನ್ನರಾಯ ಚೌಟನ ಅಳಿಯ ವರದೈಯನು ಕಾಸರಕನ ಮರ ಕಡಿದು ನೆಲವನ್ನು ಸಮತಟ್ಟು ಮಾಡುವಾಗ ಒಂದು ಕೊಪ್ಪರಿಗೆ ದ್ರವ್ಯ ಸಿಕ್ಕಿತು. ಆಗ ದೈವಂತೆಯೆಂಬ ದೇವತೆಯು ಕಾಣಿಸಿಕೊಂಡಾಗ ಅದಕ್ಕೆ ಪ್ರಾರ್ಥನೆ ಮಾಡಿ ಬಲಿಕೊಟ್ಟು ಅದಕ್ಕೂ ಒಂದು ಗುಡಿಯನ್ನು ಕಟ್ಟಿಸಿದನೆಂದು ತಿಳಿಸಲಾಗಿದೆ. ಅರಮನೆಗಳನ್ನು ಕಟ್ಟುವ ಮೊದಲು 'ಕೆಸರುಕಲ್ಲು' ಹಾಕಿ ಜಾಗ ನಿಶ್ಚಯ ಮಾಡುತ್ತಿದ್ದರು. ಅರಮನೆ ಕಟ್ಟಿಯಾದ ಮೇಲೆ ಅದರ ಇನ್ನೊಂದು ಭಾಗದಲ್ಲಿ ದೇವರ ಗುಡಿಯನ್ನು ಕಟ್ಟುತ್ತಿದ್ದ ವಿವರವೂ ನಮಗೆ ಕಂಡುಬರುತ್ತವೆ.

ಮಠ, ದೇವಾಲಯ ಯಾವುದೇ ಇರಲಿ ಅದರ ಜೊತೆಗೆ ಒಂದಲ್ಲೊಂದು ರೀತಿಯಿಂದ ಸ್ಥಳೀಯರಲ್ಲಿ ಪ್ರಚಲಿತವಿರುವ ಭೂತಾರಾಧನೆಯ ಪ್ರಸ್ತಾಪ ಕಂಡುಬರುತ್ತದೆ. ಸಾಮಾನ್ಯ ವರ್ಗದ ವಿಶಿಷ್ಟ ಸಂಪ್ರದಾಯ ಇದಾದರೂ ಸಮಾಜದ ಎಲ್ಲಾ ವರ್ಗದವರನ್ನು ಒಂದುಗೂಡಿಸುವ ಶಕ್ತಿ ಇದಕ್ಕಿದೆ ಎಂದು ಬಹುಜನ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಾಚೀನ ತುಳುನಾಡಿನಲ್ಲಿ ಭೂತಾರಾಧನೆಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಅಜಿಲ ಅರಸರು ಭೂತ ಸ್ಥಾನವನ್ನು ನಿರ್ಮಿಸಿದರೆಂದು ಅಜಿಲ ಅರಸರ ಕೈಫಿಯತ್ತಿನಿಂದ ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರತಿ ಮಾಗಣೆಗೊಂದರಂತೆ ಭೂತ ಸ್ಥಾನಗಳಿದ್ದವು. ಪ್ರಮುಖವಾದ ಸ್ಥಳಗಳಲ್ಲಿ ಮಾರಿಯಮ್ಮನ ಗುಡಿಯೂ ಇತ್ತು. ದೈವಕ್ಕೆ ಕೆಲವು ವಿಶಿಷ್ಟ ವ್ಯಕ್ತಿಗಳ ಮೂಲಕ ಮಾತ್ರ ಹರಕೆ ಸಂದಾಯವಾಗಬೇಕಿತ್ತು. ಜನ ಸಾಮಾನ್ಯರಿಂದಾಗಲೀ, ರಾಜರಿಂದಾಗಲೀ ನೇರವಾಗಿ ಹರಕೆಯನ್ನು ಸ್ವೀಕರಿಸದು ಎಂದು ಕೈಫಿಯತ್ತುಗಳ ಮೂಲಕ ನಮಗೆ ತಿಳಿದು ಬರುತ್ತದೆ. ಉತ್ತರ ದೇಶದಿಂದ ಬಂದ ಬಾಲ ಬಲ್ಲಾಳನು ಸರಕಾರಕ್ಕೆ ಅರಿಕೆಮಾಡಿ, ಬಲ್ಲಾಳಿಕೆಯ ಪಟ್ಟ ಪಡೆದನು. ಅವನಿಗೆ ಮರಳುಭೂತ ಪಟ್ಟದ ದೈವವಾಗಿತ್ತು. ನೆರಂಕಿಯ ಅರಸನು ಬಲ್ಲಾಳನ ರಾಜ್ಯವನ್ನು ಅಪಹರಿಸಲು ಯೋಚಿಸಿದನು. ಅದಕ್ಕಾಗಿ ಅವನ ಅರಮನೆಯಲ್ಲಿ ಈ ಬಲ್ಲಾಳನ ಭೂತಕ್ಕೆ ಕೋಲ ಕೊಡಿಸಿ ಭೂತ ಅಲ್ಲಿರುವ ಸಮಯದಲ್ಲಿ ಬಲ್ಲಾಳನನ್ನು ಕೊಲೆ ಮಾಡಬಹುದೆಂದು ಯೋಚಿಸಿ ಕದಿಕಾರ ಗುತ್ತಿನವನ ಸಂಗಡ ಜನ ಕಳುಹಿಸಿದನು. ಗುತ್ತಿನವನು ಬಲ್ಲಾಳನನ್ನು ಕೊಲೆ ಮಾಡುವ ಉದ್ದೇಶದಿಂದ ಮರದಾಳಕ್ಕೆ ಬರುವಾಗ, ಬಲ್ಲಾಳನು ಶಿವಪೂಜೆಯಲ್ಲಿ ನಿರತನಾಗಿದ್ದನು.

ಕೊಲೆಗಡುಕರು ಬಂದಾಗ ಬಲ್ಲಾಳನು ಅಂಥಾ ದೈವವಿದ್ದರೆ ಕಾಳಗ ಮಾಡಲಿ ಎಂದು ಹೇಳಿದನು. ಆಗ ದೈವ ಕತ್ತಿ ತೆಗೆದುಕೊಂಡು ಹೋಗಿ ಕದಿಕಾರ ಗುತ್ತಿನವನ ತಲೆ ಕಡಿದು, ಅವರ ಬೆಂಬಲಿಗರ ನೇಕರನ್ನು ಕೊಂದು ಹಾಕಿತು. ಕದಿಕಾರ ಗುತ್ತಿನವನ ತಲೆ ಬಿದ್ದಲ್ಲಿ ಬಲ್ಲಾಳನು ಭೂತಕ್ಕೆ ಎರಡು ನೆಲೆಯ ಮಾಡನ್ನು ಕಟ್ಟಿಸಿ ಭೂತಕ್ಕೆ ಹೊಲದ ದತ್ತಿ ಕೊಟ್ಟನು. ಹೀಗೆ ತಮ್ಮ ತಮ್ಮ ಅಂತಸ್ತಿಗನುಸರಿಸಿ ದೇವರು ದೈವಗಳನ್ನೆರಡನ್ನೂ ಇಲ್ಲಿನ ಅರಸರು ಮತ್ತು ಜನಸಾಮಾನ್ಯರು ನಂಬಿಕೊಂಡು ಬರುತ್ತಿದ್ದರೆಂದು ಕೈಫಿಯತ್ತುಗಳ ಮೂಲಕ ದೃಢಪಡಿಸಬಹುದು.

೩. ೪. ೨. ಸ್ವಪ್ನದಲ್ಲಿ ನಂಬಿಕೆ

ಜನರು ಸ್ವಪ್ನದಲ್ಲಿ ಕಂಡುಬರುವ ಘಟನೆಗಳನ್ನು ನಂಬಿ ಅದಕ್ಕೆ ವಿಧಿವತ್ತಾಗಿ ನಡೆದುಕೊಳ್ಳುವ ಅಂಶ ಕೈಫಿಯತ್ತುಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ ಕುಂದಾಪೂರೆ ಕೈಫಿಯತ್ತಿನಲ್ಲಿ 'ಕನ್ಯಾಕುಮಾರಿ' ಎಂಬ ಧರ್ಮದೇವತೆ ಬಲ್ಲಾಳತಿಗೆ ಕನಸಿನಲ್ಲಿ ಕಾಣಿಸಿಕೊಂಡು ಇದೇ ನೆಲ್ಯಾಡಿ ಬೀಡಿನವರು ನಾವು ಈ ಸ್ಥಳದಲ್ಲಿ ಮಂಚ ಇಟ್ಟು ದೀಪಹಚ್ಚಿ ಪೂಜೆ ಮಾಡಿಕೊಂಡು ಬನ್ನಿ ನೀವು ಇದೇ ಬೀಡಿನ ಪಕ್ಕದಲ್ಲಿ ಬದಲು ಬೀಡು ಕಟ್ಟಿಕೊಂಡು ಅಲ್ಲೇ ಇರಿ. ನಿತ್ಯಗಟ್ಲೆ ಸೇವೆ ಮಾಡಿರಿ. ಮುಂದೆ ನಿಮ್ಮ ಸಂತಾನ ಪಾರಂಪರ್ಯವಾಗಿ ಸೇವೆ ತೆಗೆದುಕೊಳ್ಳುತ್ತೇವೆ. ಕಾರ್ಯಕಾರಣ ಬಹಳವಿದೆ' ಎಂದು ಅಪ್ಪಣೆ ಮಾಡುತ್ತಾಳೆ. ಇದನ್ನು ಶ್ರದ್ಧಾಭಕ್ತಿಯಿಂದ ನಂಬಿ ಅಮ್ಮು ಬಲ್ಲಾಳತಿ ಈ ಅಪ್ಪಣೆಯನ್ನು ನೆರವೇರಿಸುತ್ತಾಳೆ.

ಬಾರಕೂರು ಸಂಸ್ಥಾನದ ಕೈಫಿಯತ್ತಿನಲ್ಲಿ ಸ್ವಪ್ನದ ವಿಚಾರ ಈ ರೀತಿ ತಿಳಿದುಬರುತ್ತದೆ. ಮಾರ್ಕಂಡೇಯ ತಪಸ್ಸು ಮಾಡಿದ ಸ್ಥಳದಲ್ಲಿ ಶಿವಲಿಂಗ ಪ್ರತಿಷ್ಠಾಪನೆಯಾಗಿದೆ. ಅದನ್ನು ಮಾರ್ಕಂಡೇಶ್ವರ ಎಂದು ಕರೆಯುತ್ತಾರೆ. ಪಂಚಲಿಂಗೇಶ್ವರ ದೇವಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಒಂದು ಗುಹೆಯಿದೆ. ಇದರಲ್ಲೊಂದು ಬಾವಿ ಇದೆ. ಅದರ ಬಾಯನ್ನೂ ಶಿಲೆಯಿಂದ ಮುಚ್ಚಿದೆ. ಪೂರ್ವದಲ್ಲಿ ಈ ರಸಬಾವಿಗೆ ಕಬ್ಬಿಣ ಮುಂತಾದುವನ್ನು ಹಾಕಿದರೆ ಅದು ಕೂಡಲೆ ಚಿನ್ನವಾಗುತ್ತಿತ್ತು. ಇದಕ್ಕೆ ಪೂರ್ವ ಗ್ರಂಥಾಧಾರವಿದೆ, ಹೊರತು ಬೇರೇನೂ ಇಲ್ಲ. ಮಾರ್ಕಂಡೇಯನೇ ಇದಕ್ಕೆ ಶಿಲೆಯನ್ನು ಮುಚ್ಚಿದನು. ಮುಂದೆ ಭೂತ ಪಾಂಡ್ಯರಾಯನು ಈಶ್ವರನ ಪಾರ್ಶ್ವಪತಿಯಾದ ಕುಂಡೋದರನನ್ನೂ ಭಜಿಸುತ್ತಿರಲು, ಅವನಿಗೆ ಸ್ವಪ್ನವಾಗಿ ಆತ ಈ ರಸಬಾವಿಯ ಶಿಲೆಯನ್ನು ತೆಗೆಸಿ, ಸುವರ್ಣ ವೃದ್ಧಿಮಾಡಿಕೊಂಡು ಪ್ರಜೆಗಳನ್ನು ಧರ್ಮದಿಂದ ಪಾಲಿಸಿದನು. ಈ ರಾಜನಿಗೆ ನವರತ್ನ ಖಚಿತವಾದ ಸಿಂಹಾಸನವೊಂದು ಭೂಮಿಯಿಂದ ಮೇಲೆ ಬಂದುದು ದೊರೆಯಿತು. ಈಗಲೂ ಸಿಂಹಾಸನವಿದ್ದ ಜಾಗವಿದೆ. ಇಲ್ಲಿ ನವರಾತ್ರೆಯಲ್ಲಿ ವಿಜಯದಶಮಿಯವರೆಗೆ ವಿಶೇಷ ಉತ್ಸಹಗಳು ನಡೆಯುತ್ತವೆಂದು ಕೈಫಿಯತ್ತಿನಿಂದ ಸ್ಪಷ್ಟವಾಗುತ್ತದೆ.

೩. ೪. ೩. ಇತರ ನಂಬಿಕೆಗಳು

ಇತರ ಕೆಲವು ವಿಚಿತ್ರ ನಂಬಿಕೆಗಳು ಜನರಲ್ಲಿ ರೂಢಗತವಾಗಿದ್ದುದನ್ನು ಕೈಫಿಯತ್ತುಗಳು ನಮಗೆ ತಿಳಿಸುತ್ತವೆ. ಉದಾಹರಣೆಗೆ ಕಡಬ ಸಂಸ್ಥಾನದ ಕೈಫಿಯತ್ತಿನಲ್ಲಿ ರಸ ಸ್ಪರ್ಶದಿಂದ ಕಬ್ಬಿಣ ಚಿನ್ನವಾಗುವುದೆಂಬ ನಂಬಿಕೆಯನ್ನು ಕಾಣುತ್ತೇವೆ. ಪುರಾಣ ಕಾಲದಲ್ಲಿ ಈಶ್ವರನವೀರ್ಯ ಭೂಮಿಯ ಮೇಲೆ ಬಿದ್ದು, ಅದರ ದರವೆಗಳು ಹರಿದು ಮಂಗಳೂರು, ಕಾಸರಗೋಡು, ಬಾರಕೂರು ಮತ್ತು ಕಡಬ ಎಂಬ ನಾಲ್ಕು ಸ್ಥಳಗಳಲ್ಲಿ

ರಸಕೂಪಗಳಾದುವು ಎಂಬ ವಿವರವಿದೆ. ಬಾರಕೂರು ಕೈಫಿಯತ್ತಿನಲ್ಲೂ ಇದರ ಪ್ರಸ್ತಾಪ ಬರುತ್ತದೆ. ಮಯೂರವರ್ಮನ ಸಂತತಿಯ ಅರಸ ಬೇಟೆಗೆ ಬಂದವನು ಈ ರಸಕೂಪವನ್ನು ಕಂಡುಹಿಡಿದನು. ಪ್ರಜೆಗಳಿಂದ ಕಂದಾಯದ ಬದಲಿಗೆ ಹಳೆಯ ನೇಗಿಲ ಗುಳಗಳ್ನು ಸಂಪಾದಿಸಿ ಅದನ್ನು ಚಿನ್ನ ಮಾಡಿಕೊಳ್ಳುತ್ತಿದ್ದನು. ಎಂದು ಕಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಹೇಳಿದೆ. ಬಾರಕೂರು ಸಂಸ್ಥಾನದ ಕೈಫಿಯತ್ತಿನ ಹೇಳಿಕೆಯಂತೆ ಅಲ್ಲಿ ಸಿದ್ದೇಶ್ವರ ದೇವಾಲಯವೊಂದಿದೆ. ಅದರ ಪ್ರಕಾರದ ಒಳಗೆ ಈಶ್ವರಾನುಗ್ರಹದಿಂದ ಬಂದಂತಹ ಸಿದ್ದರಸದ ಬಾವಿಯಿತ್ತು. ಭೂತಪಾಂಡ್ಯರಾಯನ ಮಗ ಈ ಬಾವಿಯನ್ನುಕೊಂಡು ಸಂತೋಷದಿಂದ ರಾಜ್ಯಭಾರ ಮಾಡಿದನು ಎಂದಿದೆ.

ಹೀಗೆ ಪ್ರಾಚೀನ ತುಳುನಾಡಿನ ಜನರಲ್ಲಿ ವಿವಿಧ ರೀತಿಯ ನಂಬಿಕೆಗಳು ರೂಢಿಯಲ್ಲಿದ್ದವೆಂದು ಕೈಫಿಯತ್ತುಗಳ ಮೂಲಕ ತಿಳಿಯಬಹುದು. ಯಾವುದೇ ದೇಶದ ಸಂಸ್ಕೃತಿಯನ್ನು ವಿಶ್ಲೇಷಿಸಿದರೂ ಈ ತರದ ಪೌರಾಣಿಕ, ಜಾನಪದೀಯ ಅಂಶಗಳು ಅವರ ಬದುಕಿನ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಮನುಷ್ಯನ ನಾಗರಿಕತೆ ಬೆಳೆದು ಬಂದಂತೆ ಈ ರೀತಿಯ ನಂಬಿಕೆಗಳು ತಮ್ಮ ಮೂಲ ಸ್ವರೂಪ ಕಳೆದುಕೊಳ್ಳುತ್ತಿರುವುದನ್ನು ಇಂದು ನಾವು ಗಮನಿಸಬಹುದು.

◆◆◆

ಅಡಿಟಿಪ್ಪಣಿಗಳು

1. ಡಾ. ಯಸ್. ಡಿ. ಶೆಟ್ಟಿ : ತುಳುಸಾಹಿತ್ಯ ಚರಿತ್ರೆ ಪುಟ ಸಂ. 52
2. (ಸಂ) ಕೆ. ಕುಶಾಲಪ್ಪ ಗೌಡ, ಕೆ. ಚಿನ್ನಪ್ಪ ಗೌಡ : ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 221
3. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸ. 309
4. (ಸಂ) ಕೆ. ಕುಶಾಲಪ್ಪ ಗೌಡ, ಕೆ. ಚಿನ್ನಪ್ಪ ಗೌಡ : ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 224
5. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 374
6. (ಸಂ) ಕೆ. ಕುಶಾಲಪ್ಪ ಗೌಡ, ಕೆ. ಚಿನ್ನಪ್ಪ ಗೌಡ : ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 223
7. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 237
8. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 223
9. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 320
10. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 324
11. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 370
12. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 251
13. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 253
14. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 257
15. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 316
16. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 153
17. (ಸಂ) ಡಿ. ಮಂಜಯ್ಯ ಹೆಗ್ಗಡೆ ಧರ್ಮಸ್ಥಳ ಪ್ರಕಟ : ಶ್ರೀ ಕ್ಷೇತ್ರ ಧರ್ಮಸ್ಥಳದ ಇತಿಹಾಸ ಪು. ಸಂ. 9
18. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 304
19. ಡಾ. ಯಸ್. ಡಿ. ಶೆಟ್ಟಿ : ಧರ್ಮಸ್ಥಳ ಕ್ಷೇತ್ರ ಮಹಾತ್ಮೆ ಪುಟ ಸಂ. 9
20. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 305
21. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 305
22. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 167
23. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 244
24. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 175
25. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 358
26. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 176
27. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 266
28. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 266
29. (ಸಂ) ಎಂ. ಎಂ. ಕಲಬುರ್ಗಿ : ಕರ್ನಾಟಕದ ಕೈಫಿಯತ್ತುಗಳು ಪು. ಸಂ. 267
30. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 180
31. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 180
32. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 182
33. (ಸಂ) ಕೆ. ಕುಶಾಲಪ್ಪಗೌಡ., ಕೆ. ಚಿನ್ನಪ್ಪ ಗೌಡ : ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 72

◆◆◆

ಅಧ್ಯಾಯ - ೪

ಕೈಫಿಯತ್ತುಗಳ ಸಾಮಾಜಿಕ ಅಧ್ಯಯನ

ಅಧ್ಯಾಯ - ೪

ಕೈಫಿಯತ್ತುಗಳ ಸಾಮಾಜಿಕ ಅಧ್ಯಯನ

ದಕ್ಷಿಣ ಕನ್ನಡದ ಪ್ರಾಚೀನ ಸಾಮಾಜಿಕ ಚಿತ್ರಣವನ್ನು ಕೈಫಿಯತ್ತುಗಳು ನಮಗೆ ತಕ್ಕಮಟ್ಟಿಗೆ ನೀಡುತ್ತವೆ. ತುಳುನಾಡು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಹೊಸತರಲ್ಲಿ ಈ ಕೈಫಿಯತ್ತುಗಳನ್ನು ಬರೆಸಿದುದರಿಂದಾಗಿ ಹಿಂದಿನ ತಲೆಮಾರಿನಲ್ಲಿ ಪ್ರಚಲಿತವಿದ್ದ ಸಾಮಾಜಿಕ ವಿವರಗಳು ಕೈಫಿಯತ್ತುಗಳಲ್ಲಿ ಪ್ರಾಸಂಗಿಕವಾಗಿ ತೆರೆದುಕೊಳ್ಳುತ್ತದೆ.

ಆಗಿನ ಕಾಲದ ಕುಟುಂಬ ಪದ್ಧತಿ, ಜಾತಿ ವ್ಯವಸ್ಥೆ, ವ್ಯವಹಾರ ನ್ಯಾಯ ತೀರ್ಮಾನ, ಹಬ್ಬ-ಹರಿದಿನಗಳ ಆಚರಣೆ, ಉದ್ಯೋಗ ಮುಂತಾದ ಹತ್ತು ಹಲವು ಸಾಮಾಜಿಕ ಅಂಶಗಳು ಸೇರಿಕೊಂಡಿರುವುದನ್ನು ಕೈಫಿಯತ್ತುಗಳ ವಿಶ್ಲೇಷಣೆಯಿಂದ ತಿಳಿದುಕೊಳ್ಳಬಹುದು.

ಹಿಂದಿನ ತುಳುನಾಡಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ವರ್ಗ ಭೇದಗಳು ರೂಢಿಯಲ್ಲಿ ಇದ್ದುವು. ಅರಸ, ಅಧಿಕಾರಿ ವರ್ಗ, ವ್ಯಾಪಾರಿ ವರ್ಗ ಸಮಾಜದ ಅಧಿಕಾರವನ್ನು ತಮ್ಮ ಕಕ್ಷೆಯಲ್ಲಿ ಇಟ್ಟುಕೊಂಡಿದ್ದರೆ, ಜನ ಸಾಮಾನ್ಯರು ಒಂದು ರೀತಿಯ ಶೋಷಿತ ವರ್ಗಕ್ಕೆ ಒಳಗಾಗಿದ್ದಂತೆ ಕಂಡುಬರುತ್ತದೆ. ಇದರಿಂದಾಗಿ ತುಳುನಾಡಿನ ಶ್ರೇಣೀಕೃತ ಸಮಾಜದಲ್ಲಿ ಬ್ರಾಹ್ಮಣರು, ಜೈನರು, ಬಂಟರು ಮೊದಲಾದವರು ಮೇಲ್ವರ್ಗದಲ್ಲಿ ತಮ್ಮನ್ನು ಗುರುತಿಸಿಕೊಂಡರೆ, ಬಿಲ್ಲವರು, ಕುಂಬಾರರು, ಚಮ್ಮಾರರು, ಮಲೆಕುಡಿಯರು ಮುಂತಾದವರು ಕೆಳವರ್ಗದಲ್ಲಿ ಗುರುತಿಸಲ್ಪಡುತ್ತಾರೆ. ರಾಜ್ಯ ಮಟ್ಟದ ಅಧಿಕಾರ ಮೇಲ್ವರ್ಗದವರ ಹಿಡಿತದಲ್ಲಿದ್ದರೆ, ಹಳ್ಳಿಯ ಒಳಗಡೆಗೆ ಕೆಲಸ ಮಾಡುವ ಜನರು ಕೆಳವರ್ಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ರಾಜ್ಯ, ಮಾಗಣೆ, ಬೀಡು, ಗುತ್ತು ಈ ಮಟ್ಟದಲ್ಲಿ ಸಮಾಜದ ವಿವಿಧ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದುದನ್ನು ಕೈಫಿಯತ್ತುಗಳ ಮೂಲಕ ತಿಳಿದುಕೊಳ್ಳಬಹುದು.

ಪ್ರಾಚೀನ ತುಳುನಾಡಿನ ಆಡಳಿತದ ಒಂದು ಸಂದರ್ಭದಲ್ಲಿ ರಾಜ್ಯಾಡಳಿತದ ಪದ್ಧತಿಯಲ್ಲಿ ಸಮಾಜದಲ್ಲಿ ಎರಡು ಸ್ತರಗಳಿದ್ದಂತೆ ಕಂಡುಬರುತ್ತವೆ. ಸಾಮ್ರಾಜ್ಯವನ್ನು ಆಳುವ ದೊಡ್ಡ ದೊರೆಗಳ ಅಪ್ಪಣೆಯಂತೆ, ಸ್ಥಳೀಯ ಅರಸರು ಇಲ್ಲವೆ ಹೆಗ್ಗಡೆಗಳು ಆಡಳಿತ ನಡೆಸುತ್ತಿದ್ದದ್ದು ಒಂದಾದರೆ, ಮತ್ತೊಂದು ಕೇಂದ್ರದ ಸಂಪರ್ಕವಿಲ್ಲದೆ ನೇರವಾಗಿ ಆಳುವುದೂ ಮತ್ತೊಂದು. ಚೌಟರ ಕಾಲದಲ್ಲಿ ಹೀಗಿದ್ದುದರಿಂದ ವಿಜಯನಗರದ ರಾಯರು ಭೋಜರಾಜ ಚೌಟನನ್ನು ವಿಜಯನಗರಕ್ಕೆ ಕರೆಸಿ, ತಮಗೆ ಕಪ್ಪವನ್ನು ಕೊಡದೆ, ರಾಜ್ಯವನ್ನು ಅನುಭವಿಸಿಕೊಂಡು ಬರುವುದು. ಅಲ್ಲದೆ ತನ್ನ ಹೆಸರಿನ ಮುಂದೆಯೂ ರಾಯ ಎಂದು ಇಟ್ಟುಕೊಳ್ಳುವುದನ್ನು ಆಕ್ಷೇಪಿಸಿದರು. ಅದಕ್ಕೆ ಜತೆಯಲ್ಲಿದ್ದ ಕವಳಿಗೆ ನಾರಣ ಶ್ಯಾನುಭೋಗನು ಚೌಟರ ತಾಯಿಗೆ ಗಂಡು ಮಕ್ಕಳಾಗದೆ ಇದ್ದುದರಿಂದ, ಮಕ್ಕಳಾದರೆ ರಾಯರ ಹೆಸರನ್ನಿಡುತ್ತೇನೆಂದು ಹರಿಸಿಕೊಂಡ ಪ್ರಕಾರ ಈ ಹೆಸರಿಟ್ಟರು ಎಂದು ಅರಿಕೆ ಮಾಡಿದಾಗ ರಾಯರು ಸಂತುಷ್ಟರಾಗಿ ಅವರಿಗೆ ಉಡುಗೊರೆ ಮತ್ತು ವಸ್ತು ವಾಹನಗಳನ್ನು ಕೊಟ್ಟು ಕಳುಹಿಸಿದ ಉಲ್ಲೇಖಗಳು ಚೌಟರ ಕೈಫಿಯತ್ತಿನಿಂದ ತಿಳಿದುಬರುತ್ತದೆ.

ಆಗಿನ ಕಾಲದ ಸಮಾಜದಲ್ಲಿ ಕೌಟುಂಬಿಕ ಕಲಹಗಳು ಕೈಫಿಯತ್ತಿನಿಂದ ತಿಳಿಯಬಹುದು. ಗಂಡನ ಮತ್ತು ಹೆಂಡತಿಯ ಮನೆಯವರಿಗೆ ಮನಸ್ತಾಪ ಬಂದು, ಅದರ ಪರಿಣಾಮ, ಘೋರವಾಗುವ ಪ್ರಸಂಗವೊಂದು ಕಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಕಂಡುಬರುತ್ತದೆ. ರಂಗರಾಜನೆಂಬವನ ಕಿರಿಯ ಹೆಂಡತಿಯ ತವರು

ಮನೆಯವರಿಗೂ, ಅವನಿಗೂ ವಾಗ್ವಾದ ಬೆಳೆದು ಅವನು ಅವರಿಗೆ [1]"ನಿಮ್ಮ ಮಾಂಸಾ ನಿಮ್ಮಗೆ ಆಹಾರವಂನೀಗ ಕುಟ್ಟೇನು ಯಂಬದಾಗಿ" ಎಂದು ರೋಷದಿಂದ ಹೇಳಿ ಅದೇ ಪ್ರಕಾರ ತನ್ನ ಕಿರಿಯ ಹೆಂಡತಿಯ ತಲೆ ಕಡಿದು, ಅವಳ ಮಾಂಸದ ಅಡಿಗೆ ಮಾಡಿ ಅವರಿಗೆ ಬಲತ್ಕಾರವಾಗಿ ತಿನ್ನಿಸಿದ ವಿಚಾರವು ಕಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಉಲ್ಲೇಖಿತವಾಗಿದೆ.

ಶಿಲ್ಪಿಯ ದುರಂತದ ವೃತ್ತಾಂತವೊಂದು ಕಾರ್ಕಳದ ಅರಸರ ಕೈಫಿಯತ್ತಿನಿಂದು ನಮಗೆ ಸ್ಪಷ್ಟವಾಗುತ್ತದೆ. ಕಾರ್ಕಳದ ಅರಸನಾದ ರಾಜನಾಥ ಒಡೆಯನ ಮಗ, ಒಂದನೇ ಪಾಂಡ್ಯಪ್ಪ ಒಡೆಯನು ಚಿಕ್ಕಣಾಚಾರಿಯ ಕೈಯಿಂದ ಗೋಮಟ ವಿಗ್ರಹವನ್ನು ಕೆತ್ತಿಸಿ, ಕಾರ್ಕಳದಲ್ಲಿ ಸ್ಥಾಪನೆ ಮಾಡಿದ ಮೇಲೆ ಇನ್ನು ಅಂತಹ ಸುಂದರ ವಿಗ್ರಹವನ್ನು ಅವನು ಇತರೆಡೆಗಳಲ್ಲಿ ಕೆತ್ತಬಾರದೆಂದು, ಆ ಶಿಲ್ಪಿಯ ಕೈಯನ್ನೇ ಕತ್ತರಿಸುತ್ತಾನೆಂದು ಕೈಫಿಯತ್ತಿನಲ್ಲಿ ಉಲ್ಲೇಖಿಸಲ್ಪಡುತ್ತದೆ. ಕೋಪಗೊಂಡ ಚಿಕ್ಕಣಾಚಾರಿ ಅಜಿಲರಲ್ಲಿಗೆ ಬಂದು ಅಲ್ಲಿಯೂ ಗೋಮಟ ವಿಗ್ರಹ ಪ್ರತಿಷ್ಠಾಪನೆಗೆ ಕಾರಣನಾಗುತ್ತಾನೆಂದು ಕೈಫಿಯತ್ತು ತಿಳಿಸುತ್ತದೆ. ಕೈಯಿಲ್ಲದೆ ಅವನು ಹೇಗೆ ಮತ್ತೊಂದು ವಿಗ್ರಹ ಮಾಡಿದನೆಂಬ ಬಗೆಗೆ ಕೈಫಿಯತ್ತಿನಲ್ಲಿ ಉತ್ತರವಿಲ್ಲ. ಕಾರ್ಕಳದ ರಾಜ ಒಂದನೇ ಪಾಂಡ್ಯನು ಗೋಮಟ ವಿಗ್ರಹವನ್ನು ಕಾರ್ಕಳದಲ್ಲಿ [2]"ಕ್ರಿ. ಶ. ೧೪೩೨ರಲ್ಲಿ ಸ್ಥಾಪನೆ ಮಾಡಿದ ಬಗೆಗೆ ಶಾಸನಗಳಲ್ಲಿ ಉಲ್ಲೇಖವಿದೆ" ಹಾಗೆಯೇ ವೇಣೂರಿನಲ್ಲಿ ಗೋಮಟನ ಪ್ರತಿಷ್ಠಾಪನೆ [3]"ಕ್ರಿ. ಶ. ೧೬೦೩ ರಲ್ಲಿ ನಡೆದ ಬಗ್ಗೆ ಶಾಸನ"ಗಳಿಂದ ತಿಳಿದು ಬರುತ್ತದೆ. ಹೀಗಿರುವಾಗ ಸುಮಾರು ೨೦೦ ವರ್ಷಗಳ ಅಂತರದಲ್ಲಿ ಒಬ್ಬನೆ ಚಿಕ್ಕಣಾಚಾರಿ ಇರುವುದು ಸಾಧ್ಯವಾದ ಮಾತಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಆದರೂ ಅರಸನಾದವನು ತನ್ನ ಪ್ರತಿಷ್ಠೆ, ಅಧಿಕಾರ, ಕೀರ್ತಿಗಾಗಿ ಹೇಗೆ ಜನಸಾಮಾನ್ಯರನ್ನು ವಂಚಿಸುತ್ತಿದ್ದರೆಂಬುವುದಕ್ಕೆ ಈ ಕೈಫಿಯತ್ತನ್ನು ಉದಾಹರಿಸಬಹುದು.

ಕೈಫಿಯತ್ತುಗಳಿಂದ ತಿಳಿದು ಬರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಬ್ಬಗಳನ್ನು ವೈಭವದಿಂದ ಆಚರಿಸಲಾಗುತ್ತಿತ್ತು. ಅದರಲ್ಲೂ ನವರಾತ್ರಿ ಹಬ್ಬಕ್ಕೆ ವಿಶೇಷ ಮಹತ್ವವಿತ್ತು. ಚೌಟರ ಕೈಫಿಯತ್ತಿನಲ್ಲಿ ಚೌಟರು ಬನ್ನಿ ಪೂಜೆಯನ್ನು ಮಾಡುವುದರ ಬಗ್ಗೆ ಸುಂದರವಾದ ವಿವರಣೆಯಿದೆ.

ಚೌಟರ ಅರಸನೇ ಸ್ನಾನ ಕರ್ಮಗಳನ್ನು ಮುಗಿಸಿ ಮಡಿ ಬಟ್ಟೆಯನುಟ್ಟು ಬನ್ನಿ ಮಹಾಂಕಾಳಿಯೆದುರು ನಿಂತು ಭಯಭಕ್ತಿಯಿಂದ ಹೀಗೆ ಬಿನ್ನವಿಸಿಕೊಳ್ಳುತ್ತಾನೆ.

[4]"ಶ್ರೀಮದ್ ಬನ್ನಿ ಮಹಾಂಕಾಳಿಯಮ್ಮನವರ ದಿವ್ಯಚರಣಾರವಿಂದಗಳಿಗೆ........... ಸೋಮನ್ವಯೇತ್ಪನ್ನ ತಉಳವದೇಶಾದೀಶ ನೃಪ ಸರ್ವಜನೋಪಕಾರಿ ದೀನ ಬಂಧು ತಿರುಮಲರಾಯ ಚೌಟ ಮಹೀಪಾಲ ಸ್ವಯೋಧರಕಾ ಪುತ್ತಿಗೆ ಪುರವರಾಧೀಶ್ವರ.......... ಚಿಕ್ಕರಾಯ ಚೌಟರ ಪುತ್ರರಾದ ಚಂದ್ರಶೇಖರ ಚೌಟರು ಸಾಷ್ಟಾಂಗವರೆಸಿ ಪೊಡಮಟ್ಟು ಮಾಡುವ ಬಿನ್ನಹಾ ದೇವರು ನಮ್ಮ ಮೇಲೆ ಪೂರ್ವಕಟಾಕ್ಷಮಿಟ್ಟು ಸಕಲ ದಿಗ್ವಿಜಯ ಮನೋವಾಂಛಿತಾರ್ಥವನ್ನು ಸಿದ್ದಿಸಿಕೊಡಬೇಕೆಂದು ಸದ್ವಿನಯ ಭಕ್ತಿಯಿಂದ ಪ್ರಾರ್ಥನೆ...?

ಹೀಗೆ ಬಿನ್ನಹಿಸಿಕೊಂಡ ಮೇಲೆ ಅರಸನು ಪತ್ರಪ್ರಸಾದವಂ ಸ್ವೀಕರಿಸಿ ಸವಾರಿ ಹೊರಟು ಅರಮನೆಗೆ ಬಂದು ಸದರಿ ಹಾಕಿ ಕುಳಿತುಕೊಂಡು ದೀವಟಿಗೆ ಸಲಾಂ ಆದ ತರುವಾಯ ಕಟ್ಟಳೆ ಪ್ರಕಾರ ವೀಳ್ಯ ಪಟ್ಟಿಯನ್ನು ಕೊಡುವಂಥವರಿಗೆ ಕೊಟ್ಟು ಕಳುಹಿಸಿ ತಾನು ಅರಮನೆಯಲ್ಲಿ ಉಳಿಯುತ್ತಾನೆ.

ಸಾಮಾನ್ಯ ಪ್ರಜೆಗಳ ಬಗೆಗೆ ಕೈಫಿಯತ್ತಿನಲ್ಲಿ ಹೆಚ್ಚೇನೂ ತಿಳಿದು ಬರುವುದಿಲ್ಲ. ಅವರು ತಮ್ಮನ್ನಾಳುವವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಆದರೆ ಅವಮಾನವನ್ನು ಸಹಿಸದೆ ಅಧಿಕಾರಿಗಳಿಗೆ ತಕ್ಕ ಶಾಸ್ತಿ ಮಾಡಿಸಲು ಒಗ್ಗಟ್ಟಾಗುತ್ತಿದ್ದರೆಂಬ ವಿಚಾರವು ಕಾರ್ಕಳದ ಅರಸರ ಕೈಫಿಯತ್ತಿಯಿಂದ ಕಾಬೇಟಿನ ಹೆಗ್ಗಡೆಯ ವೃತ್ತಾಂತವು ತಿಳಿಸುತ್ತದೆ. ವ್ಯವಸಾಯವೇ ನಾಡಿನ ಪ್ರಮುಖ ಆದಾಯವಾಗಿತ್ತು. ಬಹು ಸಂಖ್ಯಾತರು ವ್ಯವಸಾಯಗಾರರಾಗಿದ್ದರು. ಭತ್ತ, ಮೆಣಸು, ಅಡಿಕೆ ಮುಂತಾದ ಬೆಳೆಯನ್ನು ಬೆಳೆಸುತ್ತಿದ್ದರು ಸಮುದ್ರ ತೀರದಲ್ಲಿ ದೂರದ ಊರುಗಳೊಡನೆ ವ್ಯಾಪಾರ ವಹಿವಾಟುಗಳೂ ನಡೆಯುತ್ತಿದ್ದುವು. ಜೈನ, ಹಿಂದೂ ಮತ್ತು ಮುಸ್ಲಿಂ ಮತಗಳಿಗೆ ಸೇರಿದ ಜನರು ಬಹುಶಃ ಯಾವ ರೀತಿಯ ಮತೀಯ ತಿಕ್ಕಾಟಗಳಿಗೆ ಎಡೆಕೊಟ್ಟದ್ದು ಕೈಫಿಯತ್ತಿನಿಂದ ಕಂಡು ಬಂದಂತೆ ಕಾಣುವುದಿಲ್ಲ. ಧರ್ಮಸ್ಥಳದಂತಹ ಕ್ಷೇತ್ರ ಜೈನ-ಶೈವ ಮತಗಳ ಸಂಗಮ ಕ್ಷೇತ್ರವಾಗಿ ದ್ರಾವಿಡ ಸಂಸ್ಕೃತಿಯ ಭೂತಾರಾಧನೆಯನ್ನು ಒಳಗೊಂಡಿರುವ ಮೇಲ್ಪಂಕ್ತಿ ಹಾಕಿ ಆಸುಪಾಸಿನ ಸಾಮಾಜಿಕ ಮನೋಭಾವನೆಯನ್ನು ರೂಪಿಸಿತ್ತಲ್ಲದೆ, ಇಂದಿಗೂ ಹಾಗೆಯೇ ನಡೆದು ಬರುತ್ತಿದೆಯೆಂಬುದೂ, ಗಮನಾರ್ಹ ವಿಷಯ. ಸಂಸ್ಕೃತಿಕ ಕೇಂದ್ರಬಿಂದುಗಳಾದ ದೇವಾಲಯಗಳು, ಪುಣ್ಯಕ್ಷೇತ್ರಗಳು, ಒಟ್ಟು ಸಮಾಜದ ಮನೋಭಾವನೆಯನ್ನು ಸಂಕೇತಿಸುವಂತಹವುಗಳಾಗಿ ಕಾಣುತ್ತವೆ.

೪. ೧. ಜಾತಿ ಪದ್ಧತಿ :

ಪ್ರಾಚೀನ ತುಳುನಾಡಿನಲ್ಲಿ ಶೈವ ಧರ್ಮವೇ ಹೆಚ್ಚು ಪ್ರಚಾರದಲ್ಲಿತ್ತು. ಚೌಟರು ಉಳ್ಳಾಲದ ಸೋಮನಾಥನ ಭಕ್ತರಾಗಿದ್ದು ಕೊನೆತನಕ ಶೈವ ಧರ್ಮವನ್ನು ಬೆಂಬಲಿಸಿದರು. ಮಧ್ಯಯುಗದಲ್ಲಿ ಪ್ರಬಲರಾಗಿದ್ದ ಅಜಿಲರು ಜೈನ ಮತದವರು, ಕಾರ್ಕಳದ ಅರಸರೂ ಜೈನ ಧರ್ಮೀಯರೇ ಆಗಿದ್ದರು.

[5]"ತುಳುನಾಡಿನ ಜೈನ ಸಮಾಜದಲ್ಲಿ ಒಂದೆಡೆ ತ್ರೈವರ್ಣ ವ್ಯವಸ್ಥೆ ಚತುಃ ಸಂಘ ವ್ಯವಸ್ಥೆಗಳು ದೃಢಗೊಳ್ಳುತ್ತಿರುವಂತೆ ಇನೊಂದೆಡೆ ಜಾತಿ ಪದ್ದತಿಯೂ ಸದ್ದಿಲ್ಲದೇ ತಲೆಹಾಕುತ್ತಿತ್ತು" ಜೈನ ಮತೀಯರಲ್ಲಿ

೧. ಜೈನ ಬ್ರಾಹ್ಮಣರು

೨. ಜೈನ ಶೆಟ್ಟರು

೩. ಜೈನರು

ಎಂಬ ಮೂರು ಒಳಪಂಗಡಗಳು ರೂಪುಗೊಂಡಿದ್ದವು. ಈ ಮೂರು ಪಂಗಡಗಳಲ್ಲಿ ಯಾವ ಭೇದಭಾವವೂ ಇರಲಿಲ್ಲ ಬರಬರುತ್ತ ವಿಜಯನಗರ ಅರಸರ ಕಾಲದಲ್ಲಿ ಪ್ರತ್ಯೇಕ ಜಾತಿಯ ಸ್ವರೂಪವನ್ನು ಇವು ಪಡೆದುಕೊಂಡವು. ತ್ರೈವರ್ಣದ ಹಿನ್ನಲೆಯಲ್ಲಿ ಇವರನ್ನು ಗುರುತಿಸುವುದಾದರೆ ಇಂದ್ರರನ್ನು ಬ್ರಾಹ್ಮಣ ವರ್ಗವೆಂದೂ, ಶೆಟ್ಟರನ್ನು ಕ್ಷತ್ರಿಯರೆಂದೂ, ಜೈನರನ್ನು ವೈಶ್ಯರೆಂದೂ ಕರೆಯಬಹುದಾಗಿದೆ.

[6]" ವೃತ್ತಿಯ ಹಿನ್ನಲೆಯಲ್ಲಿ ಹೇಳುವುದಾದರೆ ಬಸದಿಯಲ್ಲಿ ಪೂಜೆ ಶ್ರಾವಕರ ಮನೆಯಲ್ಲಿ ಹೋಮ-ಹವನಾದಿ ಕಾರ್ಯಗಳನ್ನು ನಿರ್ವಹಿಸುವುದು ಇಂದ್ರರ ಕರ್ತವ್ಯವಾಯಿತು. ರಾಜ್ಯದ ಆಡಳಿತ, ವ್ಯಾಪಾರಗಳನ್ನು ನೋಡಿಕೊಳ್ಳುವುದು ಜೈನ ಶೆಟ್ಟರ ಕರ್ತವ್ಯವಾದರೆ ವ್ಯವಸಾಯ ಗೋಪಾಲನೆಗಳನ್ನು ಮಾಡುವುದು ಜೈನರ ಕರ್ತವ್ಯವೆನಿಸಿತು" ಇಂದ್ರರಿಗೆ ಅಥವಾ ಪುರೋಹಿತರಿಗೆ ಜೈನ ಸಮಾಜದ ಮೇಲೆ ಹೇಳಿಕೊಳ್ಳುವಂಥ ಪ್ರಭಾವವಾಗಲೀ ಹಿಡಿತವಾಗಲಿ ಇರಲಿಲ್ಲ.

ಅದೇ ರೀತಿಯಲ್ಲಿ ವೈದಿಕ ಧರ್ಮದಲ್ಲಿಯೂ ಅನೇಕ ಜಾತಿ ವ್ಯವಸ್ಥೆಯನ್ನು ಕಾಣಬಹುದು. ತುಳುನಾಡಿನಲ್ಲಿ ಬ್ರಾಹ್ಮಣ, ಬಂಟ, ಗೌಡ, ಬಿಲ್ಲವ ಕುಲಾಲ್, ಮಲೆಕುಡಿಯ, ಕುಂಬಾರ, ಕೊರಮರ, ಮಣ್ಣಒಡ್ನ, ಮೇದಾರ ಹೀಗೆ ಹಲವು ಜಾತಿಗಳಿದ್ದು ಆ ಜಾತಿಗಳಿಗೂ ಅನೇಕ ಉಪಜಾತಿಗಳು ಇದ್ದವು. ಬ್ರಾಹ್ಮಣರಲ್ಲಿ ಸ್ಥಾನಿಕ ಬ್ರಾಹ್ಮಣ, ಚಿತ್ಪಾವನ ಬ್ರಾಹ್ಮಣ, ಶಿವಳ್ಳಿ ಬ್ರಾಹ್ಮಣ, ಹವ್ಯಕ ಬ್ರಾಹ್ಮಣ, ಕೊಂಕಣಸ್ಥ ಮತ್ತು ಸಾರಸ್ವತ ಬ್ರಾಹ್ಮಣ ಇತ್ಯಾದಿ ಬಂಟರಲ್ಲಿ ಶೆಟ್ಟಿ, ರೈ, ಆಳ್ವ, ಹೆಗ್ಡೆ, ಭಂಡಾರಿ, ಬಲ್ಲಾಳ, ಪೂಂಜ, ಗಂಭೀರ್, ಅಡಪ, ಅಡ್ಯಂತಾಯ, ಕಿಲ್ಲೆ, ಮಾರ್ಲ ಇತ್ಯಾದಿ. ಹಾಗೆಯೇ ಬಿಲ್ಲವರಲ್ಲಿ ಪೂಜಾರಿ, ಕರ್ಕೇರ, ಸಾಲಿಯಾನ, ಸುವರ್ಣ ಇತ್ಯಾದಿ ಉಪಜಾತಿಗಳನ್ನು ಗಮನಿಸಬಹುದು. ಇಲ್ಲಿಯ ಜನರು ತಮ್ಮದೇ ಆದ ವಿಶಿಷ್ಟ ಜೀವನ ಶೈಲಿಯಲ್ಲಿ ಬದುಕುವುದು ನಮಗೆ ಗೋಚರಿಸುತ್ತದೆ. ಅವರು ತಮ್ಮ ಸಂಪ್ರದಾಯ ಹಾಗೂ ಈ ಜಿಲ್ಲೆಯ ಸಂಸ್ಕೃತಿಗನುಸಾರವಾಗಿ ನಡೆದುಕೊಳ್ಳುವುದನ್ನು ಕೈಫಿಯತ್ತಿನಿಂದ ತಿಳಿಯಬಹುದಾಗಿದೆ.

೪. ೨. ನ್ಯಾಯ ತೀರ್ಮಾನ

ಕೈಫಿಯತ್ತುಗಳಲ್ಲಿ ತಿಳಿದು ಬರುವಂತೆ ಅಂದಿನ ರಾಜರ ಕರ್ತವ್ಯಗಳಲ್ಲಿ ಪ್ರಜಾರಕ್ಷಣೆ, ರಾಜ್ಯದ ಗಡಿಯ ರಕ್ಷಣೆಗಳ ಜೊತೆಗೆ ನ್ಯಾಯ ಪರಿಪಾಲನೆಯೂ ಮುಖ್ಯವಾಗಿತ್ತು [7]" ಪ್ರಜೆಗಳಲ್ಲಿ ಸುಖ, ಸಂತೃಪ್ತಿ ಸಮಾಧಾನಗಳು ನೆಲೆಸಿದ್ದರೆ, ತಮ್ಮ ರಾಜ್ಯವು ಸುಸೂತ್ರವಾಗಿ ನಡೆಯುತ್ತದೆಂದು ಅವರು ಭಾವಿಸಿದ್ದರು. ಹೀಗಾಗಿ ಧರ್ಮದ ಚೌಕಟ್ಟಿನ ತಳಹದಿಯ ಮೇಲೆ ನ್ಯಾಯವನ್ನು ಪರಿಪಾಲಿಸಬೇಕಾಗಿ ಬರುತ್ತಿತ್ತು"

ನ್ಯಾಯ ಪರಿಪಾಲನೆಯ ಬಗ್ಗೆ ತುಳುನಾಡಿನಲ್ಲಿ ಸಿಗುವ ಕೆಲವು ದಾಖಲೆಗಳು ಸ್ವಲ್ಪ ಮಟ್ಟಿಗೆ ಬೆಳಕನ್ನು ಚೆಲ್ಲುತ್ತವೆ. ಅಂದಿನ ಕಾಲದಲ್ಲಿ ಸಾಮ್ರಾಟರು, ಮಹಾ ಮಂಡಲೇಶ್ವರರು, ಸ್ಥಳೀಯ ಅರಸರು ಹೊರಡಿಸುತ್ತಿದ್ದ ಅನೇಕ ಆಜ್ಞೆಗಳಿಂದ ಅಂದಿನ ನ್ಯಾಯ ಪರಿಪಾಲನೆಯ ಚಿತ್ರಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆ "ಸ್ಥಳೀಯ ಅರಸರು ತಮ್ಮಲ್ಲಿ ತಲೆದೋರುತ್ತಿದ್ದ ಜಗಳಗಳನ್ನು ತಾವೇ ಪರಿಹರಿಸಿಕೊಳ್ಳುತ್ತಿದ್ದರು.

[8]"ಕಾರ್ಕಳದ ಶಾಸನವೊಂದರಲ್ಲಿ ಕುಮಾರ ಭೈರರಸ ವೊಡೆಯ ಕೋಲಬಳಿ ಐದು ಸಾವಿರದವರೊಡನೆ ಒಪ್ಪಂದ ಮಾಡಿಕೊಂಡ ಸಂದರ್ಭದಲ್ಲಿ, ಪೂರ್ವ ಕಟ್ಟಳೆಯಂತೆ ನಡೆದುಕೊಳ್ಳಬೇಕೆಂದೂ ಇದಕ್ಕೆ ಸೋಮೇಶ್ವರ, ಗುಮ್ಮಟ ಸ್ವಾಮಿಗಳ ಸಾಕ್ಷಿಯಾಗಿ ತಪ್ಪಬಾರದೆಂದೂ ಹೇಳಿಕೊಂಡಿದ್ದಾನೆ".

ಕೆಲವೊಮ್ಮೆ ಈ ಅರಸರು ತಮ್ಮೊಳಗಿನ ಜಗಳವನ್ನು ಪರಿಹರಿಸಿಕೊಳ್ಳಲು ಅಸಮರ್ಥರಾದಾಗ, ತಮ್ಮ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸುವುದಿತ್ತು. ಕ್ರಿ. ಶ. ೧೪೪೯ರಲ್ಲಿ ಮಂಗಳೂರಿನ ರಾಜ್ಯಪಾಲನಾದ ವಿಠರಸ ವೊಡೆಯನು ಯಾವುದೋ ಕಾರಣದಿಂದ ಬಂಗ ಕಾಮಿರಾಜನಿಗೆ ಸೇರಿದ ಕೊಡಿಯಾಲ, ನೀರವಾರ ಗ್ರಾಮಗಳನ್ನು ಸುಟ್ಟು ಹಾಳುಗೆಡವುತ್ತಾನೆ. ಇದರಿಂದ ಬೇಸರಗೊಂಡ ಕಾಮಿರಾಜನು ವಿಜಯನಗರದ ದೊರೆಗಳಿಗೆ ದೂರು ನೀಡಿದಾಗ, ಅವನ ಕಷ್ಟನಷ್ಟಗಳ ಪರಿಹಾರಕ್ಕಾಗಿ ಉಜಿರೆಯ ಗ್ರಾಮವನ್ನು ನೀಡಲಾಗುತ್ತದೆ. ಅರಸರು ಹೊರಡಿಸಿದ ಆಜ್ಞೆಯನ್ನು ಪಾಲಿಸಲು ಸಂಬಂಧಪಟ್ಟ ಅಧಿಕಾರಿಗಳು ತಪ್ಪಿದಾಗ, ಅವರಿಗೆ ದಂಡೆ ಶಿಕ್ಷೆಯನ್ನು ವಿಧಿಸುತ್ತಿದ್ದರು.

ಶಿಕ್ಷೆಯಲ್ಲಿ ಮರಣದಂಡನೆಯನ್ನು ವಿಧಿಸುವ ಪ್ರಸ್ತಾಪ ನಮಗೆ ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ರಾಜದ್ರೋಹಕ್ಕೆ ಅಪರಾಧಿಯ ಕಣ್ಣನ್ನೂ ಕೀಳಿಸುವ ಸೂಚನೆಯು ಒಂದೆಡೆ ಕಂಡುಬರುತ್ತದೆ.

೪.೩. ಕುಟುಂಬ ಪದ್ಧತಿ :

ಕೈಫಿಯತ್ತುಗಳಲ್ಲಿ ತಿಳಿದು ಬರುವಂತೆ ಅಳಿಯ ಸಂತಾನ ಕಟ್ಟು ಬಳಕೆಯಲ್ಲಿತ್ತು. ತಾಯಿಂದ ಮಗಳಿಗೆ ಆಸ್ತಿ ಸಲ್ಲುವುದು ಇಲ್ಲಿಯ ವೈಶಿಷ್ಟ್ಯ. ತಾಯಿಂದ ಮಗಳಿಗೆ ಆಸ್ತಿಹಕ್ಕು ಬಂದರೂ ವ್ಯವಹಾರವನ್ನೆಲ್ಲಾ ಗಂಡೇ ನಡೆಸುತ್ತಿದ್ದ. ಮನೆಯಲ್ಲಿ ಯಜಮಾನನದ್ದೇ ಕೊನೆಮಾತಾಗಿತ್ತು.

ಉದ್ಯೋಗ, ಅಧಿಕಾರ, ಆಸ್ತಿಗಳ ಒಡೆತನಗಳು ವಂಶಪಾರಂಪರ್ಯವಾಗಿ ಬರುತ್ತಿದ್ದವು. ಉತ್ತರಾಧಿಕಾರಿಗಳಾಗಲೀ ಹತ್ತಿರದ ಬಂಧುಗಳಾಗಲೀ ಇಲ್ಲದವರು ಸತ್ತರೆ, ಅವರ ಆಸ್ತಿಯು ಆ ಊರಿನ ದೇವಾಲಯಗಳಿಗೆ ಸೇರಿ ಧಾರ್ಮಿಕ ಕಾರ್ಯಗಳಿಗೆ ವಿನಿಯೋಗವಾಗುತ್ತಿತ್ತು. ತಮ್ಮ ಸಂಸಾರದ ನಿರ್ವಹಣೆಗೆ ಮೀರಿ ಹೆಚ್ಚಿನ ಆಸ್ತಿ ಐಶ್ವರ್ಯವನ್ನು ಹೊಂದಿದ ವ್ಯಕ್ತಿಗಳು ತಾವು ಬದುಕಿರುವಾಗಲೇ ಸ್ಥಳೀಯ ಬಸದಿ, ಮಠಗಳಿಗೆ, ದಾನ ನೀಡುತ್ತಿದ್ದರು. ಹೀಗೆ ದಾನ ನೀಡುವುದು ಅಂದಿನ ಪವಿತ್ರ ಕಾರ್ಯದ ಒಂದು ಭಾಗವಾಗಿತ್ತು.

ಅರಮನೆ ಮಾಗಣೆ, ಬೀಡು, ಗುತ್ತುಗಳಿಂದ ಮೊದಲ್ಗೊಂಡು ಸಾಮಾನ್ಯ ಜನರ ಕುಟುಂಬ ಪದ್ಧತಿಯಲ್ಲಿ ಆಯಾ ಕುಟುಂಬದ ಹಿರಿಯರಿಗೆ ವಿಶೇಷ ಗೌರವ ಸಲ್ಲುತ್ತಿದ್ದವು. ಆತನೇ ಕುಟುಂಬದ ಯಜಮಾನನಾಗಿದ್ದು, ಮನೆತನದ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದನು.

[9]"ವಿವಾಹ ಸಂದರ್ಭದಲ್ಲಿ ಹೆಣ್ಣಿನ ಜಾತಿ, ನೀತಿ, ಕುಲ, ಧರ್ಮ ಗೋತ್ರ, ಸೂತ್ರಗಳನ್ನು ವಿಚಾರಿಸಿ ಒಪ್ಪಿಗೆಯಾದರೆ ಗಂಡು ಮದುವೆ ಯಾಗುತ್ತಿದ್ದ" ಅರಸು ಮನೆತನದಲ್ಲಿ ಬಹುಪತ್ನಿತ್ವ ರೂಢಿಯಲ್ಲಿದ್ದರೂ ಜನಸಾಮಾನ್ಯರ ಮಟ್ಟದಲ್ಲಿ ಬಹುಪತ್ನಿತ್ವ ಅಷ್ಟಾಗಿ ರೂಢಿಯಲ್ಲಿರಲಿಲ್ಲ ಗಂಡ ಸತ್ತ ಬಳಿಕ ಅಳಿಯ ಸಂತಾನ ಪದ್ಧತಿಯಂತೆ ಹೆಣ್ಣು ತನ್ನ ತವರು ಮನೆಗೆ ಬಂದು ನೆಲೆಸುತ್ತಿದ್ದಳು.

ಇವರು ವಾಸಿಸುವ ಮನೆಗಳೂ ಮೂರು-ನಾಲ್ಕು ಚೌಕಿಗಳಿಂದ ಕೂಡಿದ ಎರಡು ಮೂರು ಅಂತಸ್ತಿನ ದೊಡ್ಡ ಮನೆಗಳಾಗಿದ್ದವು. ಗೋಡೆಗಳು ಬಲವಾಗಿದ್ದು ಮಣ್ಣಿನಿಂದಲೇ ನಿರ್ಮಿಸಿ ಮೇಲೆ ಹುಲ್ಲು ಅಥವಾ ಹಂಚನ್ನು ಹೊಂದಿಸುತ್ತಿದ್ದರು. ಅರಮನೆಗಳನ್ನು ಬಲವಾದ ಶಿಲೆಯ ಕಲ್ಲುಗಳನ್ನು ಬಳಸಿ ಕಟ್ಟಲಾಗುತ್ತಿತ್ತು. ಮನೆಯ ಎದುರಿನ ಭಾಗಕ್ಕೆ ಚಾವಡಿ ಅಥವಾ ಪಟ್ಟದ ಚಾವಡಿ ಎಂದು ಕರೆಯಲಾಗುತ್ತಿತ್ತು. ಅದಕ್ಕೆ ಹೊಂದಿಕೊಂಡಂತೆ ಭೂತದ ಕೋಣೆ, ಒಳಗಡೆಯ ಚಿಕ್ಕ ಬಸದಿ, ಸುತ್ತಲೂ ಚೌಕು ಹಜಾರ, ಅಲ್ಲಲ್ಲಿ ಕೋಣೆಗಳು ಇರುತ್ತಿದ್ದವು.

ಕಟ್ಟಡದ ಇದೇ ಭಾರ ಹೊಂದುವಂತೆ, ಕಲಾತ್ಮಕ ಕೆತ್ತನೆಗಳಿಂದ ಕೂಡಿದ ಸಾಲುಗಂಬಗಳು, ಅದರ ಮೇಲೆ ಬೋದಿಗೆಗಳು ಇರುತ್ತಿದ್ದವು ಎದುರಿನ ಹೆಬ್ಬಾಗಿಲು ಎತ್ತರವಾಗಿ ಅಗಲವಾಗಿದ್ದರೆ, ಒಳಗಡೆಯ ವಾಸ್ತು ಬಾಗಿಲುಗಳು ತೀರ ಕುಳ್ಳಾಗಿರುತ್ತಿತ್ತು. ತಲೆತಗ್ಗಿಸಿ ಒಳಪ್ರವೇಶಿಸಬೇಕೆನ್ನುವುದು ಇದರ ಉದ್ದೇಶವಿರಬೇಕೆಂದು ತೋರುತ್ತದೆ.

ಅಡಿ ಟಿಪ್ಪಣಿಗಳು

1. (ಸಂ.) ಕೆ. ಕುಶಾಲಪ್ಪ ಗೌಡ, ಕೆ. ಚಿನ್ನಪ್ಪ ಗೌಡ	:	ದ. ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 140
2. ಕೆ. ವಿ. ರಮೇಶ್, ಎಂ ಜೆ. ಶರ್ಮ	:	ತುಳುನಾಡಿನ ಶಾಸನಗಳು, ಪು.ಸಂ. 66
3. ಕೆ. ವಿ. ರಮೇಶ್, ಎಂ. ಜೆ. ಶರ್ಮ	:	ತುಳುನಾಡಿನ ಶಾಸನಗಳು ಸಂಖ್ಯೆ 90
4. ಎಂ. ಎಂ. ಕಲಬುರ್ಗಿ	:	ಕರ್ನಾಟಕದ ಕೈಫಿಯತ್ತುಗಳು ಪು. ಸಂ. 294
5. ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ, ಪು. ಸಂ. 211
6. ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನಧರ್ಮ ಪು. ಸಂ. 211
7. ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನಧರ್ಮ ಪು. ಸಂ. 103
8. ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನಧರ್ಮ ಪು. ಸಂ. 103
9. ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪು. ಸಂ. 86

ಅಧ್ಯಾಯ : ೫

ಕೈಫಿಯತ್ತುಗಳ ರಾಜಕೀಯ ಅಧ್ಯಯನ

೫. ೧. ಕೈಫಿಯತ್ತು ನಿರೂಪಿಸುವ ದ. ಕ. ಜಿಲ್ಲೆಯ ಅರಸರು

೫. ೧. ೧. ಅಜಿಲರ ಕೈಫಿಯತ್ತು

೫. ೧. ೨. ಬಂಗವಾಡಿಯ ಬಂಗರ ಕೈಫಿಯತ್ತು

೫. ೧. ೩. ಪುತ್ತಿಗೆ ಮೂಡಬಿದಿರೆಯ ಚೌಟರ ಕೈಫಿಯತ್ತು

೫. ೧. ೪. ಕಾರ್ಕಳದ ಭೈರರಸರ ಕೈಫಿಯತ್ತು

೫. ೧. ೫. ಇತರ ಹೆಗಡೆ ಬೀಡು ಬಲ್ಲಾಳರ ಕೈಫಿಯತ್ತು

ಅಧ್ಯಾಯ ೫

ಕೈಫಿಯತ್ತುಗಳ ರಾಜಕೀಯ ಅಧ್ಯಯನ

೫. ೧. ಕೈಫಿಯತ್ತು ನಿರೂಪಿಸುವ ದ.ಕ. ಜಿಲ್ಲೆಯ ಅರಸರುಗಳು

ಕರ್ನಾಟಕದ ಇತರ ಜಿಲ್ಲೆಗಳಂತೆ ದಕ್ಷಿಣ ಕನ್ನಡವು ಕೂಡ ತನ್ನದೇ ಆದ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡಿದೆ. ಪ್ರಾದೇಶಿಕವಾಗಿ, ಭೌಗೋಳಿಕವಾಗಿ, ರಾಜಕೀಯವಾಗಿ ಹೀಗೆ ವಿಭಿನ್ನ ನೆಲೆಗಳಿಂದ ಪ್ರತ್ಯೇಕತೆ ಸಾಧಿಸಿರುವ ಈ ಜಿಲ್ಲೆಯ ರಾಜಕೀಯ ಇತಿಹಾಸವು ವರ್ಣರಂಜಿತವಾದುದು. ಇದಕ್ಕೆ ಕಾರಣವು ಹಲವು, ಇಲ್ಲಿ ಆಳ್ವಿಕೆ ನಡೆಸಿದ ಬೇರೆ ಬೇರೆ ಮನೋಭಾವ, ಧರ್ಮದ ಹಿನ್ನೆಲೆಯಿರುವ ಅರಸರುಗಳು ಅವರ ಆಡಳಿತೆಯ ಪ್ರಭಾವ ಬೇರೆ ಬೇರೆ ಸಮುದಾಯಗಳಿಗೆ ಸೇರಿದ್ದು, ಇಲ್ಲಿನ ಎಲ್ಲಾ ಬಗೆಯ ಏರಿಳಿತಗಳಿಗೆ ಸ್ಪಂದಿಸುತ್ತ ಬಾಳಿ ಬದುಕಿದ ಜನರು ಕಾಯ್ದುಕೊಂಡು ಬಂದ ಮೌಲ್ಯಗಳು, ನಿರ್ಮಿಸಿದ ಸಂಸ್ಕೃತಿ ಇಂದಿಗೂ ಇಲ್ಲಿ ಕಾಣುತ್ತೇವೆ. ಕರಾವಳಿ ನಾಡಾದ ಈ ಜಿಲ್ಲೆಯ ಪ್ರತ್ಯೇಕತೆಗೆ ಇಲ್ಲಿನ ಭೌಗೋಳಿಕ ಪರಿಸರವೂ ಒಂದು ಕಾರಣವೆಂಬಂತೆ ತೋರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಆಳಿದ ತುಂಡರಸರಲ್ಲಿ ಚೌಟರು, ಬಂಗರು, ಅಜಿಲರು, ಭೈರರಸರು ಮೊದಲಾದವರು ಪ್ರಮುಖರಾಗಿದ್ದರೆಂಬ ವಿಚಾರ ಕೈಫಿಯತ್ತಿನಿಂದ ತಿಳಿದು ಬರುತ್ತದೆ. ರಾಜಕೀಯವಾಗಿ ಈ ಜಿಲ್ಲೆಯು ಚರಿತ್ರೆಯಲ್ಲಿ ಪ್ರಮುಖ ಪಾತ್ರವಹಿಸದಿದ್ದರೂ, ತುಳುನಾಡಿನಲ್ಲಿ ತನ್ನ ಪ್ರಭಾವವನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ತನ್ನ ಆಳ್ವಿಕೆಯ ಕಾಲದಲ್ಲಿ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂದು ಕೈಫಿಯತ್ತಿನಿಂದ ತಿಳಿದುಬರುತ್ತದೆ. ಆಡಳಿತದಲ್ಲಿ ಅರಸರ ನಂತರ ಪ್ರಮುಖ ಹುದ್ದೆ ಪ್ರಧಾನಿಯಾಗಿದ್ದು, ತದನಂತರ ಶ್ಯಾನುಭೋಗ, ಹೆಗ್ಗಡೆ ಮೊದಲಾದವರು ಊರುಗಳನ್ನು ಇಟ್ಟುಕೊಂಡು ಪ್ರಜೆಗಳಿಗೆ ತೊಂದರೆ ಆಗದಂತೆ ಜಾಗ್ರತೆ ವಹಿಸುತ್ತಿದ್ದರೆಂದು ಕೈಫಿಯತ್ತಿನಿಂದ ಸ್ಪಷ್ಟವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಆಳಿದ ಅರಸರಲ್ಲಿ ಹೆಚ್ಚಿನವರು ಜೈನ ಮತಾವಲಂಬಿಗಳಾಗಿದ್ದರೂ ವೈದಿಕ ಧರ್ಮದವರಿಗೂ ಅನೇಕ ದೇವಸ್ಥಾನಗಳನ್ನು ಕಟ್ಟಿ ಪರಧರ್ಮ ಸಹಿಷ್ಣುಗಳಾಗಿದ್ದರೆಂದು ಕೈಫಿಯತ್ತು ಹೇಳುತ್ತದೆ. ವೇಣೂರು ಮತ್ತು ಕಾರ್ಕಳದಲ್ಲಿರುವ ಸುಂದರ ಗೋಮಟ ವಿಗ್ರಹವು ಅಜಿಲ ಹಾಗೂ ಭೈರರಸರ ಸಾಧನೆಗೆ ಗರಿ ಇಟ್ಟಂತಿದೆ. ಇವರು ಕಟ್ಟಿಸಿದ ದೇವಸ್ಥಾನ ಬಸದಿ, ಅರಮನೆ, ಮುಂತಾದವುಗಳು ತುಳುನಾಡಿನ ಪೂರ್ವ ವೈಭವಕ್ಕೆ ಸಾಕ್ಷಿಗಳಾಗಿ ನಿಂತಿವೆ. ಒಟ್ಟಿನಲ್ಲಿ ತುಳುನಾಡನ್ನು ಆಳಿದ ಅರಸರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತನ್ನ ಆಡಳಿತ ಕಾಲದಲ್ಲಿ ಈ ನೆಲದ ಸಾಂಸ್ಕೃತಿಯನ್ನು ಬೆಳೆಸಿದರೆಂದು ಕೈಫಿಯತ್ತಿನಿಂದ ಸ್ಪಷ್ಟವಾಗುತ್ತದೆ.

೫. ೧. ೧. ಅಜಿಲರ ಕೈಫಿಯತ್ತು

ಹೊಯ್ಸಳ, ವಿಜಯನಗರ ಹಾಗೂ ಕೆಳದಿ ಅರಸರ ಪ್ರಭುತ್ವವನ್ನು ಒಪ್ಪಿಕೊಂಡು, ಅವರ ಸಾಮಂತರಾಗಿ ಕರಾವಳಿ ಕರ್ನಾಟಕವನ್ನಾಳಿದ ರಾಜವಂಶಸ್ಥರಲ್ಲಿ ವೇಣೂರಿನ ಅಜಿಲರು ಸಾಕಷ್ಟು ಪ್ರಸಿದ್ಧಿಯನ್ನು ಪಡೆದವರು. ಸುಧೀರ್ಘ ಆಡಳಿತ, ಇತಿಹಾಸ ನಿರ್ಮಿಸಿದ ಪ್ರಖ್ಯಾತರಾದ ಅಜಿಲರು ತುಳುನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆಯನ್ನಿತ್ತವರು. ಈ ಅರಸು ಮನೆತನದವರ ಪ್ರಮುಖ ರಾಜಧಾನಿ ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ವೇಣೂರು.

ವೇಣೂರಿನ ಅಜಿಲ ವಂಶವು ಅನೇಕ ಕಾರಣಗಳಿಂದ ಪ್ರಸಿದ್ಧವಾಗಿದೆ. [1]"ವೇಣೂರಿನ ಸುಂದರ ಗೊಮ್ಮಟ ವಿಗ್ರಹವು ಅಜಿಲ ಸಾಧನೆಗೊಂದು ಸಾಕ್ಷಿಯಾಗಿದೆ." ವೇಣೂರು, ಕೇಳ, ಅಳದಂಗಡಿ ಮತ್ತು ಬರಯಗಳಲ್ಲಿ ಅನಾಥವಾಗಿ ಬಿದ್ದಿರುವ ಅರಮನೆಗಳು ಅಜಿಲರ ಪೂರ್ವ ವೈಭವಗಳಿಗೆ ಮೂಕ ಸಾಕ್ಷಿಗಳಾಗಿವೆ.

[2] "ತಿಮ್ಮಣ್ಣ ಅಜಿಲರು ವಂಗದೇಶದ ಗಂಗನಾಡು ಎಂಬ ಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿದ್ದು ಪರರಾಷ್ಟ್ರದ ಅರಸರು ದಂಡೆತ್ತಿ ಬಂದಾಗ ತಮ್ಮ ಲಕ್ಷ್ಮಣಪ್ಪನೊಂದಿಗೆ ಘಟ್ಟದ ಕೆಳಗೆ ಬಂದು ಪರಶುರಾಮ ಕ್ಷೇತ್ರದಲ್ಲಿ ಮನೆ ಮಾಡಿ ವಂಗ್ವಾಡಿ ಎಂದು ಹೆಸರಿಟ್ಟು ವೇಣೂರು ಮತ್ತು ಬೆಳ್ತಂಗಡಿಯಲ್ಲಿ ಅರಮನೆ ಕಟ್ಟಿದರು. ಇಬ್ಬರೂ ಪ್ರತ್ಯೇಕವಾಗಿದ್ದುಕೊಂಡು ಒಂದೇ ಹೆಸರಿರುವುದು ಸರಿಯಲ್ಲವೆಂದೂ ತನ್ನನ್ನು ಪೂರ್ವದ ಹೆಸರಾದ ಅಜಿಲರು ಎಂದೂ, ತಮ್ಮ ಲಕ್ಷ್ಮಣಪ್ಪನಿಗೆ ತಮ್ಮ ಪೂರ್ವದ ಊರಿನ ಹೆಸರು ವಂಗದೇಶವೆಂದಿದ್ದುದರಿಂದ ವಂಗರು ಎಂದು ಹೆಸರಿಟ್ಟರು. ಮುಂದೆ ಲೋಕರೂಢಿಯಲ್ಲಿ ಅದು ಬಂಗರು ಎಂದಾಯಿತು". ಎಂದು ವಿವರಿಸಲಾಗಿದೆ.

ಅಜಿಲರು ವೇಣೂರಿನಲ್ಲಿ ಆಳುತ್ತಿರುವಾಗ ಬಂಗರಾಜರು ಬಂಗಾಡಿಯಲ್ಲಿ ಮತ್ತು ಮಂಗಳೂರಿನಲ್ಲಿ ಆಳುತ್ತಿದ್ದರು. ಅಜಿಲರು ಮತ್ತು ಬಂಗರು ಬೇರೆ ಬೇರೆ ಅರಸರುಮನೆತನದವರೆಂದು ಇತಿಹಾಸ ತಜ್ಞರು ನಿರ್ಣಯಿಸಿದ್ದರೂ ಕೈಫಿಯತ್ತಿನಲ್ಲಿ ಅವೆರಡೂ ಒಂದೇ ಮನೆತನದವರೆಂದು ಹೇಳಲಾಗಿದೆ. ಕೈಫಿಯತ್ತಿನಿಂದ ತಿಳಿದುಬರುವಂತೆ ತಿಮ್ಮಣ್ಣಾಜಿಲರು, ಲಕ್ಷ್ಮಣಪ್ಪ, ಅಕ್ಕ-ತಂಗಿರು, ತಿಮ್ಮಣ್ಣರಾಯ, ಕಾಮಿರಾಯ, ಪಾಂಡ್ಯಪ್ಪ, ತಿಮ್ಮಣ್ಣ, ಎರಡನೇ ಪಾಂಡ್ಯಪ್ಪ, ಎರಡನೇ ತಿಮ್ಮಣ್ಣ, ಮೂರನೇ ಪಾಂಡ್ಯಪ್ಪ ಅಜಿಲ, ಶಂಕರದೇವಿ, ತಿಮ್ಮಣ್ಣಜಿಲ ಹೀಗೆ ಕ್ರಮವಾಗಿ ಆಡಳಿತ ನಡೆಸಿದರೆಂದು ಉಲ್ಲೇಖಗೊಂಡಿದೆ.

[3] "ಬೆಳ್ತಂಗಡಿ ತಾಲೂಕಿನ ವೇಣೂರಿನಿಂದ ಮತ್ತು ಅನಂತರ ಅಳದಂಗಡಿಯಿಂದ ಆಳ್ವಿಕೆ ನಡೆಸಿದ ಅಜಿಲರು ತಮ್ಮನ್ನು ಚಂದ್ರವಂಶದವರೆಂದೂ, ಸಾಳುವ ಅರಸರೆಂದೂ ಕರೆದುಕೊಂಡಿದ್ದಾರೆ." ಅಜಿಲರು ಬಂಗವಾಡಿ, ಪುತ್ತೂರು ಮತ್ತು ಬೆಳ್ತಂಗಡಿ ಸೀಮೆಗಳನ್ನೂ ಆಳಿಕೊಂಡಿದ್ದರು. ಅಳದಂಗಡಿಯಲ್ಲಿ ಈಗಲೂ ಇವರ ಅರಮನೆಯಿದ್ದು ಅಲ್ಲಿ ಅವರ ವಂಶಜರು ವಾಸವಾಗಿದ್ದಾರೆ. ಈಗಿರುವ ಅರಮನೆಗಿಂತಲೂ ಹಳೆಯದಾದ ಒಂದು ಅರಮನೆ ಅಳದಂಗಡಿಯ ಸಮೀಪವಿರುವ ಬರಾಯ ಎಂಬ ಊರಿನಲ್ಲಿದೆ. ವೇಣೂರಿನಲ್ಲಿದ್ದ ಅರಮನೆ ಸಂಪೂರ್ಣ ನಾಶವಾಗಿದ್ದು, ಅದರ ಅವಶೇಷಗಳು ಕಾಣಸಿಗುತ್ತವೆ.

[4] "ವೇಣೂರಿನ ರಾಜ್ಯಕ್ಕೆ ಪೂಂಜಳಿಕೆ ರಾಜ್ಯವೆಂದು ಶಾಸನಗಳು ಹೆಸರಿಸುತ್ತವೆ" ಅಳದಂಗಡಿಗೆ ರಾಜಧಾನಿಯನ್ನು ಸ್ಥಳಾಂತರಿಸಿ ಮೇಲೆ ಅರುವ ರಾಜ್ಯವೆಂದೂ ಹೆಸರಾಯಿತು. ಇವರು ಜೈನ ಮತಾವಲಂಬಿಗಳೂ ಅಳಿಯಕಟ್ಟಿನವರೂ ಆಗಿದ್ದರು. ವೇಣೂರಿನ ಮಹಾಲಿಂಗೇಶ್ವರನ ಭಕ್ತರು [5] "ಕ್ರಿ. ಶ. ೧೬೦೪ರ ಒಂದು ಶಾಸನದಲ್ಲಿ ಇವರು ತಮ್ಮನ್ನು ಚಾಮುಂಡಾನ್ವಯದವರೆಂದು ಹೇಳಿಕೊಂಡಿರುವುದನ್ನು ಗಮನಿಸಬಹುದು." ಬಹುಶಃ ಗಂಗರ ಸೇನಾಪತಿಯಾಗಿದ್ದು, ಶ್ರವಣ ಬೆಳಗೋಳದಲ್ಲಿ ಗೋಮ್ಮಟೇಶ್ವರನನ್ನು ಪ್ರತಿಷ್ಠಾಪನೆ ಮಾಡಿದ ಚಾಮುಂಡರಾಯನ ವಂಶದವರೆಂದು ತೋರುತ್ತದೆ.

ಕ್ರಿ. ಶ. ೧೧೧೮ ವೇಣೂರಿನಲ್ಲಿರುವ ಶಾಸನವೊಂದರಲ್ಲಿ ಉಕ್ತವಾದ ಸೇವ್ಯಗೆಲ್ಲರಸನು ಈ ವಂಶದ ಪ್ರಥಮ ದೊರೆಯೆಂದು ಹೇಳಬಹುದು. ಆ ತರುವಾಯ ಕಾಮಾದೇವಿಯ ಮಗ ಸೋಮನಾಥನು ಕ್ರಿ. ಶ.

೧೫೪೮ರಲ್ಲಿ ಆಳ್ವಿಕೆಯನ್ನು ನಡೆಸಿದನು. ತಾಯಿಯಾದ ಕಾಮಾದೇವಿಯೂ ಸ್ವಲ್ಪಕಾಲ ಆಡಳಿತವನ್ನು ನಡೆಸಿರಬೇಕೆಂದು ಊಹಿಸಲಾಗಿದೆ.

[6] "ಈ ವಂಶದಲ್ಲಿ ಪ್ರಸಿದ್ಧವಾದ ಅರಸನೆಂದರೆ ತಿಮ್ಮಣ್ಣಜಿಲ ಇವನು ಚಾರುಕೀರ್ತಿಗಳ ಪ್ರಿಯಾಗ್ರ ಶಿಷ್ಯನಾಗಿದ್ದು ದಾನರಾಧೇಯ ಎಂಬ ಬಿರುದನ್ನು ಗಳಿಸಿದ್ದನು. ಕ್ರಿ. ಶ. ೧೬೦೪ರಲ್ಲಿ ವೇಣೂರಿನಲ್ಲಿ ಗೋಮಟೇಶ್ವರ ಪ್ರತಿಮೆಯನ್ನು ಸ್ಥಾಪಿಸಿದ ಕೀರ್ತಿ ಇವನದು" ಇವನಿಗೆ ಇಬ್ಬರು ರಾಣಿಯರು, ಇಬ್ಬರೂ ಪ್ರತ್ಯೇಕವಾಗಿ ಗೋಮ್ಮಟೇಶ್ವರನ ಎದುರು ಒಂದೊಂದು ಬಸದಿಗಳನ್ನು ನಿರ್ಮಿಸಿದಂತೆ ತಿಳಿದು ಬರುತ್ತದೆ.

ಕೈಫಿಯತ್ತಿನಲ್ಲಿ ಹೇಳಿರುವ ೫ನೇ ತಲೆ ತಿಮ್ಮಣಾಜಿಲನು ವೇಣೂರಿನಲ್ಲಿ ಗೊಮ್ಮಟನನ್ನು ಪ್ರತಿಷ್ಠಾಪಿಸಿದನು. ಈತ ಜೈನರ ಕಡೆ ಹೆಣ್ಣನ್ನು ಮದುವೆಯಾದ್ದರಿಂದ ಮುಂದೆ ಅಳಿಯ ಸಂತಾನಕಟ್ಟು ಮುಂದುವರಿಯಿತು. ಗೋಮಟನನ್ನನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಕಾರ್ಕಳದ [7] "ಭೈರರಸ ವೊಡೆಯನು ದಂಡೆತ್ತಿಕೊಂಡು ಬಂದು ಲಡಾಯಿಕ್ಕೆ ಬಂದಲ್ಲಿ ನಾರಾವಿ ಮಾಗಣೆಯಲ್ಲಿ ಜಗಳವಾಗಿ, ಭೈರಸ ಒಡೆಯನು ಸೋತು ಕಾರ್ಕಳಕ್ಕೆ ಓಡಿ ಹೋದ, ಈ ಯುದ್ದದಲ್ಲಿ ಅಜಿಲರ ಪರವಾಗಿ ನಾರಾವಿಯ ಕಾಂತು ಸಾಮಣಿಯ ಪರಾಕ್ರಮದಿಂದ ಹೋರಾಡಿದನೆಂದು" ಕಾರ್ಕಳದ ಚರಿತ್ರೆಯಲ್ಲಿ ಹೇಳಲಾಗಿದ್ದರೂ ಈ ಬಗ್ಗೆ ಕೈಫಿಯತ್ತಿನಲ್ಲಿ ಯಾವ ಉಲ್ಲೇಖವೂ ಇಲ್ಲ.

ಕೈಫಿಯತ್ತಿನಲ್ಲಿ ಹೇಳಿರುವಂತೆ, ತಿಮ್ಮಣಾಜಿಲ ಮೃತನಾದಾಗ ಅವನಿಗೆ ಗಂಡು ಮಕ್ಕಳಿರಲಿಲ್ಲ. ವಿಧವೆಯಾಗಿದ್ದ ಮಗಳೊಬ್ಬಳು ಮತ್ತು ಇನ್ನು ಮದುವೆಯಾಗದ ಮಗಳೊಬ್ಬಳು ಮಾತ್ರ ಇದ್ದರು. ತಿಮ್ಮಣ್ಣಾಜಿಲನ ತಮ್ಮನಿಗೆ ಮಕ್ಕಳೇ ಇರಲಿಲ್ಲ.

ಈ ಸಂದರ್ಭದಲ್ಲಿ ಇವರ ವೈರಿಗಳು ಚೆನ್ನಾಗಿ ಉಪಯೋಗಿಸಿಕೊಂಡು ತಿಮ್ಮಣ್ಣಾಜಿಲನ ಹೆಣ್ಣು ಮಕ್ಕಳನ್ನು ಅರಮನೆಯಿಂದ ಓಡಿಸಿ, ಅಜಿಲರ ಸೀಮೆಯನ್ನು ಅವರು ವಶಮಾಡಿಕೊಂಡರು. ವಶಮಾಡಿಕೊಂಡದ್ದು ಪಿಲತ್ತಬೆಟ್ಟು ಪೂಂಜನ ಕೆಲಸವೆಂದು ದಕ್ಷಿಣಕನ್ನಡದ ಪ್ರಾಚೀನ ಇತಿಹಾಸದಲ್ಲಿ ಹೇಳಿಲಾಗಿದೆ.

ಅಜಿಲ ಅರಸರ ಮನೆಯಲ್ಲಿರುವ ದಾಖಲೆಯೊಂದರಲ್ಲಿ ಇತ್ತೀಚೆಗೆ ಆಡಳಿತ ನಡೆಸಿರುವ ಕೆಲವರ ಹೆಸರುಗಳು ಕಂಡುಬರುತ್ತವೆ. ಅವರಲ್ಲಿ ಪದ್ಮರಾಜ ಅಜಿಲ, ಹರಿಶ್ಚಂದ್ರ ಅಜಿಲ, ಕೃಷ್ಣರಾಜ ಅಜಿಲರ ಹೆಸರುಗಳನ್ನು ವಿಶೇಷವಾಗಿ ನೆನೆಯಬಹುದು. ಈಗ ಅಜಿಲ ಮನೆತನದವರು ಅಳದಂಗಡಿಯ ಸಣ್ಣ ಅರಮನೆಯೊಂದರಲ್ಲಿ ಬದುಕುತ್ತಲಿದ್ದಾರೆ.

೫. ೧. ೨. ಬಂಗವಾಡಿಯ ಬಂಗರ ಕೈಫಿಯತ್ತು

ಕರಾವಳಿ ಕರ್ನಾಟಕವನ್ನಾಳಿದ ಪ್ರಸಿದ್ಧ ಅರಸು ಮನೆತನಗಳ ಪೈಕಿ ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂಗವಾಡಿಯಿಂದ ಆಳಿದ ಬಂಗ ಅರಸುಮನೆತನವೂ ಒಂದು. ಬಂಗವಾಡಿಯಲ್ಲಿ ಈಗಲೂ ಅವರ ಅರಮನೆಯಿದ್ದು, ಅವರ ಸಂತತಿಯವರು ಅಲ್ಲಿ ವಾಸವಾಗಿದ್ದಾರೆ. ಜೈನ ಮತಾವಲಂಬಿಗಳಾದ ಇವರು, ತುಳುನಾಡಿನ ಇತರ ಜೈನ ಅರಸರಂತೆ ಅಳಿಯಕಟ್ಟಿನವರು, ಬಂಗವಾಡಿಯ ಜೊತೆ ಬೆಳ್ತಂಗಡಿ, ಉಪ್ಪಿನಂಗಡಿ, ನಂದಾವರ, ಮಂಗಳೂರುಗಳಲ್ಲಿ ಇವರು ಅರಮನೆ, ಕೋಟೆಗಳನ್ನು ನಿರ್ಮಿಸಿಕೊಂಡು ತಮ್ಮ ರಾಜಕೀಯ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡರು.

ಕರ್ನಲ್ ಮೆಕೆಂಜಿ ಸಂಗ್ರಹಿಸಿದ ಬಂಗರಸರ ಕೈಫಿಯತ್ತು ಈ ಅರಸರ ವಂಶಾವಳಿಯನ್ನು ಸಮಗ್ರವಾಗಿ ನಿರೂಪಿಸುವ ಪ್ರಥಮ ದಾಖಲೆಯಾಗಿದೆ. ಈ ಪರಂಪರೆಯಲ್ಲಿ ವೀರನರಸಿಂಹ, ಚಂದ್ರಶೇಖರ, ಹಾವಳಿ ಬಂಗರಾಯ, ಶಂಕರದೇವಿ, ಲಕ್ಷ್ಮಪ್ಪರಸ ಬಂಗ, ಪಾಂಡ್ಯಪ್ಪ ಬಂಗರಾಯ, ವಿಠಲದೇವಿ, ಕಾಮರಾಯ, ವೀರನರಸಿಂಹ ಬಂಗರಾಯ, ಇಮ್ಮಡಿ ಲಕ್ಷ್ಮಪ್ಪರಸ ಬಂಗರಾಯ, ಕಾಮರಾಯರಸ, ನಾಲ್ಮಡಿ ಲಕ್ಷ್ಮಪ್ಪರಸ, ಐದನೆ ಕಾಮರಾಯ ಬಂಗ ಮತ್ತು ಲಕ್ಷ್ಮಪ್ಪರಸ, ಪದ್ಮರಾಜ ಬಂಗ ಹೀಗೆ ಅರಸರಾಗಿ ಆಡಳಿತ ನಡೆಸಿದರೆಂದು ಹೇಳಲಾಗಿದೆ. ಕರ್ನಾಟಕದ ಗೆಝೆಟಿಯರ್‌ನಲ್ಲಿ ತಕ್ಕಮಟ್ಟಿಗೆ ಇದರ ಚರಿತ್ರೆಯನ್ನು ಸಂಗ್ರಹಿಸಲಾಗಿದೆ.

ಗಣಪತಿ ರಾವ್ ಐಗಳವರು ಬಂಗರಸರ ಕೈಫಿಯತ್ತನ್ನು ಆಧರಿಸಿ [8] " ಕ್ರಿ. ಶ. ೧೧೧೫ರಿಂದ ಬಂಗರ ಚರಿತ್ರೆಯ ವೀರನರಸಿಂಹ ಬಂಗನಿಂದ ಪ್ರಾರಂಭವಾಯಿತ್ತೆಂದು ಹೇಳಿ ಇತರ ಅರಸರುಗಳನ್ನು, ಅವರ ಆಳಿದ ವರ್ಷವನ್ನು ನಮೂದಿಸಿದ್ದಾರೆ" ಈ ವಿವರಗಳನ್ನೂ, ಅವರು ಆಳಿದ ವರ್ಷವನ್ನು ನಮೂದಿಸಿದ್ದಾರೆ" ಈ ವಿವರಗಳನ್ನು ಅನಂತರದ ಕೆಲವು ಚರಿತ್ರೆಕಾರರು ಒಪ್ಪಿಕೊಂಡು ಅದನ್ನೇ ಮುಂದುವರಿಸಿಕೊಂಡು ಬಂದರು.

ಬಂಗರ ಮೂಲದ ಬಗ್ಗೆಯೂ ಸಾಕಷ್ಟು ಸಂದೇಹಗಳಿವೆ. ಬಹುಶಃ ಇವರು ಮೂಡಿಗೆರೆ ತಾಲೂಕಿನ ಮೇಲ್ ಬಂಗಾಡಿಯವರಿದ್ದರೂ ಇರಬಹುದೆಂದು ಡಾ। ಸೂರ್ಯನಾಥ ಕಾಮತರು ಊಹಿಸುತ್ತಾರೆ. ಡಾ। ಗುರುರಾಜ ಭಟ್ಟರು ಬಂಗಾಡಿ ಎಂಬ ಹೆಸರು ಕ್ರಿ. ಶ. ೧೦ನೇ ಶತಮಾನದ ಸುಮಾರಿಗೆ ಕರ್ನಾಟಕದ ಇತರ ಭಾಗದ ಶಾಸನಗಳಲ್ಲಿ ಉಕ್ತವಾಗಿದೆಯೆಂದು ನಮ್ಮ ಗಮನ ಸೆಳೆಯುತ್ತಾರೆ. ಆ ಊರಿನ ಶಾಸನವೊಂದರಲ್ಲಿ ಇರಿವನೊಳಂಬನೆಂಬ ಬಂಗವಾಡಿಯಲ್ಲಿ ಕೆರೆಯೊಂದನ್ನು ಕಟ್ಟಿಸಿದಂತೆ ಹೇಳಲಾಗಿದೆ. ಕ್ರಿ. ಶ. ೬೫೦ರ ಇನ್ನೊಂದು ಶಾಸನದಲ್ಲಿ ವಿಕ್ರಮಾದಿತ್ಯ ತಿರುಮಯ ಎಂಬವನು ಬಂಗವಾಡಿಯ ಕೆರೆಗೆ ದಾನಕೊಟ್ಟ ವಿಚಾರವಿದೆ. ಈ ಎಲ್ಲಾ ದಾಖಲೆಗಳ ಆಧಾರದ ಮೆಲೆ ಅವರು ಗಂಗವಾಡಿ ನಾಡಿನಲ್ಲಿ ಬಂಗವಾಡಿ ಇತ್ತೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಊರಿನಲ್ಲಿದ್ದ ಬಂಗರೇ, ಘಟ್ಟದ ಕೆಳಗೆ ಬಂದು ನೆಲೆಸಿರಬೇಕೆಂಬುದು ಅವರ ಊಹೆಯಾಗಿದೆ. ಈ ಊಹೆಗೆ ಕೈಫಿಯತ್ತಿನಲ್ಲಿ ಉಕ್ತವಾಗಿರುವ ಘಟನೆಯೂ ಸ್ವಲ್ಪಮಟ್ಟಿಗೆ ಸಮರ್ಥನೆಯನ್ನು ನೀಡುತ್ತದೆ.

[9] "ಈ ಅರಸರಿಗೆ ಸಂಬಂಧಪಟ್ಟ ಶಾಸನಗಳ ಆಧಾರದಂತೆ ವಿಠಲದೇವಿಯು ಕ್ರಿ. ಶ. ೧೪೧೭ರಲ್ಲಿ ಬಂಗವಾಡಿಯಲ್ಲಿ ರಾಣಿಯಾಗಿ ಆಳ್ವಿಕೆ ನಡೆಸುತ್ತಿದ್ದಂತೆ ತಿಳಿದುಬರುತ್ತದೆ." ಮತ್ತೊಂದು ಶಾಸನವು ಬಂಗ ಪಾಂಡ್ಯಪ್ಪರಸನು ಬಂಗವಾಡಿಯನ್ನು ಕ್ರಿ. ಶ. ೧೪೧೦ರಲ್ಲಿ ಆಳುತ್ತಿದ್ದುದನ್ನು ಸೂಚಿಸುತ್ತದೆ. ಕೆಲವು ಶಾಸನಗಳು ಕಾಮರಾಯನನ್ನು ಹೆಸರಿಸುತ್ತವೆ. ಇತ್ತೀಚೆಗೆ ಮೂಡುಬಿದಿರೆಯ ತಾಮ್ರ ಶಾಸನವೊಂದರಲ್ಲಿ ಇವನ ಹೆಸರು ಉಲ್ಲೇಖಿತವಾಗಿರುವುದು ಕಂಡಬಂದಿದೆ ಇದರ ಕಾಲ ಕ್ರಿ. ಶ. ೧೪೬೭.

[10] "ಈ ಕಾಮರಾಯನು ಆಳ್ವಿಕೆ ನಡೆಸುವುದಕ್ಕೆ ಸ್ವಲ್ಪ ಮೊದಲು ಬಸವಣ್ಣರಸ ಬಂಗನು ಉಡುಪಿ ತಾಲೂಕಿನ ಪೆರಡೂರು ದೇವಾಲಯಕ್ಕೆ ದಾನ ಮಾಡಿದ ವಿಷಯವನ್ನು ಒಂದು ಶಾಸನವು ಉಲ್ಲೇಖಿಸುತ್ತದೆ." ಇದರ ಆಧಾರದ ಮೇಲೆ ಕಾಮಿರಾಯನಿಗಿಂತ ಸ್ವಲ್ಪ ಕಾಲ ಇವನು ಬಂಗವಾಡಿಯ ದೊರೆಯಾಗಿರಬೇಕೆಂದು ಡಾ. ರಮೇಶ ಅವರು ಊಹಿಸಿದ್ದಾರೆ. [11] "ಕಾಮಿರಾಯನ ನಂತರ ಇಮ್ಮಡಿ ಲಕ್ಷ್ಮಪ್ಪರಸನು ಬಂಗವಾಡಿಯ ದೊರೆಯಾದನು. ಇವನನ್ನು ಕ್ರಿ. ಶ. ೧೪೮೪ ಮತ್ತು ಕ್ರಿ. ಶ. ೧೪೯೭ರ ಶಾಸನಗಳು ಉಲ್ಲೇಖಿಸುತ್ತವೆ. "

ಬೆಳ್ತಂಗಡಿ ತಾಲೂಕಿನ ಬೈಲಂಗಡಿಯಲ್ಲಿ ಪಾರ್ಶ್ವನಾಥ ಬಸದಿ ಭದ್ರಮಂಟಪದ ಕಂಬದ ಮೇಲಿರುವ ಶಾಸನವು ಬಂಗರಿಗೂ, ಮೂಲ ಅರಸರಿಗೂ ಇದ್ದ ಸಂಬಂಧವನ್ನು ನಿರೂಪಿಸುತ್ತವೆ. ಈ ಶಾಸನದಲ್ಲಿ ಹೇಳಿರುವಂತೆ ಕ್ರಿ. ಶ. ೧೬೧೭ರಲ್ಲಿ ಆಳಿದ ಬಂಗದೊರೆಯಾದ ವೀರನರಸಿಂಹ ಲಕ್ಷ್ಮಪ್ಪರಸನೂ ಅವನ ರಾಣಿಯಾದ ಮೂಲದ ಶಂಕರ ದೇವಿಯರು ಸುಖಶಾಂತಿಗಳಿಂದ ರಾಜ್ಯವನ್ನು ಆಳುತ್ತಿದ್ದಾಗ ಕೃಷ್ಣಸೇನಬೋಮನ ಮಗನಾದ ಈಶ್ವರ ಸೇನಬೋಮನು ಈ ರಾಜ ದಂಪತಿಗಳಿಗೆ ಶಾಶ್ವತ ಸುಖಃ ಪುಣ್ಯಗಳು ಲಭ್ಯವಾಗಲೆಂದು ಬೈಲಂಗಡಿ ಬಸದಿಯಲ್ಲಿ ದೋಷನಿವಾರಣೆಯೊಡನೆ ಆ ಬಸದಿಯನ್ನು ಜೀರ್ಣೋದ್ಧಾರಗೊಳಿಸಿದಂತೆ ತಿಳಿದುಬರುತ್ತದೆ.

ಉಡುಪಿಯ ಅದಮಾರು ಮಠದಲ್ಲಿರುವ ಒಂದು ದಾಖಲೆಯಂತೆ ಕ್ರಿ. ಶ. ೧೬೯೦ರಲ್ಲಿ ವೀರನರಸಿಂಹ ಲಕ್ಷ್ಮಪ್ಪರಸನು ಬಂಗರ ದೊರೆಯಾದನು. ಇವನು ಕ್ರಿ. ಶ. ೧೭೦೯ರ ವರೆಗ ಆಳ್ವಿಕೆ ನಡೆಸಿದಂತೆ ತೋರುತ್ತದೆ. ಆ ಮೇಲೆ ಕೆಳದಿ ಅರಸರ ಆಕ್ರಮಣಕ್ಕೆ ತುತ್ತಾಗಿ ತಮ್ಮ ವರ್ಚಸ್ಸನ್ನು ಕಳೆದುಕೊಂಡ ಬಂಗರು ಮುಂದೆ ಮೈಸೂರಿನ ಹೈದರ ಆಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಸಂಪೂರ್ಣವಾಗಿ ತೆರೆಮನೆಗೆ ಸೇರಿ ಹೋದರು.

ಈಗ ಬಂಗರ ಮನೆತನದವರು ಬಂಗಾಡಿಯಲ್ಲಿನ ಅರಮನೆಯೊಂದರಲ್ಲಿ ಬದುಕುತ್ತಲಿದ್ದಾರೆ. ಬೆಳತಂಗಡಿ ತಾಲೂಕಿನ ಕಿಲ್ಲೂರಿನಲ್ಲಿ ಬಂಗರ ಅರಮನೆಯ ಅವಶೇಷಗಳನ್ನು ಕಾಣಬಹುದು, ಕಾಮಿರಾಯನು ಕಟ್ಟಿಸಿದ ನಂದಾವರ ಅರಮನೆ ಸಂಪೂರ್ಣವಾಗಿ ನೆಲಸಮವಾದರೂ ಅವರ ಕುರುಹುಗಳು ಮಾತ್ರ ಕಾಣುತ್ತವೆ. ಕೋಟೆ ಅಗಲವಾದ ಮಾರ್ಗಗಳು ದೇವಸ್ಥಾನ ಬಸದಿ, ಮಸೀದಿ ಮುಂತಾದುವುಗಳು ಬಂಗರ ಪೂರ್ವ ವೈಭವಗಳಿಗೆ ಸಾಕ್ಷಿಯಾಗಿ ಬಿದ್ದಿವೆ.

೫. ೧. ೩. ಪುತ್ತಿಗೆ ಮೂಡಬಿದಿರೆಯ ಚೌಟರ ಕೈಫಿಯತ್ತು

ತುಳುನಾಡಿನ ಸಾಮಂತ ರಾಜರಲ್ಲಿ ಪ್ರಮುಖರಾದ [12] " ಚೌಟರು ಕ್ರಿ. ಶ. ಸುಮಾರು ೧೧೬೦ ರಿಂದ ೧೮೦೦ ವರೆಗೆ ತುಳುನಾಡಿನ ಕೆಲವು ಭಾಗಗಳನ್ನು ಆಳಿಕೊಂಡಿದ್ದರು." ಇವರ ಮೊದಲ ರಾಜಧಾನಿ ಮಂಗಳೂರಿನ ಸಮೀಪದ ಉಳ್ಳಾಲವಾಗಿತ್ತು. ಅನಂತರ ಪುತ್ತಿಗೆ ಮತ್ತು ಮೂಡಬಿದಿರೆಗಳಿಗೆ ತಮ್ಮ ರಾಜಧಾನಿಯನ್ನು ಬದಲಾಯಿಸಿಕೊಂಡರು ಉಳ್ಳಾಲದ ಸೋಮನಾಥೇಶ್ವರನ ಭಕ್ತರಾದ ಇವರು ವೃಷಭ ಧ್ವಜಾಂಕಿತರು.

ಚೌಟ ಪದವು, ಚುಟು ಅಥವಾ ಚಾವುಡ (ರಜಪೂತ)ದಿಂದ ರೂಢಿಗತವಾಯಿತೆಂಬ ಅಭಿಪ್ರಾಯವಿದೆ. ಚೌಟರು ಕರ್ನಾಟಕದ ಮೈಸೂರು ಪ್ರದೇಶದಿಂದ ಇಲ್ಲಿಗೆ ಬಂದು ನೆಲೆಸಿರಬೇಕೆಂದು ಕೆಲವು ಚರಿತ್ರೆಗಾರರು ಊಹಿಸುತ್ತಾರೆ. ಇದಕ್ಕೆ ಚಾರಿತ್ರಿಕ ಆಧಾರಗಳಿಲ್ಲ.

ಕ್ರಿ. ಶ. ೧೩೯೦ರ ಮೂಡಬಿದಿರೆ ಶಾಸನದಲ್ಲಿ ವಿಕ್ರಚೌಟನ ಉಲ್ಲೇಖ ಕಂಡುಬರುತ್ತದೆ. ನಮಗೆ ತಿಳಿದಂತೆ ಇದು ಚೌಟರಸರನ್ನು ಕುರಿತು ಮೊದಲನೆಯ ಶಾಸನೋಕ್ತ ಆಧಾರವಾಗಿದೆ. [13] " ಕಾಯ್ಕಿಣಿಯ ಶಾಸನದಲ್ಲಿ ಉಕ್ತವಾದಂತೆ ಕ್ರಿ. ಶ. ೧೩೯೮ರಲ್ಲಿ ವಿಜಯನಗರ ಸಾಮ್ರಾಟರ ಅಪ್ಪಣೆಯಂತೆ ಮಂಗಪ ದಂಡನಾಯಕರು ತುಳು ರಾಜ್ಯದ ಮೇಲೆ ದಂಡೆತ್ತಿ ಹೋಗುತ್ತಾರೆ." ಬಿದಿರೆಯಲ್ಲಿ ಪಾಳೆಯ ಬಿಟ್ಟು 'ಚವುಟರ ಕೆಡಹಿದಂತೆ' ಆ ಶಾಸನ ವಿವರಿಸುತ್ತದೆ.

[14] "ಕೈಫಿಯತ್ತಿನಲ್ಲಿ ಚೌಟರ ಇತಿಹಾಸವು ೧೧೬೦ನೇ ಇಸವಿಯಿಂದ ಆರಂಭವಾಗುತ್ತದೆ. ತಿರುಮಲರಾಯ ಚೌಟ I (೧೧೬೦ - ೧೧೭೯), ಚನ್ನರಾಯ ಚೌಟ I (೧೧೭೯ - ೧೨೧೯), ದೇವರಾಯ ಚೌಟ (೧೨೧೯- ೧೨೪೫), ತಿರುಮಲರಾಯ ಚೌಟ II (೧೧೪೫ - ೧೨೮೩), ಅಬ್ಬಕ್ಕ ದೇವಿ I (೧೨೮೩- ೧೩೧೬), ಭೋಜರಾಯ ಚೌಟ I (೧೩೧೬- ೧೩೫೦), ಪದಮಲ ದೇವಿ I (೧೩೫೦- ೧೩೮೨), ಚನ್ನರಾಯ ಚೌಟ II (೧೩೮೨- ೧೪೦೩), ಚೆನ್ನಮ್ಮದೇವಿ II (೧೪೦೩-೧೪೩೮), ಭೋಜರಾಯ ಚೌಟ II (೧೪೩೮- ೧೪೬೮), ತಿರುಮಲರಾಯ ಚೌಟ III (೧೪೬೮-೧೫೧೪), ತಿರುಮಲ ದೇವಿ (೧೫೧೪- ೧೫೩೭), ಅಬ್ಬಕ್ಕ ದೇವಿ II (೧೫೩೭ - ೧೫೬೧), ಚಿಕ್ಕರಾಯ ಚೌಟ I (೧೫೬೧ - ೧೫೮೫), ಚೆನ್ನಮ್ಮ ದೇವಿ II (೧೫೮೫- ೧೬೦೩), ಭೋಜರಾಯ ಚೌಟ (೧೬೦೩ - ೧೬೬೪), ಚೆನ್ನಮ್ಮ ದೇವಿ III (೧೬೬೪- ೧೬೭೯), ಚಿಕ್ಕರಾಯ ಚೌಟ (೧೬೭೯- ೧೭೧೫), ಪದುಮಲ ದೇವಿ II (೧೭೧೫ - ೧೭೨೬), ಅಬ್ಬಕ್ಕದೇವಿ III (೧೭೨೬ - ೧೭೪೯), ಚಂದ್ರಶೇಖರ ರಾಯ ಚೌಟ I (೧೭೪೯ - ೧೭೬೯), ಚನ್ನರಾಯ III (೧೭೬೯ - ೧೭೮೩), ಚಂದ್ರಶೇಖರ ರಾಯ II (೧೭೮೩ ರಿಂದ ಹೀಗೆ ೨೩ ಅರಸರ ವಂಶಾವಳಿಯನ್ನು ನೀಡಿದೆ. ಇವರಲ್ಲಿ ಕೆಲವರನ್ನು ಶಾಸನೋಕ್ತ ಆಧಾರದಿಂದ ದೃಢಪಡಿಸಬಹುದು. ತಿರುಮಲರಾಯ ಚೌಟನು ಆ ಕಾಲದಲ್ಲಿ ಉಳ್ಳಾಲ ಸೋಮೇಶ್ವರ, ತಲಪಾಡಿ ಅಮ್ಮಂಬಳ ಮತ್ತು ಕೈರಂಗಳ ಸೀಮೆಗಳನ್ನು ಆಳಿಕೊಂಡಿದ್ದನು."

ಇವನೇ ಚೌಟರ ಮೂಲಪುರುಷನಲ್ಲ. ಇವನ ಪೂರ್ವಜರು ಸೋಮವಂಶದಲ್ಲಿ ಜನಿಸಿ ವೈಭವದಿಂದ ರಾಜ್ಯವಾಳಿದರು. ಆದರೆ ಕಾಲಾನುಕ್ರಮದಲ್ಲಿ ವೈರಿಗಳು ಇವರ ರಾಜ್ಯವನ್ನು ಅಪಹರಿಸಿದ್ದರಿಂದ, ಒಂದನೇ ತಿರುಮಲರಾಯ ಚೌಟರ ಕಾಲಕ್ಕಾಗುವಾಗ ಚೌಟರಿಗೆ ದುರ್ದೆಶೆ ಪ್ರಾಪ್ತವಾಯಿತು. ಒಂದನೇ ತಿರುಮಲನು ಕಳೆದು ಹೋದ ರಾಜ್ಯವನ್ನು ಮತ್ತೆ ದೊರಕಿಸಿಕೊಳ್ಳಲು ಯತ್ನಿಸಿದಂತೆ ಕೈಫಿಯತ್ತಿನಿಂದ ತಿಳಿದುಬರುತ್ತದೆ. ಈತ ಐದು ಸೀಮೆಗಳನ್ನು ವಶಪಡಿಸಿಕೊಂಡು ಕ್ರಿ. ಶ. ೧೧೭೮ರ ವರೆಗೆ ಆಳಿದನು.

[15] "ಇತ್ತೀಚೆಗೆ ಬೆಳಕಿಗೆ ಬಂದ ಒಂದು ಶಾಸನದ ಪ್ರಕಾರ ಬಿರುಮಣ ಚೌಟನು (ಕ್ರಿ. ಶ. ೧೪೦೦) ತಮ್ಮನಾದ ಬಲ್ಲಾಳನ ದುರ್ವರ್ತನೆಯಿಂ ಹಾನಿಗೊಳಗಾದ ಏಳುನಾಡು ಜನರು ಸಭೆ ಸೇರಿ ಬಂಗ, ಚೌಟ ಅರಸರ ಸಮುಖದಲ್ಲಿ ರಕ್ಷಣೆಗಾಗಿ ಕೆಲವು ತೀರ್ಮಾಣವನ್ನು ಕೈಗೊಂಡಂತೆ ತಿಳಿದು ಬರುತ್ತದೆ." ಹೀಗಾಗಿ ವಿಕ್ರ ಚೌಟನ ತರುವಾಯ ಇವನು ಆಳ್ವಿಕೆಯನ್ನು ನಡೆಸಿರಬೇಕೆಂದು ನಿರ್ಧರಿಸಬಹುದಾಗಿದೆ. ಕ್ರಿ. ಶ. ೧೪೩೧ರಲ್ಲಿ ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಬಲಪಾರ್ಶ್ವದಲ್ಲಿರುವ ಶಾಸನವು ಸಾಂತೆಯ ಚೌಟನು ಅಲ್ಲಿಯ ದೇವಸ್ಥಾನಕ್ಕೆ ದಾನ ನೀಡಿದಂತೆ ವಿವರಿಸುತ್ತದೆ.

[16] "ಕ್ರಿ. ಶ. ೧೭೮೩ರಿಂದೀಚೆ ಕೈಫಿಯತ್ತನ್ನು ಬರೆಸಿದ ಕಾಲದವರೆಗೆ (ಕ್ರಿ. ಶ. ೧೮೦೫) ಚಂದ್ರಶೇಖರರಾಯ ಚೌಟನೇ ಸೀಮೆಯನ್ನು ಅನುಭವಿಸಿಕೊಂಡಿದ್ದನು. ಟಿಪ್ಪುಸುಲ್ತಾನನು ಕ್ರಿ. ಶ. ೧೭೯೩ರಲ್ಲಿ ಚೌಟರ ಸೀಮೆಯನ್ನು ತೆಗೆದುಕೊಂಡು ಅವರಿಗೆ ಸಲ್ಲುತ್ತಿದ್ದ 'ಇನಾಮು ಮೊತ್ತ'ವನ್ನು ಕಡಿತಗೊಳಿಸಿದನು."

ಕ್ರಿ. ಶ. ೧೭೯೯ರಲ್ಲಿ ಟಿಪ್ಪುವಿನ ಪತನಾನಂತರ ಚೌಟರು ಇಂಗ್ಲೀಷರ ಆಳ್ವಿಕೆಗೆ ಸೇರಬೇಕಾಯಿತು. ಬ್ರಿಟಿಷರು ಚೌಟರ ಸೀಮೆಯನ್ನು ಯಾವತ್ತೂ ತಮ್ಮ ಸ್ವಾಧೀನ ಮಾಡಿಕೊಂಡು ಲೆಕ್ಕಪಕ್ಕ ಯಾವತ್ತನ್ನು ವಿಚಾರಿಸಿ ೯೮೪ ಗದ್ಯಾಣವನ್ನೂ ಮಾತ್ರ ಉಚಿತವಾಗಿ ಬಿಟ್ಟರು.

ಸಣ್ಣ ರಾಜಮನೆತನದವರಾದರೂ ಇವರು ವೈಭವದ ದಿನಗಳನ್ನು ಕಂಡುಕೊಂಡಿದ್ದರು. ರಾಜ್ಯವನ್ನು ಕಳೆದುಕೊಂಡ ಮೇಲೆ 'ಇನಾಮು' ಸಂಹಿತ ಇವರು ಮೂಡಬಿದಿರೆಯ ಅರಮನೆಯಲ್ಲಿಯೇ ವಾಸಿಸುತ್ತಿದ್ದಾರೆ.

೫. ೧. ೪ ಕಾರ್ಕಳ ಭೈರರಸರ ಕೈಫಿಯತ್ತು

ಕಾರ್ಕಳವು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಮುಖ್ಯ ಪಟ್ಟಣವಾಗಿದೆ. ಇದು ಜೈನರ ಪಣ್ಯಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಂದ ಇನ್ನೊಂದು ಪ್ರಸಿದ್ಧವಾದ ಜೈನ ಕ್ಷೇತ್ರ ಅಂದರೆ ಚೌಟರು ಆಳಿದ ಮೂಡಬಿದಿರೆಗೆ ಹತ್ತು ಮೈಲುಗಳು. ಜೈನರ ಇನ್ನೊಂದು ತಾಣವಾದ ವರಾಂಗಕ್ಕೆ ಹದಿನಾರು ಮೈಲುಗಳು. ಜೈನೇತರರಿಗೆ ಕಾರ್ಕಳವು ಕಲಾಕ್ಷೇತ್ರ ಹಾಗೂ ಐತಿಹಾಸಿಕ ಕೇಂದ್ರ.

ತುಳುನಾಡಿನಲ್ಲಿ ಭೈರರಸರೆಂದು ಪ್ರಖ್ಯಾತರಾದವರು ಪಟ್ಟಪೊಂಬುಚ್ಚದ ಜೈನ ಶಾಂತರ ವಂಶಜರಾದ ಕಳಸ -ಕಾರ್ಕಳದ ಅರಸರು [17]"ಘಟ್ಟದ ಕೆಳಗಡೆ ಕಾರ್ಕಳ, ಘಟ್ಟದ ಮೇಲೆ ಮೂಡಿಗೆರೆ, ಬಾಳೆಹೊನ್ನೂರು, ಕೊಪ್ಪ, ಶೃಂಗೇರಿ ತಾಲೂಕುಗಳನ್ನು ತನ್ನಲ್ಲಿ ಹೊಂದಿದ ವಿಶಾಲವಾದ ಈ ರಾಜ್ಯಕ್ಕೆ ಕಳಸ, ಕೆರೆವಾಸೆ ಮತ್ತು ಕಾರ್ಕಳಗಳು ರಾಜಧಾನಿಯಾಗಿದ್ದವು."

ಈ ಕಾರ್ಕಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೫೦೦ ವರ್ಷಗಳವರೆಗೆ ಭೈರರಸ ಒಡೆಯರು ಆಳಿದರು. ಕೈಫಿಯತ್ತಿನಲ್ಲಿ ಹಾಗೆ ಆಳಿದ ಕೆಲವು ಒಡೆಯರ ವಿವರಗಳಿವೆ. ಅಲ್ಲಿ ಭೈರರಸ ಒಡೆಯ, ಇಮ್ಮಡಿ ಬೈರರಸ ಒಡೆಯ, ರಾಮನಾಥ ಒಡೆಯ, ಪಾಂಡ್ಯಪ್ಪ ಒಡೆಯ, ಎರಡನೇ ಪಾಂಡ್ಯಪ್ಪ ಒಡೆಯ, ಕರಿಬೈರರಸ ಒಡೆಯರು ಕ್ರಮವಾಗಿ ಆಡಳಿತ ನಡೆಸಿದರೆಂದು ಉಲ್ಲೇಖಗೊಂಡಿದೆ.

ಮೂಡಿಗೆರೆಯ ಕ್ರಿ. ಶ. ೧೨೮೦ರ ಶಾಸನದಲ್ಲಿ ಕಂಡುಬರುವ ವೀರ ಬಲ್ಲುದೇವ, ಮಲ್ಲುದೇವ ಮತ್ತು ಮರುದೇವ ಇವರು ಕಳಸ ಕಾರ್ಕಳದ ಆರಂಭದ ದೊರೆಗಳೆಂದು ಭಾವಿಸಲಾಗುತ್ತದೆ. [18]" ಭೈರರಸ ಎಂಬುದು ಭೈರವ ಎಂಬುವುದರ ರೂಪಾಂತರವಾದ ಭೈರ ಎಂಬುದಕ್ಕೆ ಅರಸ ಎಂಬುದು ಸೇರಿ ಆದ ರೂಪವೆಂದು ಒಂದು ಸಾಮಾನ್ಯ ಅಭಿಪ್ರಾಯವಾದರೆ ದಕ್ಷಿಣದ ಜನತೆಯಲ್ಲಿ ಅಂಕಿತನಾಮವಾಗಿ ಬರುವ ಬಯ್ಯ ಅಥವಾ ಬಯ್ಯು ಎಂಬುವುದಕ್ಕೆ ಅರಸ ಎಂಬುದು ಸೇರಿ ಆದ ರೂಪವೆಂದು ಡಾ। ಗುರುರಾಜ ಭಟ್ಟರ ಊಹೆ".

ಭೈರರಸರು ಹೊಂಬುಚ್ಚದ 'ಶಾಂತರ' ರಾಜವಂಶಕ್ಕೆ ಸೇರಿದವರು. ಶಾಂತರ ವಂಶದ ಸ್ಥಾಪಕನಾದ ಜಿನದತ್ತನು ಪೊಂಬುಚ್ಚದ ಒಡೆಯನಾಗಿ ಕಳಸವನ್ನು ಗೆದ್ದು ಅನಂತರ ಘಟ್ಟದ ಕೆಳಗಿನ ಕಾರ್ಕಳವನ್ನು ಗೆದ್ದಿರಬೇಕೆಂದು ರೈಸ್ ಅವರು ಅಭಿಪ್ರಾಯ ಪಡುತ್ತಾರೆ. ಇದು ಸಂಶಯಾಸ್ಪದ ವಿಷಯವಾದರೂ ಹಟ್ಟಿಯಂಗಡಿಯ ಒಂದು ಶಾಸನವು ಅಲ್ಲಿಗೆ ಆದಿಯಲ್ಲಿ ಜಿನದತ್ತರಾಯನಿಂದ ನೀಡಲಾದ ದಾನದ ಬಗೆಗೆ ಹೇಳುವುದರಿಂದ ಸಂಪೂರ್ಣವಾಗಿ ಅಲ್ಲಗಳೆಯುವಂತೆಯೂ ಇಲ್ಲವೆಂದು ಡಾ। ಗುರುರಾಜ ಭಟ್ಟರು ಹೇಳುತ್ತಾರೆ.

ಕೈಫಿಯತ್ತಿನಲ್ಲಿ ಮುಂದೆ ಕಾರ್ಕಳವನ್ನು ಆಳಿದವರ ಬಗ್ಗೆ ವಿವರಗಳಿವೆ. [19] " ಎಳನಾಡ ಮಾಗಣೆಯನ್ನು ಮೊದಲು ಆಳಿಕೊಂಡಿದ್ದವನು ಕಾಬೇಟಿನ ಹೆಗ್ಗಡೆ. ಈತ ಕಾರ್ಕಳ, ಕೆರೆವಸೆ, ಪಡಂಗಡಿ, ಆರೂರು, ಐದೂರು, ನಾಲ್ಕೂರು ಮತ್ತು ಮೂರೂರುಗಳೆಂಬ ಏಳು ನಾಡುಗಳಿಗೆ ಒಡೆಯನಾಗಿದ್ದ. "

ಕಾಬೆಟ್ಟಿನ ಹೆಗ್ಗಡೆಯು ಪ್ರಜಾಪೀಡಕನಾಗಿದ್ದುದರಿಂದ ಜನ ಅವನನ್ನು ಪಟ್ಟದಿಂದಿಳಿಸಲು ಯತ್ನಿಸುತ್ತಿದ್ದರು. ಪ್ರಜೆಗಳು ಏನಾದರೂ ಕಾಣಿಕೆ ತಂದುಕೊಟ್ಟರೆ ಮಲಗಿದಲ್ಲಿಂದಲೇ ಅದನ್ನು ಸ್ವೀಕರಿಸುವಷ್ಟು

ದರ್ಪ ಅವನಲ್ಲಿತ್ತು. "ಹೆಗಡೆ ಮಲಗಿ ಕಾಣಿಕೆ ಸ್ವೀಕರಿಸಿದರೆ ನಾವು ಕುಳಿತು ಕಾಣಿಕೆ ಕೊಡೋಣ." ಎಂದು ಪ್ರಜೆಗಳು ಮಾತನಾಡಿಕೊಂಡರೆಂದು ಕೈಫಿಯತ್ತಿನಲ್ಲಿ ಹೇಳಲಾಗಿದೆ.

ಕಾರ್ಕಳವನ್ನು ಆಳಿದ ಅರಸರಲ್ಲಿ ಭೈರವ ಮತ್ತು ಭೈರರಸ ಪಾಂಡ್ಯ ಅಥವಾ ಪಾಂಡ್ಯಪ್ಪೊಡೆಯ ಹೀಗೆ ಎರಡು ಹೆಸರುಗಳನ್ನು ವಿಶೇಷವಾಗಿ ಕಾಣುತ್ತೇವೆ ಎಂದು ಡಾ. ಎಸ್. ಡಿ. ಶೆಟ್ಟಿಯವರು ತುಳುನಾಡಿನ ಜೈನಧರ್ಮದಲ್ಲಿ ಅಭಿಪ್ರಾಯ ಪಡುತ್ತಾರೆ. ಇವು ಅವರ ಹುಟ್ಟಿನ ಹೆಸರುಗಳನ್ನುವುದಕ್ಕಿಂತ ಪಟ್ಟದ ಕಾಲದಲ್ಲಿ ಧರಿಸಿದ ಹೆಸರುಗಳಾಗಿರಬೇಕೆಂದು ಕೆಲವರು ಭಾವಿಸುತ್ತಾರೆ.

[20] "ವೀರಭೈರವನ ತರುವಾಯ (ಕ್ರಿ. ಶ. ೧೫೯೦ - ೧೪೨೦) ಆತನ ಮಕ್ಕಳಾದ ಪಾಂಡ್ಯ ಮತ್ತು ರಾಮನಾಥ ಎಂಬಿಬ್ಬರು ಕೆರೆವಾಸೆಯಿಂದ ಆಳ್ವಿಕೆ ನಡೆಸಿದರು." ರಾಮನಾಥನು ಸಾತ್ವಿಕ ಸ್ವಭಾವದವನು. ಇವನು ನಿರ್ಮಿಸಿದ ವಿಶಾಲವಾದ ಸರೋವರವು ರಾಮಸಮುದ್ರವೆಂಬ ಹೆಸರಿನಲ್ಲಿ ಈಗಲೂ ಉಳಿದುಕೊಂಡಿದೆ. ಭೈರರಸರ ಮನೆತನಕ್ಕೆ ಸೇರಿದ ಕ್ರಿ. ಶ. ೧೫೦೮ರ ಮರ್ಣೆ ಶಾಸನದಲ್ಲಿ [21] " ಒಂದನೇ ಪಾಂಡ್ಯನು ಕಾರ್ಕಳದ ಗೊಮ್ಮಟವನ್ನು ಕ್ರಿ. ಶ. ೧೪೩೨ರಲ್ಲಿ ಸ್ಥಾಪಿಸಿದ್ದನೆಂಬುದರಲ್ಲಿ ಸಂಶಯವಿಲ್ಲ."

ಕೆಳದಿ ಅರಸರು ಪ್ರಭಾವಕ್ಕೆ ಬರುತ್ತಿರುವಂತೆ ಭೈರರಸರು ಕ್ರಮವಾಗಿ ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತ ಬಂದರು. ಕೆಳದಿಯ ದೊಡ್ಡ ಸಂಕಣ್ಣ ನಾಯಕನು, ೫ನೆಯ ಭೈರವನನ್ನು ಯುದ್ಧದಲ್ಲಿ ಸೋಲಿಸಿದರೆ ವೆಂಕಪ್ಪ ನಾಯಕನು ಭೈರರಸನಿಂದ ಕೊಪ್ಪ, ಬೆಳ್ಳಾರೆ ಮುಂತಾದ ಭಾಗಗಳನ್ನು ಕಿತ್ತುಕೊಂಡನು. ಮುಂದೆ ಇದೇ ವೆಂಕಪ್ಪ ನಾಯಕನು, ತನ್ನ ರಾಜ್ಯವನ್ನು ವಿಸ್ತರಿಸುತ್ತ ೭ ನೆಯ ಭೈರವನಿಂದ ಕಪ್ಪವನ್ನು ಪಡೆದುಕೊಂಡನೆಂದು ಕೆಳದಿ ನೃಪ ವಿಜಯದಲ್ಲಿ ವರ್ಣಿಸಲಾಗಿದೆ. ಹಾಗೂ ಹೀಗೂ ಜೀವ ಹಿಡಿದುಕೊಂಡಿದ್ದ ಭೈರವ ಅರಸನು ಶೃಂಗೇರಿಯನ್ನು ಪುನಃ ಪಡೆದನೆಂದು 'ಗುರುವಂಶ ಕಾವ್ಯ'ದಲ್ಲಿ ಉಕ್ತವಾಗಿದ್ದರೂ, ಮುಂದೆ ಕ್ರಿ. ಶ. ೧೭೬೩ರ ಹೈದರ್ಆಲಿಯ ದಾಳಿಯೊಡನೆ ಭೈರವ ಅರಸರ ಆಳ್ವಿಕೆಯೂ ಕೊನೆಗೊಂಡಿತ್ತೆಂದು ಹೇಳಬಹುದು.

ಕೈಫಿಯತ್ತಿನಲ್ಲಿ ಹೇಳಿದ ಕೊನೆಯ ತಲೆ ಕರಿಭೈರರಸು ಒಡೆಯನು, ಬಂಗ, ಅಜಿಲ, ಚೌಟ ಮತ್ತು ಮೂಲಿಗರೊಡನೆ ಒಪ್ಪಂದ ಮಾಡಿಕೊಂಡಿದ್ದನು. ಈ ಒಪ್ಪಂದಕ್ಕೆ ಚೌಟತಿ ಒಬ್ಬಳು ಮೋಸ ಮಾಡುತ್ತಾಳೆ. ಸಿಟ್ಟುಗೊಂಡ ಕರಿಭೈರರಸನು ಆ ಚೌಟತಿಯನ್ನು ಕೊಲ್ಲುತ್ತಾನೆ. ಕೆಲದಿನದ ನಂತರ ಇಕ್ಕೇರಿಯ ಅರಸು ಬಂದು, ಕರಿಭೈರರಸನನ್ನು ಸೋಲಿಸುತ್ತಾನೆ. ಎಂದು ಕೈಫಿಯತ್ತಿನಿಂದ ತಿಳಿದುಬರುತ್ತದೆ.

೫. ೧. ೫. ಇತರ ಹೆಗ್ಗಡೆ ಬಲ್ಲಾಳರು

೫. ೧. ೫. ೧. ಕಾಪು ಮರ್ದ ಹೆಗ್ಗಡೆ :

ಕಾಪು ರಾಜ್ಯವನ್ನು ಆಳಿದ ಮರ್ದ ಹೆಗ್ಗಡೆಯ ಉಲ್ಲೇಖವು ಒಂದು ಶಾಸನದಲ್ಲಿ ಬಂದಿದೆ. ಇವರು ಎಂದಿನಿಂದ ಸ್ವಾತಂತ್ರವಾಗಿ ರಾಜ್ಯವನ್ನು ಕಟ್ಟಿದರೆಂಬುದು ಸ್ಪಷ್ಟವಿಲ್ಲ. ಕ್ರಿ. ಶ. ೧೪೭೫ರ ಉಡುಪಿಯ ಶಾಸನದಲ್ಲಿ ಕಾಪು ಸ್ತಾನವೆಂದು ಕರೆಯಲಾಗಿದೆ. ಇಲ್ಲಿ ಸ್ತಾನ ಎನ್ನುವುದು ರಾಜಧಾನಿ ಸೂಚಕವಾದ ಹೆಸರೆಂಬುವುದನ್ನು ಗಮನಿಸಬೇಕು. ಈ ಶಾಸನದಲ್ಲಿ ನಾಲ್ವರು ರಾಜರುಗಳಾದ ಎಲ್ಲೂರಿನ ಕುಂದ ಹೆಗ್ಗಡೆ

ಏಳಿಂಜೆಯ ಕಿನ್ನಿಕ ಹೆಗ್ಗಡೆ, ಕಾಪುವಿನ ಮರ್ದ ಹೆಗ್ಗಡೆ ಮತ್ತು ಎರಡು ನಾಡಿನ ಚೌಟರು ತಮ್ಮ ತಮ್ಮ ರಾಜ್ಯದ ಮೇಲೆ ಪರಸ್ಪರ ದಂಡೆತ್ತಿ ಬಂದು ಯುದ್ಧ ಮಾಡಬಾರದೆಂದು ಒಪ್ಪಂದ ಮಾಡಿಕೊಂಡ ವಿಚಾರವಿದೆ.

ಇವರ ರಾಜ್ಯದಲ್ಲಿ ಪಡುಮಲ್ಲಾರು, ಮೂಲೂರು, ಪಾದೂರು, ಹೆರೂರು, ಮುಜೂರು ಮತ್ತು ಇನ್ನಂಜಿ ಗ್ರಾಮಗಳು ಸೇರಿದ್ದವು. ಇವರು ಧರ್ಮನಾಥ ಬಸದಿಯನ್ನು ನಿರ್ಮಿಸಿದ್ದರಲ್ಲದೆ, ಪಡು ಗ್ರಾಮದ ಜನಾರ್ದನ ಸ್ವಾಮಿಯ ಭಕ್ತರೂ ಆಗಿದ್ದರು.

೫. ೧. ೫. ೨. ಎರ್ಮಾಳಿನ ಮಾರಮ್ಮ ಹೆಗ್ಗಡೆ

ಈಗಿನ ಉಡುಪಿ ತಾಲೂಕಿನ ಎರ್ಮಾಳಿನಲ್ಲಿ ಮಾರಮ್ಮ ಹೆಗ್ಗಡೆಯ ಅರಮನೆ ಇದೆ. ಬಡ ಮತ್ತು ತೆಂಕ ಗ್ರಾಮಗಳು ಇವರ ಆಡಳಿತಕ್ಕೆ ಸೇರಿದ್ದವು. [22]"ಎರ್ಮಾಳಿನ ಕ್ರಿ. ಶ. ೧೪೦೨ರ ಶಾಸನದಲ್ಲಿ ಈ ಮಾರಮ್ಮ ಹೆಗ್ಗಡೆಯ ಉಲ್ಲೇಖವು ಕಂಡು ಬರುತ್ತದೆ". ವಿಜಯನಗರ ಅರಸರ ಆಡಳಿತದ ಕಾಲದಲ್ಲಿ ತುಳುನಾಡಿನಲ್ಲಿ ನಡೆದ ರಾಜಕೀಯ ಒಪ್ಪಂದದಲ್ಲಿ ಇವರು ಸಾಕ್ಷಿಗಳಾಗಿಯೂ ಗೋಚರಿಸುತ್ತಾರೆ. ಜನಾರ್ದನ ಸ್ವಾಮಿ ಇವರ ಸೀಮೆಯ ದೇವರಾದರೆ, ಚಂದ್ರನಾಥ ಸ್ವಾಮಿ ಇವರ ಕುಲದೈವ. ಈಗಲೂ ಎರ್ಮಾಳಿನಲ್ಲಿ ಇವರ ಅರಮನೆ ಇದ್ದು ಇವರ ಸಂತತಿಯವರು ವಾಸವಾಗಿದ್ದಾರೆ.

೫. ೧. ೫. ೩. ಮೂಡಬಿದಿರೆ ಕಿನ್ಯಕ್ಕ ಬಲ್ಲಾಳ

ಉಡುಪಿಯ ಹತ್ತಿರದ ಪಡುಬಿದಿರೆಯಲ್ಲಿ ಇವರ ಅರಮನೆ ಇದೆ. [23]"ಪಾದೆಬೆಟ್ಟು, ನಡ್ಸಾಲ, ಪಲ್ಮಾರ ಈ ಮೂರು ಗ್ರಾಮಗಳ ಒಡೆತನ ಇವರಿಗಿತ್ತು." ಇವರ ಸೀಮೆಯ ದೇವರು ಮಹಾಲಿಂಗೇಶ್ವರ, ಈ ಅರಸರ ಪಟ್ಟದ ಮುದ್ರೆಯುಂಗುರದಲ್ಲಿ 'ಮಹಾದೇವ' ಎಂಬ ಅಭಿಲೇಖವಿದೆ. ಮುನಿಸೂವ್ರತ ಬಸದಿಯೂ ಇವರ ಅರಮನೆಯ ಹತ್ತಿರವಿದೆ.

೫. ೧. ೫. ೪. ಕಟ್ಟಪಾಡಿ ಬಲ್ಲಾಳ

ಕಟ್ಟಪಾಡಿ ಬಲ್ಲಾಳರು ಮೂಡುಬೆಟ್ಟು, ಕೋಟೆ, ಪಾಂಗಾಳ ಮುಂತಾದ ೧೦ ಗ್ರಾಮಗಳ ಅಧಿಕಾರವನ್ನು ಹೊಂದಿದ್ದರು. ಇವರ ಬೀಡು ಮೂಡಬೆಟ್ಟು ಗ್ರಾಮದ ಕಟ್ಟುಪಾಡಿಯಲ್ಲಿದೆ. ಮೂಡಬೆಟ್ಟು ಮಹಾಲಿಂಗೇಶ್ವರ ಸೀಮೆಯ ದೇವರಾದರೆ ಅನಂತನಾಥ ಇವರ ಕುಲದೈವ, ಅನಂತನಾಥ ಬಸದಿಯು ಕಟ್ಟುಪಾಡಿಯಲ್ಲಿದೆ.

೫. ೧. ೫. ೫. ಬೆಟ್ಟುಪಾಡಿ ಬಲ್ಲಾಳ

ಬೆಟ್ಟುಪಾಡಿ ಬಲ್ಲಾಳರು ಹೆರಗ, ಬಡಗಬೆಟ್ಟು, ಹಿರೇಬೆಟ್ಟು ಮುಂತಾದ ಆರು ಗ್ರಾಮಗಳ ಅಧಿಕಾರವನ್ನು ಹೊಂದಿದ್ದರು. ಇಲ್ಲಿಯ ಬೀಡು ಮತ್ತು ಹಲ್ಲರ ಬಸದಿಗಳು ನಾಶವಾಗಿವೆ. ಇಲ್ಲಿಯ ಅಧಿಕಾರವು ಜೈನ ಮತಸ್ಥರ ಕೈಯಿಂದ ತಪ್ಪಿ ಬ್ರಾಹ್ಮಣರ ವಶಕ್ಕೆ ಈಗ ಬಂದಿದೆ.

೫. ೧. ೫. ೬. ನಿಡಂಬೂರು ಬಲ್ಲಾಳ :

ಇವರು ಶಿವಳ್ಳಿ, ಕಡೆಕಾರ, ಕಿದಿಯೂರು ಮುಂತಾಗಿ ೧೧ ಗ್ರಾಮಗಳ ಅಧಿಕಾರವನ್ನು ಹೊಂದಿದ್ದರು. ನಿಡಂಬೂರಿನಲ್ಲಿ ಈಗಲೂ ಇವರ ಮನೆತನವಿದೆ. ಇಲ್ಲಿಯ ಅಧಿಕಾರವು ಜೈನಮತಸ್ಥರ ಕೈತಪ್ಪಿ ಈಗ ಬ್ರಾಹ್ಮಣರ ವಶಕ್ಕೆ ಬಂದಿದೆ.

೫. ೧. ೫. ೭. ಎಲ್ಲೂರು ಕುಂದ ಹೆಗ್ಗಡೆ

ಈ ಹೆಗ್ಗಡೆಯವರು ಪಿಲಾರ, ಸಾಂತೂರು, ಕುತ್ಯಾರ, ಕಳತ್ತೂರು ಮೊದಲಾದ ಎಂಟು ಗ್ರಾಮಗಳ ಅಧಿಕಾರ ಹೊಂದಿದ್ದರು. ಇವರ ಅರಮನೆ ಕುತ್ಯಾರಿನಲ್ಲಿ ಈಗಲೂ ಇದೆ. ವಿಶ್ವನಾಥ ಸೀಮೆ ದೇವಾಲಯವು ಎಲ್ಲೂರಿನಲ್ಲಿದೆ. ಕುಲದೈವವಾದ ಚಂದ್ರನಾಥ ಬಸದಿಯು ನಂದಿಕೂರಿನಲ್ಲಿದೆ.

ಹೀಗೆ ಅನೇಕ ವರ್ಷಗಳವರೆಗೆ ತುಳುನಾಡನ್ನು ಆಳಿದ ಅರಸು ಮನೆತನಗಳ ಭವ್ಯ ಇತಿಹಾಸದಲ್ಲಿ ಬರುವ ಮಹತ್ವಪೂರ್ಣವಾದ ಘಟನೆಗಳು ಮತ್ತು ಅವರ ಸಾಧನೆಗಳನ್ನು ದ. ಕ. ಜಿಲ್ಲೆಯ ಕೈಫಿಯತ್ತಿನಿಂದ ತಿಳಿಯಬಹುದು.

ಅಡಿಟಿಪ್ಪಣಿಗಳು

1.	ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪುಟ. ಸಂ. 60
2.	ಕೆ. ಕುಶಾಲಪ್ಪ ಕೆ., ಚೆನ್ನಪ್ಪ ಗೌಡ	:	ದ.ಕ. ಜಿಲ್ಲೆಯ ಕೈಫಿಯತ್ತುಗಳು ಪು. ಸಂ. 10
3.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪುಟಸಂಖ್ಯೆ 89
4.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪುಟಸಂಖ್ಯೆ 89
5.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪುಟಸಂಖ್ಯೆ 89
6.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪುಟಸಂಖ್ಯೆ 89
7.	ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪುಟ ಸಂ. 63
8.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 84
9.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 86
10.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 87
11.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪುಟ ಸಂ. 87
12.	ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪುಟ ಸಂ. 40
13.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 78
14.	ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪುಟ ಸಂ. 40
15.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 79
16.	ಡಾ. ಪುರುಷೋತ್ತಮ ಬಿಳಿಮಲೆ	:	ಮೆಕೆಂಜಿ ಕೈಫಿಯತ್ತುಗಳು ಪು. ಸಂ. 51
17.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 74
18.	ಸಂ. ಹೆರಂಜೆ ಕೃಷ್ಣ ಭಟ್, ಡಾ. ಎಸ್. ಡಿ. ಶೆಟ್ಟಿ	:	ತುಳು ಕರ್ನಾಟಕ ಅರಸು ಮನೆತನಗಳು ಪು. ಸಂ. 39
19.	ಡಾ. ಪುರುಷೋತ್ತಮ ಬಿಳಿಮನೆ	:	ಮೆಕೆಂಜಿ ಕೈಫಿಯತ್ತುಗಳು ಪು. ಸಂ. 55
20.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 76
21.	ಡಾ. ಪುರುಷೋತ್ತಮ ಬಿಳಿಮನೆ	:	ಮೆಕೆಂಜಿ ಕೈಫಿಯತ್ತುಗಳು ಪು. ಸಂ. 57
22.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 90
23.	ಡಾ. ಯಸ್. ಡಿ. ಶೆಟ್ಟಿ	:	ತುಳುನಾಡಿನ ಜೈನ ಧರ್ಮ ಪು. ಸಂ. 91

◆ ◆ ◆

ಅಧ್ಯಾಯ - ೬

ಕೈಫಿಯತ್ತುಗಳ ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ - ೬

ಕೈಫಿಯತ್ತುಗಳ ಸಾಂಸ್ಕೃತಿಕ ಅಧ್ಯಯನ

ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿಕ ಚಿತ್ರಣವನ್ನು ಕೈಫಿಯತ್ತುಗಳು ಈ ರೀತಿ ನೀಡುತ್ತವೆ. ಈಗಾಗಲೆ ವಿವರಿಸಿದಂತೆ ಕೈಫಿಯತ್ತಿನಲ್ಲಿ ಬರುವ ಧಾರ್ಮಿಕ, ರಾಜಕೀಯ, ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಲಾಯಿತು. ಇವುಗಳ ಹೊರತಾಗಿ ತುಳುನಾಡಿನ ಅನೇಕ ಸಾಂಸ್ಕೃತಿಕ ವಿವರಗಳು ಇದರಲ್ಲಿ ಕಂಡುಬರುತ್ತವೆ. ಆಂಗ್ಲರ ಆಡಳಿತದ ಸಂದರ್ಭದಲ್ಲಿ ಇಡೀ ತುಳುನಾಡಿನ ಸಂಸ್ಕೃತಿ ಹೇಗೆ ಪಲ್ಲಟಗೊಳ್ಳುತ್ತಿತ್ತು ಎನ್ನುವುದನ್ನು ಇವುಗಳಿಂದ ಅರಿಯಬಹುದಾಗಿದೆ. ಆಂಗ್ಲರ ಸಂಪರ್ಕದಿಂದ ಆಧುನಿಕ ವಿಚಾರಧಾರೆ ತನ್ನ ಪ್ರಭಾವವನ್ನು ಬೀರುತ್ತಿದ್ದರೆ, ಇನ್ನೊಂದೆಡೆ ದೇಸೀಯವಾಗಿ ಬೆಳೆದುಬಂದಿದ್ದ ಅನೇಕ ವಿಚಾರಗಳನ್ನು ಕೈಫಿಯತ್ತಿನಲ್ಲಿ ಸೇರಿಸಿರುವುದನ್ನು ಕಾಣುತ್ತೇವೆ. ವಿದ್ಯಾಭ್ಯಾಸ ಜನಸಾಮಾನ್ಯರ ಕೈಗೆ ಬಂದಾಗ ಅವರ ಒಟ್ಟು ಬದುಕಿನಲ್ಲಿ ಸಾಕಷ್ಟು ಗೊಂದಲಗಳು ಇದ್ದುದು ಪರೋಕ್ಷವಾಗಿ ಕಂಡುಬರುತ್ತವೆ.

ಹೇಗೆ ಚಾರಿತ್ರಿಕ ವಿವರಗಳು ಸಂಪ್ರದಾಯದ ಹಿನ್ನಲೆಯಲ್ಲಿ ಅನಾವರಣಗೊಂಡಿದೆ ಎನ್ನುವುದು ಕಾರ್ಕಳ ಅರಸರ ಕೈಫಿಯತ್ತಿನಿಂದ ತಿಳಿದುಕೊಳ್ಳಬಹುದು. ಶಾಂತಜರ ವಂಶಸ್ಥರಾದ ಭೈರರಸ ಒಡೆಯರು ಆಡಳಿತ ನಡೆಸುವ ಸಂದರ್ಭದಲ್ಲಿ ಸ್ಥಳೀಯ ಸಮಸ್ಯೆಯಿಂದಾಗಿ ಹೊಂಬುಚ್ಚದಿಂದ ಸೈನ್ಯವನ್ನು ಕರೆಸುತ್ತಾರೆ. ಸೈನ್ಯ ಕಾಬೇಟಿ ನಲ್ಲೂರಿಗೆ ಬಂದಾಗ ಅಲ್ಲಿ ತೊಂದರೆ ಕೊಡುತ್ತಿದ್ದ ಹೆಗ್ಗಡೆ ಘಟ್ಟದ ಮೇಲೆ ಪಲಾಯನ ಮಾಡುತ್ತಾನೆ. ಭೈರರಸ ಒಡೆಯನು ಹೆಗ್ಗಡೆಯ ಮನೆಯ ಸಮೀಪ ಅರಮನೆಯೊಂದನ್ನು ಕಟ್ಟಿಸಿ ಅದನ್ನು ಪ್ರವೇಶಿಸುವಾಗ ಆ ಹಿಂದಿನ ಹೆಗ್ಗಡೆಯ ಕಾಲದೈವಗಳು ಉಪದ್ರವ ಕೊಡುತ್ತವೆ. ಆ ಕುಲದೈವಗಳಿಗೆ ಒಡಂಬಡಿಕೆ ಹೇಳಿಸಿದ ಮೇಲೆ ಅರಮನೆ ಪ್ರವೇಶಕ್ಕೆ ದಾರಿ ಮಾಡಿಕೊಡುತ್ತವೆ. ಅನಂತರ ಭೈರರಸನು ತನ್ನ ಕುಲದೇವರು ನೇಮೇಶ್ವರ ದೇವರಿಗೆ ಕಾರೆಮರದ ಬುಡದಲ್ಲಿ ಹುಲಿಯೂ ಗೋವೂ ಒಗಟ್ಟಾಗಿದ್ದ ಸ್ಥಳದಲ್ಲಿ ಚೈತ್ಯಾಲಯವೊಂದನ್ನು ಕಟ್ಟಿಸುತ್ತಾನೆ. ಮತ್ತು ತನ್ನ ರಾಜ್ಯಕ್ಕೆ ಕಾರಕಳ ಎಂದು ಹೆಸರಿಟ್ಟುಕೊಂಡಂತೆ ಆ ಕೈಫಿಯತ್ತು ತಿಳಿಸುತ್ತದೆ. ಅಂದರೆ ಚಾರಿತ್ರಿಕ ಘಟನೆಯ ಜೊತೆಯಲ್ಲಿ ಸ್ಥಳೀಯ ಐತಿಹ್ಯಗಳು ಸೇರಿಕೊಂಡಿರುವುದನ್ನು ನಾವು ಗುರುತಿಸಬಹುದು. ಇದೇ ರೀತಿ ಸ್ಥಳೀಯ ಅರಸರು ಒಪ್ಪಂದವನ್ನು ಮಾಡಿಕೊಂಡು ನಾವೆಲ್ಲರೂ ಒಗ್ಗಟ್ಟಾಗಿರಬೇಕು. ಅಡ್ಡ ಯೋಚನೆ ಮಾಡಬಾರದು ಎನ್ನುವಾಗ ಚೌಟರಾಣಿ ತನ್ನ ಕೈಯಲ್ಲೊಂದು ನೊಣವನ್ನು ಹಿಡಿದುಕೊಂಡು ಈ ಜೀವವಿರುವ ಪರ್ಯಂತ ಎಂದು ಮಾರ್ಮಿಕವಾಗಿ ನುಡಿಯುತ್ತಾಳೆ. ವೇಣೂರಿನಲ್ಲಿ ಗೊಮ್ಮಟ ಮೂರ್ತಿಯನ್ನು ಸ್ಥಾಪನೆ ಮಾಡಿದ ಸಂದರ್ಭದಲ್ಲಿ ಇಂತದ್ದೇ ಘಟನೆಗಳು ನಡೆದಿರುವುದನ್ನು ಕೈಫಿಯತ್ತು ತಿಳಿಸುತ್ತದೆ. ಮಂಗಳೂರಿನ ಶೇಕ್‌ಅಲಿ ಎಂಬವನು ಅಜಿಲರ ಆಸ್ತಿಯನ್ನೆಲ್ಲ ಜಪ್ತಿಮಾಡಿ ಬಹಳ ಕಡಿಮೆ ಇನಾಮು ನೀಡುವ ವ್ಯವಸ್ಥೆ ಮಾಡುತ್ತಾನೆ. ಕಂಪನಿ ಸರಕಾರ ಕೊಡುವ ಅಲ್ಪ ಇನಾಮು ಹಣವನ್ನು ಪಡೆದುಕೊಂಡು ಕಾಲಕ್ಷೇಪ ಮಾಡುತ್ತಿದ್ದರೆಂದು ಆ ಕೈಫಿಯತ್ತು ತಿಳಿಸುತ್ತದೆ. ಕೈಫಿಯತ್ತಿನಲ್ಲಿ ಕಂಡುಬರುವ ರಾಜನ ಪ್ರಶಸ್ತಿಗಳನ್ನು ನೀಡಿದರೆ ತಮ್ಮ ಹಿಂದಿನ ವೈಭಗಳನ್ನೆಲ್ಲವನ್ನು ಕಳೆದುಕೊಂಡರೂ ನೆನಪಿನಲ್ಲಿ ಮಾತ್ರ ಉಳಿದಿರುವ ಗತಕಾಲದ ಬಗೆಗೆ ಸುಂದರ ಕಲ್ಪನೆ ಮಾಡಿಕೊಳ್ಳುತ್ತಿದ್ದರೆಂದು ಹೇಳಬಹುದಾಗಿದೆ. ಇದೇ ರೀತಿ ಚೌಟ ಅರಸ ಸೋಮೇಶ್ವರ ದೇವರನ್ನು ಭಕ್ತಿಯಿಂದ ಪೂಜಿಸಿದಾಗ ದೇವರು

ಕನಸಿನಲ್ಲಿ ಬಂದು ಅವನ ವೃತಾಚರಣೆಗೆ ಕಾರಣ ಕೇಳಿದಾಗ ತನ್ನ ದಾರಿದ್ರ್ಯ ಅವಸ್ಥೆಯನ್ನು ಹೇಳಿಕೊಳ್ಳುವುದು, ಕಾಸರ್ಕನ ಮರ ಕಡಿದು ನೆಲ ಸಮತಟ್ಟು ಮಾಡುವಾಗ ಒಂದು ಕೊಪ್ಪರಿಗೆ ದ್ರವ್ಯ ಸಿಗುವುದು, ಆಗ ದೈವಂತೆ ಎಂಬ ದೇವತೆಯು ಕಾಣಿಸಿಕೊಂಡು ಅದಕ್ಕೆ ಬಲಿಕೊಟ್ಟು ಗುಡಿಯೊಂದನ್ನು ಕಟ್ಟಿಸುವುದು ಇಂತಹ ಅನೇಕ ವಿಸ್ಮಯಕಾರಕ ಸಂಗತಿಗಳು ಕೈಫಿಯತ್ತುಗಳಲ್ಲಿ ಸೇರಿಕೊಂಡಿರುವುದನ್ನು ಗುರುತಿಸಬಹುದು. ಕಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಮಯೂರವರ್ಮನ ಸಂತತಿಯ ಅರಸ ಅರಣ್ಯ ಪ್ರದೇಶಕ್ಕೆ ಬೇಟೆಯಾಡುತ್ತಾ ಬಂದು ರಸಬಾವಿಯೊಂದನ್ನು ಕಂಡುಹಿಡಿಯುವುದು, ಮತ್ತು ಅಲ್ಲಿಯೇ ಅರಮನೆ ಕಟ್ಟಿಸಿ ಕಡವೆ ಮೃಗದ ಕಾರಣವಾಗಿ ಕಡಬ ಎಂದು ತನ್ನ ಸಂಸ್ಥಾನಕ್ಕೆ ಹೆಸರಿಡುವುದು. ಯಾವುದೋ ಮೈಮನಸಿಗೆ ಕಾರಣವಾಗಿ ರಂಗರಾಜ ಅರಸ ರೋಷದಿಂದ ತನ್ನ ಕಿರಿಯ ಹೆಂಡತಿಯ ತಲೆ ಕಡಿದು ಅವಳ ಮಾಂಸದ ಅಡುಗೆ ಮಾಡಿ ಅವರ ಮನೆಯವರಿಗೆ ಬಲಾತ್ಕಾರವಾಗಿ ತಿನ್ನಿಸುವುದು, ಇಂತಹ ಅನೇಕ ಚೋದ್ಯ ಘಟನೆಗಳು ಕೈಫಿಯತ್ತುಗಳಲ್ಲಿ ಗರಿಗೆದರಿಗೊಳ್ಳುತ್ತದೆ. ಟಿಪ್ಪು ಸುಲ್ತಾನನು ದೇವಾಲಯವನ್ನು ಕಟ್ಟಿಸಿದ, ಬೆಳೆಗಳನ್ನು ಮಾಡಿಸಿದ, ಎನ್ನುವಾಗ ಆ ಕಾಲದಲ್ಲಿ ಕೃಷಿಗೆ ಸಂಬಂಧಪಟ್ಟ ಮಾಹಿತಿ ತಿಳಿದು ಬರುತ್ತವೆ. ಅದಮಾರು ಮಠದ ಕೈಫಿಯತ್ತಿನಲ್ಲಿ ಸುಮಾರು ೭೫ ಪುಸ್ತಕಗಳ ಪಟ್ಟಿಯನ್ನು ನೀಡಲಾಗಿದೆ. ಇದನ್ನು ಗಮನಿಸಿದಾಗ ಮಠಗಳು ಧಾರ್ಮಿಕ ಕಾರ್ಯಗಳ ಜೊತೆ ಜೊತೆಗೆ ಶಿಕ್ಷಣಕ್ಕೆ ಹೇಗೆ ಮಹತ್ವ ಕೊಡುತ್ತಿದ್ದರೆಂದು ಕೈಫಿಯತ್ತಿನಿಂದ ತಿಳಿದುಬರುತ್ತದೆ. ಬಾರಕೂರು ಸಂಸ್ಥಾನದ ಕೈಫಿಯತ್ತಿನಲ್ಲಿ ಮುಚುಕುಂದನೆಂಬ ಋಷಿಯ ಆಶ್ರಮದ ಹಸುವೊಂದು ಶಿವಲಿಂಗದ ಮೇಲೆ ಕೆಚ್ಚಲಿಂದ ಹಾಲು ಸುರಿಸುವುದು, ಕಾಪಿನ ದೇವಸ್ಥಾನದ ಕೈಫಿಯತ್ತಿನಲ್ಲಿ ವದ್ದ ಹೆಗ್ಗಡೆ ದೇವರ ಮಾತನ್ನು ಉಪೇಕ್ಷಿಸಿ ಅನಿಷ್ಟ ಉಂಟಾದಾಗ ಬ್ರಾಹ್ಮಣರನ್ನು ಕರೆಸಿ ಬ್ರಹ್ಮಕಲಶಾದಿ ಕಾರ್ಯಗಳನ್ನು ನೆರವೇರಿಸಿದನು ಎನ್ನುವಾಗ, ಅಶುದ್ಧ ಅನಿಷ್ಟಗಳುಂಟಾದಾಗ ಈಗಿನಂತೆ ಆಗಿನ ಕಾಲದಲ್ಲಿ ಇಂತಹ ಕಾರ್ಯಗಳನ್ನು ಮಾಡುತ್ತಿದ್ದರು ಎಂದು ಕೈಫಿಯತ್ತಿನಿಂದ ಸ್ಪಷ್ಟವಾಗುತ್ತವೆ. ಕೈಫಿಯತ್ತುಗಳಲ್ಲಿ ಕಂಡು ಬರುವ ರಥೋತ್ಸವ, ಬ್ರಹ್ಮಕಲಶಗಳು ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳಲ್ಲಿ ಈಗಲೂ ಕಂಡು ಬರುವ ಆಚರಣೆಗಳಾಗಿವೆ. ಕುಂಜಾರು ಕೈಫಿಯತ್ತಿನಲ್ಲಿ ಕಂಪನಿ ಸರಕಾರದ ಆಧೀನ ಬಂದಾಗ ಹುಟ್ಟುವಳಿ, ಕೈಧರ್ಮ, ಒಳಧರ್ಮ ಮುಂತಾದವುಗಳಿಂದ ಬರುವ ಹುಟ್ಟುವಳಿಯನ್ನು ಸೇರಿಸಿಕೊಂಡು ತಸ್ತೀಕು ಎಂದು ಕೊಡುವುದು ಇತ್ಯಾದಿ ವಿವರಗಳು ದೊರಕುತ್ತವೆ.

ಕೈಫಿಯತ್ತಿನಲ್ಲಿ ಗ್ರಾಮ - ಉಪಗ್ರಾಮ, ಗ್ರಾಮ ಪಟೇಲರು ಶ್ಯಾನುಭೋಗ ಮುಂತಾದ ಅಧಿಕಾರಿ ವರ್ಗದವರ ಹೆಸರನ್ನು ಭೈರೂರು ಮಾಗಣೆ ಕೈಫಿಯತ್ತು ಉಲ್ಲೇಖಿಸುತ್ತದೆ. ಅದೇ ಕೈಫಿಯತ್ತು ೧ ಮಸೀದಿಯೂ ಸೇರಿದಂತೆ ಒಟ್ಟು ೨೫ ದೇವಾಲಯದ ಪಟ್ಟಿಯನ್ನು ಕೊಡುವುದು ಕುತೂಹಲಕರ ಅಂಶವಾಗಿದೆ. ದೇವಸ್ಥಾನದ ಅಧಿಕಾರಿಗಳನ್ನು ಹೆಸರಿಸುತ್ತಾ ಅರ್ಚಕರು, ತಂತ್ರಿ, ಅಡಿಗರು, ಕೇಳುಶಾಂತಿ ಮುಂತಾದವರು ನಿಯುಕ್ತಗೊಂಡಿದ್ದರೆಂದು ಎಲ್ಲೂರು ದೇವಸ್ಥಾನದ ಕೈಫಿಯತ್ತಿನಿಂದ ತಿಳಿದು ಬರುತ್ತದೆ. ವಿಶ್ವನಾಥ ಉಮಾಮಹೇಶ್ವರ, ಭಾರ್ಗವೇಶ್ವರ, ಮಹಿಷಾಸುರಮರ್ದಿನಿ, ಶ್ರೀ ಕೃಷ್ಣ, ಪರಶುರಾಮ, ಮೂಕಾಂಬಿಕೆ, ಪಾರ್ವತಿ ಈ ಎಲ್ಲಾ ದೇವರ ಹೆಸರುಗಳು ಕೈಫಿಯತ್ತಿನಿಂದ ಗೋಚರಿಸುತ್ತದೆ. ಎಲ್ಲೂರು ದೇವಸ್ಥಾನದ ಕೈಫಿಯತ್ತನ್ನು ವಿಶ್ವೇಶ್ವರಯ್ಯ, ಗಂಗಾಧರಯ್ಯ, ನರಸಯ್ಯ ಬರೆದುಕೊಟ್ಟಂತೆ ಆ ಕೈಫಿಯತ್ತು ನಮೂದಿಸಿದರೆ, ಕುಂಬಕಾಸಿ ಕೈಫಿಯತ್ತಿನಲ್ಲಿ ಪದ್ಮ ಪುರಾಣದ ಪುಷ್ಕರಖಂಡದ ೬೫ ರಿಂದ ೮೯ನೇ ಅಧ್ಯಾಯದವರೆಗೆ ಒಟ್ಟು

೨೪ ಅಧ್ಯಾಯಗಳಲ್ಲಿ ಆ ಕ್ಷೇತ್ರದ ಮಹಿಮೆಯನ್ನು ಹೇಳಿದಂತೆ ತಿಳಿಸಲಾಗಿದೆ. ಕುಂಬಕಾಸಿ ಕೈಫಿಯತ್ತಿನಲ್ಲಿ ಕುಂಬಕಾಸಿ ಹೆಸರು ಹೇಗೆ ಬಂತು ಎಂಬ ಕುತೂಹಲದ ವಿವರ ಹೀಗೆ ಕಂಡು ಬರುತ್ತದೆ. ಕುಂಭಾಸುರನೆಂಬ ರಾವಣನ ಮಗ ರಾಮಬಾಣದಿಂದ ತಪ್ಪಿಸಿಕೊಂಡು ಸಮುದ್ರದಲ್ಲಿ ಬಿದ್ದು ಬಂದು ಈ ಹರಿಕ್ಷೇತ್ರದಲ್ಲಿ ಒಂದು ಗುಹೆಯನ್ನು ಸೇರಿಕೊಂಡನೆಂದು ತಿಳಿದಿದೆ. ಮುಂದೆ ಇವನನ್ನು ಭೀಮನ ವಧೆ ಮಾಡಿದ ನಂತರ ಈ ಕ್ಷೇತ್ರಕ್ಕೆ ಕುಂಬಾಕ್ಷೇತ್ರವೆಂದು ಹೆಸರಾಯಿತ್ತೆಂದು ಕೈಫಿಯತ್ತಿನಲ್ಲಿ ತಿಳಿಸಿದೆ. ಇದಕ್ಕೂ ಪೂರ್ವದಲ್ಲಿ ಕುಂಭದಿಂದ ಈಶ್ವರ ಆವಿರ್ಭೂತನಾದುದರಿಂದ ಈ ಕ್ಷೇತ್ರಕ್ಕೆ ಕುಂಭಾಕಾಸಿ ಎಂಬ ಹೆಸರು ಬಂತು ಎಂದು ಕೈಫಿಯತ್ತಿನಲ್ಲಿ ಹೇಳಲಾಗಿದೆ. ಬಳಿಸಾಗರದ ಕೈಫಿಯತ್ತಿನಲ್ಲಿ ಭಕ್ತಾಧಿಗಳು ತಮ್ಮ ಭೂಮಿಗಳನ್ನು ದೇವರ ನಂದಾದೀಪಕ್ಕೆ ದಾನ ನೀಡಿದ ಉಲ್ಲೇಖವಿದೆ. ಅದೇ ಕೈಫಿಯತ್ತಿನಲ್ಲಿ ಮನೆಯೊಳಗಿದ್ದದ್ದು ಮನೆ ಸುಟ್ಟು ಹೋದ ಪ್ರಸಂಗವನ್ನು ಹೇಳಲಾಗಿದೆ. ಹಿರಿಯರ ಕಾಲದಿಂದ ಬಂದ ಒಡವೆ, ಪತ್ರ ಮುಂತಾದುವುಗಳನ್ನು ಅರ್ಚಕ ಕೃಷ್ಣಯ್ಯನನ್ನು ಕಳ್ಳರು ಕಡಿದು ಹಾಕಿ ತೆಗೆದುಕೊಂಡು ಹೋದುದನ್ನು, ದೇವರಿಗೆ ನಿತ್ಯೋತ್ಸವ ನಡೆಯುತ್ತಿರುವುದನ್ನು ತಿಳಿಸಿ, 'ರಾಜ್ಯ ಪರಿಪಾಲನೆ ಮಾಡುವಂತಹ ದಣಿಗಳಿಗೆ ಆಯುರಾರೋಗ್ಯ ಆಗಲೆಂದು ಹಾರೈಸಲಾಗಿದೆ' ಅಂದರೆ ಭಾರತೀಯ ಸಂಸ್ಕೃತಿಯಲ್ಲಿ ನಡೆದು ಬಂದ 'ಯಥಾರಾಜ ತಥಾ ಪ್ರಜಾ' ಎಂಬ ಆದರ್ಶವು ಕೈಫಿಯತ್ತುಗಳ ಕಾಲದಲ್ಲೂ ಮುಂದುವರಿದು ಬಂದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಪೆರಡೂರ ಮಾಗಣೆ ದೇವಾಲಯದ ಕೈಫಿಯತ್ತಿನಲ್ಲಿ ಶಿಲಾಶಾಸನ ಮಾಡಿಸಿದರ ವಿವರ ಈ ರೀತಿ ಕಂಡು ಬರುತ್ತದೆ. ಕೃಷ್ಣರಾಯರ ಕಾಲದಲ್ಲಿ ಬಾರಕೂರ ರಾಜ್ಯವನ್ನಾಳಿದ ವಿಜಯಪ್ಪ ಒಡೆಯರು, ಅನಂತಪದ್ಮನಾಭ ದೇವರಿಗೆನಂದಾದೀಪ, ಅಮೃತಪಡಿಗೆ ೧. ೧೨೦ - ೦ ನೂರ ಇಪ್ಪತ್ತು ವರಹವನ್ನು ಕೊಟ್ಟು ಶಿಲಾಶಾಸನವನ್ನು ಮಾಡಿಸಿದರು ಎಂದು ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ.

ಜೈನ ಅರಸುಗಳ ವಂಶಾವಳಿ ಕೈಫಿಯತ್ತಿನಲ್ಲಿ ೬೮ ಅರಸರ ಹೆಸರುಗಳನ್ನು ಕೊಟ್ಟಿದ್ದು ಕೊನೆಯ ಮೂವರು ಜಿನದತ್ತರಾಯ, ಪಾಂಡಿರಾಜ ಭೂತಾಳ ಪಾಂಡಿರಾಯ ಎಂಬವರು ಚರಿತ್ರೋಕ್ತ ರಾಜರು ದಕ್ಷಿಣ ಕನ್ನಡ ಪ್ರದೇಶವನ್ನಾಳಿದರು ಎಂದು ತಿಳಿಸುತ್ತದೆ. ಉಳಿದವರು ಎಲ್ಲಿ ಆಳಿದರೆಂದು ಕೈಫಿಯತ್ತಿನಲ್ಲಿ ತಿಳಿಸುವುದಿಲ್ಲ. ಭೂತಾಳ ಪಾಂಡಿರಾಯನ ತನಕ ಜೈನ ಅರಸರು ಆಳಿದರೆಂದೂ, ಆ ಮೇಲೆ ಜೈನ ಅರಸರು ಆಳುವುದು ನಿಂತಿತು ಎಂದು ಕೈಫಿಯತ್ತಿನಲ್ಲಿ ಹೇಳಿದೆ. ಕೊಡಕೊರೊ ಮಾಗಣೆ ಕೈಫಿಯತ್ತಿನಲ್ಲಿ ಮಸೀದಿಯ ಪಟ್ಟಿ ಕಂಡುಬರುತ್ತದೆ. ನಾರಣಮಲ್ಲ ಎಂಬವನು ಪೇಟೆಯನ್ನು ಕಟ್ಟಿಸಿದ ವಿಚಾರವೂ ಇಲ್ಲಿ ಉಲ್ಲೇಖಿಸಲಾಗಿದೆ. ಮಾಗಣೆ ಬಲ್ಲಾಲ ಹೋಬಳಿಯನ್ನು ಮಣೆಗಾರನೇ ಆಡಳಿತ ನಡೆಸುತ್ತಿದ್ದು ಸುಲ್ತಾನರ ಕಾಲಕ್ಕೆ ಅದು ತುಕಡಿ ಆಯಿತ್ತೆಂದೂ ನಂತರ ಕಂಪನಿ ಸರಕಾರ ಬಂದ ಮೇಲೆ ಹದಿನೈದು ಜನ ಪಟೇಲರು ಅಧಿಕಾರ ವಹಿಸಿಕೊಂಡರೆಂಬ ಕೆಲವು ಆಡಳಿತಾತ್ಮಕ ವಿಚಾರಗಳು ಈ ಕೈಫಿಯತ್ತಿನಿಂದ ಕಂಡುಬರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೆಲವು ನದಿಗಳನ್ನು ಕೈಫಿಯತ್ತು ಹೆಸರಿಸಿದೆ. ಶುಕ್ತಿಮತಿ, ಸಾಪರ್ಣಿ, ವಾರಾಹಿ, ಚಕ್ರನದಿ, ಖೇಟಾ ಮತ್ತು ಗಂಗಾವಳಿ ಮುಂತಾದ ನದಿಗಳನ್ನು ಉಲ್ಲೇಖಿಸಲಾಗಿದೆ. ಗಂಗೊಳ್ಳಿ ಬಳಿ ಅಳಿವೆಯಿದ್ದುದನ್ನು ಅದೇ ಕೈಫಿಯತ್ತು ಹೇಳುತ್ತದೆ. ಆದರೆ ಅದನ್ನು ಮುಚ್ಚಿಸಿ ಬಸಪ್ಪ ನಾಯಕನ ಕಾಲಕ್ಕೆ ಹೊಸತು ಮಾಡಿಸಿದನೆಂದು ಅದು ತಿಳಿಸುತ್ತದೆ. ಗ್ರಾಮಗಳ ಜೊತೆಗೆ ಉಪಗ್ರಾಮಗಳು

ಕಾರ್ಯನಿರ್ವಹಿಸುತ್ತಿದ್ದುದು ಹಾರನಾಡ ಮಾಗಣೆ ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ. ಅಲ್ಲಿ ೨೦ ದೇವಾಲಯಗಳು ಇದ್ದುವೆಂದು ಅದೇ ಕೈಫಿಯತ್ತು ತಿಳಿಸುತ್ತದೆ. ಇಲ್ಲಿಯೂ ಕೂಡ ಮಣೆಗಾರರು ಆಡಳಿತ ನಡೆಸುತ್ತಿದ್ದು, ಶ್ಯಾನುಭೋಗರು ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಕೆಲವು ಕೈಫಿಯತ್ತಿನಲ್ಲಿ ಕೋಟೆಯನ್ನು ಕಟ್ಟಿಸಿದ ವಿವರಗಳಿವೆ. ಶಂಕರ ನಾರಾಯಣ ಭಟ್ಟನು ಬಗ್ವಾಲ ಎಂಬ ಉಪಗ್ರಾಮದಲ್ಲಿ ಕೋಟೆಯೊಂದನ್ನು ಕಟ್ಟಿಸಿದ ಮಾಹಿತಿ ಕೊಡಕೊರೊ ಮಾಗಣೆ ಕೈಫಿಯತ್ತಿನಿಂದ ಕಂಡುಬರುತ್ತದೆ. ಸ್ವಾತಂತ್ರ್ಯಸಂದರ್ಭದಲ್ಲಿ ಜಮಲಾಬಾದು ಕೋಟೆಯನ್ನು ಪತ್ತೆ ಹೈದರನಿಂದ ಕಂಪನಿ ಸರಕಾರ ವಶಪಡಿಸಿಕೊಳ್ಳುವ ವಿವರ ಜಮಲಾಬಾದು ಕೈಫಿಯತ್ತಿನಿಂದ ಮನವರಿಕೆಯಾಗುತ್ತದೆ. ಗ್ರಾಮವೊಂದನ್ನು ಗುತ್ತಿಗೆ ಮಾಡಿಕೊಂಡು ಸರಕಾರಕ್ಕೆ ಹಣ ಸಲ್ಲಿಸುತ್ತಿದ್ದ ಪ್ರಸ್ತಾಪ ಕಾಳತೋಡು ಮಾಗಣೆ ಕೈಫಿಯತ್ತಿನಿಂದ ಕಂಡುಬರುತ್ತದೆ. ಅಂದರೆ ಆಂಗ್ಲರ ಆಡಳಿತದ ಸಂದರ್ಭದಲ್ಲಿ ತನ್ನ ನಾಡಿನಲ್ಲಿ ತಾನು ಆಡಳಿತ ನಡೆಸಲು ಆಂಗ್ಲರ ಅನುಮತಿ ಬೇಕಿತ್ತು ಎಂದು ತಿಳಿಯುತ್ತದೆ.

ಮರದಾಳದ ಕೈಫಿಯತ್ತಿನಲ್ಲಿ ಒಂದು ನಡೆದ ಘಟನೆಯನ್ನು ಬರೆದವನು ಹೇಗೆ ವೈಭವೀಕರಿಸುತ್ತಾನೆ ಎಂಬುವುದು ಈ ಕೈಫಿಯತ್ತಿನಿಂದ ತಿಳಿದುಬರುತ್ತದೆ. ಬಲ್ಲಾಳ ಶಿವಪೂಜೆಯಲ್ಲಿ ನಿರತನಾಗಿದ್ದಾಗ ಕದಿಕಾರ ಗುತ್ತಿನವನು ಬಂಡೆತ್ತಿ ಬರುವುದು, ದೈವದ ಮಹಿಮೆಯನ್ನು ಹೀಯಾಲಿಸುವುದು, ಕೊನೆಗೊಮ್ಮೆ ದೈವವೇ ಕತ್ತಿ ತೆಗೆದುಕೊಂಡು ಹೋಗಿ ಕದಿಕಾರ ಗುತ್ತಿನವನ ತಲೆ ಕಡಿದು ಅವನ ಬೆಂಬಲಿಗನೇಕರನ್ನು ಕೊಂದು ಹಾಕಿತ್ತೆಂದು ಕೈಫಿಯತ್ತಿನಲ್ಲಿ ಹೇಳಿದ. ಮೇಘನಾದ ಎಂಬ ರಾಕ್ಷಸನ ಭಯದಿಂದ ಋಷಿಗಳು ತಪಸ್ಸು ಮಾಡಿ ತಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಂಡರು. ಆಗ ದೇವರು ಲಿಂಗರೂಪದಿಂದ ಉದ್ಭವಿಸಿದಾಗ ಅದನ್ನು ಕಾಪಾಡಿಕೊಂಡು ಅದಕ್ಕೆ ಗುಹೇಶ್ವರ ಲಿಂಗವೆಂದು ಕರೆದರು ಎನ್ನುವ ವಿವರ ಮುಗುವಿನ ಮಾಗಣೆ ಕೈಫಿಯತ್ತು ನೀಡುತ್ತದೆ. ಕದರಿ ಮಾಗಣೆ ಕಫಿಯತ್ತಿನಲ್ಲಿ ಕಂಪನಿ ಸರಕಾರದ ಕಾಲದಲ್ಲಿ ಮುಂಡ್ರೋಲು ಸಾಹೇಬ ೧೦೦ ವರಹ ಕೊಟ್ಟು ಉಳಿದುದನ್ನು ನಿಲ್ಲಿಸಿದರಿಂದ ಪುರವೆಲ್ಲ ನಾಶವಾದ ಉಲ್ಲೇಖವಿದೆ. ಹೊಸಂಗಡಿ ಮಾಗಣೆ ಕೈಫಿಯತ್ತಿನಲ್ಲಿ ಕಂಪನಿ ಸರಕಾರದ ಆಡಳಿತದ ಅವಧಿಯಲ್ಲಿ ಹೊಸಂಗಡಿ ಮಾಗಣೆಯನ್ನು ಪ್ರತ್ಯೇಕ ಮಾಡಿ ೧೮ ಗ್ರಾಮಗಳುಳ್ಳ ಈ ಮಾಗಣೆಗೆ ಆಡಳಿತ ನಡೆಸಲು ಪಾಟೇಲರನ್ನು ನೇಕಮ ಮಾಡಿತು ಎಂದು ಕೈಫಿಯತ್ತು ತಿಳಿಸಿದೆ. ಅಲ್ಲದೆ ಹದಿನೆಂಟು ಗ್ರಾಮಗಳ ಹೆಸರು, ಅಲ್ಲಿನ ಶ್ಯಾನುಭೋಗ ಹೆಸರು, ಹತ್ತೊಂಬತ್ತು ದೇವಾಲಯಗಳೂ, ಎರಡು ಜಂಗಮ ಮಠ ಹಾಗೂ ಒಂದು ಸುಂಕದ ಕಟ್ಟೆಯೂ ಇದೆ ಎಂದು ಅದೇ ಕೈಫಿಯತ್ತು ವಿವರಿಸುತ್ತದೆ. ತಮ್ಮ ಕಷ್ಟಗಳ ಪರಿಹಾರಕ್ಕಾಗಿ ವಿಷ್ಣುಮೂರ್ತಿ ಮತ್ತು ಉಳ್ಳಾಗಳ ಎಂಬಂತಹ ದೈವಗಳಿಗೆ ನೇಮ ಕೊಡುವುದು ಆಚರಣೆಗಳು ಇಂದಿಗೂ ದ.ಕ. ಜಿಲ್ಲೆಯಲ್ಲಿ ಪ್ರಚಲಿತವಿರುವುದನ್ನು ನೋಡಬಹುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದಿನಿಂದಲೂ ಬ್ರಾಹ್ಮಣೇತರರ ಪ್ರತಿಯೊಂದು ಮನೆತನಕ್ಕೂ ಪ್ರಧಾನವಾದ ಧರ್ಮದೈವವಿದ್ದುದನ್ನು ಕೈಫಿಯತ್ತಿನಿಂದ ನೋಡಬಹುದು. ಅದು ಆ ಮನೆಯ ಒಳಿತು - ಕೆಡುಕುಗಳನ್ನು ನೋಡಿಕೊಳ್ಳುತ್ತದೆಂಬ ನಂಬಿಕೆಯಿಂದ ಅದಕ್ಕೆ ಕೋಲಕೊಟ್ಟು, ಅದರಿಂದ ಆದೇಶ ಪಡೆದು, ಅದರಂತೆ ಆ ಕುಟುಂಬದ ಸಮಸ್ಕಾರು ನಡೆಯುವುದನ್ನು ಕಾಣುತ್ತೇವೆ. ಇಂದಿಗೂ ಕೂಡ ದ. ಕ. ಜಿಲ್ಲೆಯಲ್ಲಿ ಅದನ್ನು

ನಂಬಿಕೊಂಡು ಬರುವುದನ್ನು ಗಮನಿಸಬಹುದು. ಬಹುಶಃ ಕುಟುಂಬದಲ್ಲಿ ಯಜಮಾನನಾದವನ ನಿರಂಕುಶಾಡಳಿತವಿದ್ದಂತೆ, ಈ ದೈವವೂ, ಬಹುಮಟ್ಟಿಗೆ ಅದೇ ದರ್ಪವನ್ನು ಪ್ರದೇಶಿಸಿ, ನ್ಯಾಯ - ನ್ಯಾಯಗಳ ವಿಮರ್ಶೆಯನ್ನು ತನ್ನದೇ ಆದ ಕೊನೆಯ ಮಾತನ್ನು ಹೇಳುವುದು ನಮಗೆ ಗೋಚರಿಸುತ್ತದೆ. ಭೂತದ ಪಾತ್ರಧಾರಿ ನಿಜಜೀವನದಲ್ಲಿ ಸಾಮಾಜಿಕವಾಗಿ ಕನಿಷ್ಠ ಸ್ತರದಿಂದಲೇ ಬಂದವನಾದರೂ, 'ಕೋಲ'ದಲ್ಲಿ ಅವನೇ ಗೌರವಾನ್ವಿತ ವ್ಯಕ್ತಿಯಾಗಿ ಬಡವ ಬಲ್ಲಿದವರೆಲ್ಲರಿಗೂಮಾನಿತನಾಗುತ್ತಿದ್ದ. 'ನಂಬಿದವರಿಗೆ ಇಂಬು, ನಂಬದವರಿಗೆ ಅಂಬು' ಎಂಬ ಸಿದ್ಧ ಪ್ರಾಸದ ಭಯೋತ್ಪದಕ ಮಾತಿನ ಮೋಡಿಗೆ ಜನರು ತಲೆಬಾಗಿ, ಒಂದು ಕುಟುಂಬ, ಸಮಾಜ, ಎಲ್ಲವೂ ಒಂದು ರೀತಿಯ ಭಯ ಮಿಶ್ರಿತ ಶಿಸ್ತಿನಿಂದಿರಲು ಮತ್ತು ಒಂದು ರೀತಿಯ ಸಮಾಜದ ಹಿಡಿತದಲ್ಲಿರಲು ಇದು ಆ ಮಟ್ಟಿಗೆ ಪ್ರಯೋಜನಕಾರಿಯಾಗಿತ್ತೆಂಬುದನ್ನು ಕೈಫಿಯತ್ತಿನಿಂದ ತಿಳಿಯಬಹುದು.

ಈ ಎಲ್ಲಾ ಚಾರಿತ್ರಿಕ ವಿಷಯಗಳ ಹೊರತಾಗಿಯೂ ದಕ್ಷಿಣ ಕನ್ನಡ ಜಿಲ್ಲೆಯ ವ್ಯವಸಾಯಕ್ಕೆ ಸಂಬಂಧಪಟ್ಟ ಅದರಲ್ಲೂ ಅಡಿಕೆ ಕೃಷಿಗೆ ಸಂಬಂಧಪಟ್ಟ ಮಾಹಿತಿ ಕೈಫಿಯತ್ತಿನಿಂದ ದೊರಕುತ್ತದೆ. ಅಡಿಕೆಯನ್ನು ಮೊಳಕೆ ಬರಿಸಿ, ಅದು ೨ ಮೊಳದಷ್ಟು ಉದ್ದ ಬೆಳೆದಾಗ ೧೦ ಹೆಜ್ಜೆಗೊಂದರಂತೆ ನೆಟ್ಟು, ವರ್ಷಕ್ಕೊಮ್ಮೆ ಗಿಡಗಳಿಗೆ ಸೊಪ್ಪು - ಗೊಬ್ಬರ ಹಾಕಿಕೊಂಡು ಬಂದರೆ ೧೨ನೇ ವರ್ಷದಲ್ಲಿ ಫಸಲು ಕೊಡುತ್ತದೆಂದು ಅಡಿಕೆ ಪೈರು ಮಾಡುವ ವಿಧಾನ ಕೈಫಿಯತ್ತಿನಿಂದ ಸ್ಪಷ್ಟವಾಗುತ್ತದೆ. ಇದು ಆ ಕಾಲದಲ್ಲಿ ಕೃಷಿ ಪದ್ಧತಿಯಲ್ಲಿ ಹೇಗೆ ಪ್ರಚಲಿತದಲ್ಲಿತ್ತು ಎಂಬುದಕ್ಕೆ ಉದಾಹರಣೆಯಾಗಿದೆ.

ಹೀಗೆ ಪ್ರಾಚೀನ ತುಳುನಾಡಿನಲ್ಲಿದ್ದ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಚಾರಗಳು ಕೈಫಿಯತ್ತಿನಿಂದ ತಿಳಿದು ಬರುತ್ತದೆ. ಸಮಾಜದ ಸ್ಥಿತಿ-ಗತಿ, ನಂಬಿಕೆ, ಆಚರಣೆಗಳು, ಆಡಳಿತ ವ್ಯವಸ್ಥೆ, ದೇವಾಲಯಕ್ಕೆ ಸಂಬಂಧಿಸಿದ ವಿಚಾರಗಳು ಹೇಗೆ ಇತ್ತು ಮತ್ತು ಅದು ಕಾಲದ ಸೆಳೆತಕ್ಕೆ ಯಾವ ರೀತಿಯಲ್ಲಿ ಬದಲಾವಣೆಯಾಗುತ್ತಿದೆ ಎಂದು ತಿಳಿಯಲು ಕೈಫಿಯತ್ತು ನಮಗೆ ನೆರವಾಗುತ್ತದೆ.

◆◆◆

ಅನುಬಂಧ - ೧

ಪರಾಮರ್ಶನ ಗ್ರಂಥಗಳು

ಅನುಬಂಧ ೧

ಪರಾಮರ್ಶನ ಗ್ರಂಥಗಳು

೧. ಕಲುಬುರ್ಗಿ ಎಂ. ಎಂ. (ಸಂ.), ಕರ್ನಾಟಕದ ಕೈಫಿಯತ್ತುಗಳು, ಪ್ರಸರಾಂಗ ಕನ್ನಡ ವಿ. ವಿ. ಹಂಪಿ - ೧೯೯೪

೨. ಕುಶಾಲಪ್ಪ ಗೌಡ ಕೆ., ಚಿನ್ನಪ್ಪ ಗೌಡ ಕೆ. (ಸಂ), ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು, ಶ್ರೀ ಧ. ಮ. ಪುಸ್ತಕ ಪ್ರಕಾಶನ ಮಾಲೆ, ಉಜಿರೆ - ೧೯೮೩

೩. ಡಾ| ಪುರುಷೋತ್ತಮ ಬಿಳಿಮಲೆ, ಮೆಕೆಂಝಿ ಕೈಫಿಯತ್ತುಗಳು, ಪ್ರಕಾಶಕರು ಪುತ್ತೂರು - ೧೯೮೫

೪. ಮಂಜೇಶ್ವರ ಗಣಪತಿ ರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಪ್ರಕಾಶಕರು ಗೋವಿಂದ ಪೈ, ಸಂ. ಕೇ. ಉಡುಪಿ - ೧೯೨೩

೫. ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ, ನರಸಿಂಹ ಮೂರ್ತಿ ಎನ್. (ಸಂ), ದಕ್ಷಿಣ ಕನ್ನಡದ ದೇವಾಲಯಗಳು, ಪ್ರಕಾಶಕರು ಅಂಬಲಪಾಡಿ, ಉಡುಪಿ - ೨೦೦೦.

೬. ಹೆರಂಜೆ ಕೃಷ್ಣ ಭಟ್, ಡಾ| ಎಸ್. ಡಿ. ಶೆಟ್ಟಿ (ಸಂ), ತುಳು ಕರ್ನಾಟಕ ಅರಸು ಮನೆತನಗಳು, ಪ್ರಸರಾಂಗ ಕನ್ನಡ ವಿ. ವಿ. ಹಂಪಿ - ೨೦೦೦

೭. ಡಾ| ರಮೇಶ ಕೆ. ವಿ., ತುಳುನಾಡಿನ ಇತಿಹಾಸ, ಪ್ರಕಾಶಕರು ಗೋವಿಂದ ಪೈ ಸಂ. ಕೇ. ಉಡುಪಿ - ೧೯೬೮.

೮. ಕಿಲ್ಲೆ ಎಸ್. ಎಸ್., ಶೀನಪ್ಪ ಹೆಗ್ಗಡೆ, ಪ್ರಾಚೀನ ತುಳುನಾಡು, ಮಂಗಳೂರು - ೧೯೫೪.

೯. ಡಾ| ಎಸ್. ಡಿ. ಶೆಟ್ಟಿ, ತುಳುನಾಡಿನ ಜೈನಧರ್ಮ, ಉಡುಪಿ - ೨೦೦೨.

೧೦. ಡಾ| ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸರಾಂಗ ಮೈಸೂರು ವಿ. ವಿ. ೧೯೬೬.

೧೧. ಡಾ| ರಮೇಶ್ ಕೆ. ವಿ., ಶರ್ಮ ಎಂ. ಜೆ., ತುಳುನಾಡಿನ ಅರಸು ಮನೆತನಗಳು. ಶ್ರೀ ಧ. ಮ. ಪುಸ್ತಕ ಪ್ರಕಾಶನ ಮಾಲೆ, ಉಜಿರೆ - ೧೯೮೫.

೧೨. ಡಾ| ಶೈಲಾ ಟಿ. ಶರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು - ೨೦೦೨.

೧೩. ಡಾ| ಗೋಪಾಲ್ ಆರ್., ದಕ್ಷಿಣಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ನಿರ್ದೇಶನಾಲಯ, ಮೈಸೂರು - ೨೦೦೭.

೧೪. ಕೇಶವ ಕೃಷ್ಣ ಕುಡುವ, ದಕ್ಷಿಣಕನ್ನಡ ಇತಿಹಾಸ, ಮಂಗಳೂರು - ೧೯೮೮.

೧೫. ಡಾ| ಎಸ್. ಡಿ. ಶೆಟ್ಟಿ, ಶ್ರೀ ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಶ್ರೀ ಧ. ಮ. ಪುಸ್ತಕ ಪ್ರಕಾಶನ ಮಾಲೆ, ಉಜಿರೆ - ೨೦೦೨.

೧೬. ಮಂಜಯ್ಯ ಡಿ. ಹೆಗಡೆ, ಶ್ರೀ ಧರ್ಮಸ್ಥಳ ಕ್ಷೇತ್ರದ ಇತಿಹಾಸ, ಮಂಗಳೂರು - ೧೯೫೧.

೧೭. ಅನಂತರಾಮ ರಾವ್ ಕೆ. (ಸಂ), ಸುವರ್ಣಕರ್ನಾಟಕ ದರ್ಶನ, ಮಂಗಳೂರು - ೨೦೦೬.

೧೮. ಉದಯವರ್ಮರಾಜ, ತುಳುನಾಡಿನ ಗತವೈಭವ, ಕ. ಸಾ. ಪ. ಕಾಸರಗೋಡು - ೧೯೯೮.

೧೯. ಡಾ। ವಸಂತ ಮಾಧವ ಕೆ. ಜಿ., ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಅಧ್ಯಯನ ಮತ್ತು ಸಂಶೋಧನೆ, ಮಂಗಳೂರು - ೧೯೯೯.

೨೦. ರಮೇಶ ಕೆ. ವಿ., ಶರ್ಮ ಎಂ. ಜೆ.(ಸಂ.) ತುಳುನಾಡಿನ ಶಾಸನಗಳು, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನೆ, ಉಡುಪಿ - ೧೯೭೮

೨೧. ಡಾ। ಹಾ. ಮಾ. ನಾಯಕ (ಸಂ.) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿ. ವಿ. - ೧೯೭೯.

೨೨. ಕಿಟೆಲ್, ಕನ್ನಡ - ಇಂಗ್ಲಿಷ್ ಡಿಕ್ಷನರಿ, ನವದೆಹಲಿ - ೧೮೯೪

೨೩. ಬಸವರಾಧ್ಯ ಎನ್., ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು - ೨೦೦೧.

೨೪. ಜಿಲ್ಲಾಧಿಕಾರಿ ಮಂಗಳೂರು, ಪೊಲಿ ಕೆನರಾ ೨೦೦, ಮಂಗಳೂರು ೨೦೦೦.

೨೫. ಪ್ರೊ. ಎಸ್. ಪ್ರಭಾಕರ್ (ಸಂ.), ಶ್ರೀ ಧರ್ಮಸ್ಥಳ ಬಾಹುಬಲಿ ಪ್ರತಿಷ್ಠಾನ ಮಹೋತ್ಸವ ಧರ್ಮಸ್ಥಳ - ೧೯೮೨.


◆◆◆

ಅನುಬಂಧ - ೨

ಕೈಫಿಯತ್ತಿನ ಮೂಲ ಕೈಬರಹದ ಪ್ರತಿ

ಅನುಬಂಧ - ೨

ಕೈಫಿಯತ್ತಿನ ಮೂಲ ಕೈಬರಹದ ಪ್ರತಿ



[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

◆◆◆

ಅನುಬಂಧ - ೩

ಕೆಲವು ಕೈಫಿಯತ್ತುಗಳ ಮೂಲ ಪಠ್ಯ

ಅನುಬಂಧ - ೩

ಕೆಲವು ಕೈಫಿಯತ್ತುಗಳ ಮೂಲ ಪಠ್ಯ

೧. ಅಜಿಲರ ಕೈಫಿಯತ್ತು

M- 351
P- 302 -314

ಪೂರ್ವದಲ್ಲಿ ತಿಮ್ಮಣ್ಣ ಅಜಿಲರು ವಂಗದೇಶದ ಗಂಗನಾಡು ಯೆಂಬ ಪಟ್ಟಣದಲ್ಲಿ ಆಳಿಕೆಂಡುಯಿರುತ್ತಯಿದ್ದಲ್ಲಿ ಪರರಾಷ್ಟ್ರದ ಅರಸುಗಳು ದಂಡು ತೆಗೆದುಕ್ಕುಂಡು ಬಂದು ಆ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅಘೋರ ಯುದ್ದ ಮಾಡುತ್ತಾಯಿರುವಲ್ಲಿ ದಂಡು ಯಾವತ್ತು ಬಹಳ ಲಯವಾಯಿತು ಯಿವರ ಸಂಗಡ ಯುದ್ದ ಮಾಡಿ ಜೈಸುವ ಬಗ್ಯೆ ಸಮರ್ಥ್ಯವಿಲ್ಲ ಯೆಂಬದಾಗಿ ಆಲೋಚನೆ ಮಾಡಿಕೆಂಡು ಅವರ ಕೈ ಶೆರೆ ಸಿಕ್ಕಬಾರದೆಂಬ ಪ್ರಯುಕ್ತ ತಿಮ್ಮಣ್ಣಜಿಲರು ತಮ್ಮ ಲಕ್ಷ್ಮಣಪ್ಪ ತಮ್ಮ ಮನೆದೇವರು ಸೊಮನಾದ ವೀರಭದ್ರ ತನ್ನ ಹೆಂಗಸರು ಮಕ್ಕಳು ಸಾಮಾದಿಕರು ದಂಡು ಸಹಿತವಾಗಿ ಅಲ್ಲಿಂದ ಪಲಾಯನವಾಗಿ ಪರಶುರಾಮಕ್ಷೇತ್ರಕ್ಕೆ ಹೋಗಬೆಂಬುದಾಗಿ ಬರುವಲ್ಲಿ ಘಟ್ಟ ಕೆಳಗೆ ಯಿಳಿಯುವ ಬಗ್ಯೆ ಮಾರ್ಗಲಿಲ್ಲದ್ದರಿಂದ ಘಟ್ಟ ಕಡದು ದಾರಿ ಮಾಡಿಕ್ಕೊಂಡು ಯಿೂ ಘಟ್ಟಕ್ಕೆ ಕಡದಕಲ್ಲು ಘಟ್ಟ ಯೆಂಬುದಾಗಿ ಹೆಸರಿಟ್ಟು ಕೆಳಗೆ ಯಿಳಿದು ಬರುವಾಗ್ಯೆ ಯೀ ಘಟ್ಟದ ಬುಡದಕಲ್ಲು ಯಿರುತ್ತಿದ್ದರು ಯಿವರು ಆ ಸ್ಥಳಕ್ಕೆ ಬಂದು ಅಡವಿ ಕಡಿದು ಗದ್ದೆ ತೋಟಗಳು ಮಾಡಿಸಿ ಮನೆಬಾಗಲು ಮಾಡಿಕ್ಕೊಂಡು ಸಂಗಡ ಬಂದ ಸಾಮಾದಿಕರು ಯಾವತ್ತು ಮನೆಗಳು ಕಟ್ಟಿಯಿರುವಾಗ್ಯೆ ತಿಮಣ್ಣಜಿಲರು ತನ್ನ ದೇಶದ ಹೆಸರಿಡಬೇಕೆಂಬುದಾಗಿ ಆಲೋಚನೆ ಮಾಡಿಕೊಂಡು ತನ್ನ ಊರು ವಂಗ ದೇಶ ಯೀ ಊರಿಗು ಅದೆ ಹೆಸರಿಸಲು ಯಿಡಬೇಕೆಂಬುದಾಗಿ ವಂಗ್ವಾದಿ ಯಂತ ಹೆಸರಿಟ್ಟು ತಮ್ಮ ಸಂಗಡ ತೆಗೆದುಕೊಂಡು ಬಂದ ಮನೆದೇವರಿಗೆ ಪ್ರಾಕು ಚಾನಿ ಬಲ್ಲಾಳಯಂಬವನ ಮದ್ದೆಯು ಜೀರ್ನವಾಗಿ ಹೊದಂತಾ ಸ್ಥಳದಲ್ಲಿ ಯೀ ದೇವರ ಪ್ರತಿಷ್ಟೆ ಮಾಡಿ ಆ ಸ್ಥಳಕ್ಕೆ ಕಲ್ಲುಗುಂಡಾಯಂತ ಪ್ರತಿನಾಮಧೇಯ ಯಿಟ್ಟು ಹೀಗೆ ಕೆಲಉ ದಿವಸದ ಮೇಲೆ ತಿಮ್ಮಣ್ಣಜಿಲರು ತಮ್ಮ ಲಕ್ಷ್ಮಣಪ್ಪ ಸಹಾ ಯಿದು ಘಟ್ಟದ ಬುಡದಲ್ಲಿ ಯಿರತಕ್ಕ

ಬಗ್ಯೆ ಸ್ಥಳ ಸಾಲದು ಯಿಬ್ಬರು ಪ್ರತ್ಯೇಕ ಪ್ರತ್ಯೇಕಯಿರಬೇಕೆಂಬುದಾಗಿ ಮಾತನಾಡಿಕೊಂಡು ಲಕ್ಷ್ಮಣಪ್ಪನು ಬೆಳತಂಗಡಿಗೆ ಬಂದು ಮನೆ ಬಾಗಲು ಮಾಡಿಕ್ಕೊಂಡು ಯಿದ್ದರು ತಿಮ್ಮಣ್ಣಜಿಲರು ಯೆಣೂರಿಗೆ ಬಂದು ಅಲ್ಲಿ ಮನೆಬಾಗಿಲು ಮಾಡಿಕ್ಕೊಂಡು ಯಿರುತ್ತಿದ್ದರು ಯೀ ಪ್ರಕಾರ ಉಭಯತರು ಪ್ರತ್ಯೇಕ ಪ್ರತ್ಯೇಕಯಿರುತ್ತಿದ್ದರು ಯೀ ಪ್ರಕಾರ ಯಿದ್ದುಕೊಳ್ಳುತ್ತ ಗದೆ ತೋಟಗಳು ಮಾಡಿಕೊಂಡು ಆದಾರ ಸ್ಥಳಗಳ ಬಲಕಾಯಿಸಿಕೊಂಡು ಆ ಊರಿಗೆ ತಾವೆ ಗೊತ್ತುಗಾರರಾಗಿ ಸರಕಾರಕ್ಕೆ ಸಲಿಸಕ್ಕ ಹಣ ತಾವೇ ಕೊಟ್ಟುಕೊಂಡು ಯಿರುತ್ತಿದ್ದರು ಯೀ ಪ್ರಕಾರ ಯಿರುವಾಗ್ಯೆ ತಾಉ ಅಣ್ಣತಮ್ಮಂದಿರು ಪ್ರತ್ಯೇಕ ಪ್ರತ್ಯೇಕಯಿದ್ದ ಮೇಲೆ ಯಿಬ್ಬರಿಗು ವೊಂದೆ ನಾಮದೇಹವಾಗುತ್ತದೆ ಬೇರೆ ಬೇರೆ ಹೆಸರಿಟ್ಟುಕೊಳ್ಳಬೇಕು ಯೆಂಬುದಾಗಿ ಆಲೋಚನೆ ಮಾಡಿಕೊಂಡು ತಿಮ್ಮಣ್ಣ ಅಜಿಲರು ತಮ್ಮ ಮನೆತನದ ಪ್ರಾಕುಯಿದ್ದ ಹೆಸರು ಅಜಿಲರು ಯಂತಲೆಯಿಟ್ಟುಕೆಂಡ್ರು ತಮ್ಮ ತಮ್ಮ ಲಕ್ಷ್ಮಣಪ್ಪಗೆ ತಮ್ಮ ಪೂರ್ವದ ಊರಿನ ಹೆಸರು ಯಿಡಬೇಕು ಯಂತ ತಮ್ಮ ಊರು ವಂಗದೇಶವಾದ ಕಾರಣ ವಂಗರು ಯಂಬ ನಾಮದೇಹಯಿಟ್ಟ ಕಾರಣ ಲೋಕಾರೂಢಿಗೆ ಬಂಗರು ಯೆಂಬ ನಾಮದೇಹರಾಗಿ ಯೀ ಪ್ರಕಾರ ಪ್ರತ್ಯಪ್ರತ್ಯೇಕ ಹೆಸರಿಟ್ಟುಕ್ಕೊಂಡು ಯಿರುತಿದ್ದರು ಹೀಗೆ ಕೆಲಉ ದಿವಸದ ಮೇಲೆ ತಿಮ್ಮಣ್ಣಜಿಲರು

ಮ್ರುತ ಬಿಟ್ಟು ಹೊದರು ಯಿವರಿಗೆ ಸಂತಾನವಿಲ್ಲದೆ ಹೊಯಿತು ಯಿವರ ವಂಶದಲ್ಲಿ ಯಿಬ್ಬರು ಹೆಣ್ಣು ಮಕ್ಕಳು ಯಿದ್ದರು ಅವರಲ್ಲು ವಬ್ಬಳು ಕನ್ನಿಕೆ ವಬ್ಬಳು ವಿಧವೆ ಯೀ ಪ್ರಕಾರ ಯಿಬ್ಬರೆ ಅಕ್ಕತಂಗೀರು ಯಿರುತ್ತಿದ್ದರು ಯಿೂ ತಿಮ್ಮಣ್ಣಜಿಲರು ಸಂತಾನಮುಕ್ತಯಿರುವ ಯಿವರ ದ್ವೇಷಗಳು ಯಿವರ ಮನೆಬದುಕು ಭೂಮಿ ತೋಟ ಯಾವತ್ತು ಆಕ್ರಮಿಸಿಕೊಂಡು ಯೀ ಹೆಣ್ಣುಮಕ್ಕಳಿಗೆಯೇನು ಆಸ್ಪದ ಯಿಲ್ಲದ ಹಾಗೆ ಮಾಡಿ ಉಪದ್ರ ಮಾಡುತಾ ಯಿದ್ದರು ಯೀ ಪ್ರಕಾರ ಉಪದ್ರವಾದರೆ ನಾವು ಅಕ್ಕತಂಗೀರು ಯಿಬ್ಬರು ಯಿಲ್ಲಿ ಯಿದ್ದು ನಿರ್ವಾಹಮಾಡಲಾರೆವು ಯೆಂಬುದಾಗಿಯು ದ್ವೇಷಿಗಳ ಉಪದ್ರ ಬಹಳವಾಗಿಯಿಧೆ ಯಂಬದಾಗಿ ಸಹಾ ತಮ್ಮ ತಮ್ಮ ವಳಗೆ ಮಾತನಾಡಿಕ್ಕೊಂಡು ಯೀ ಸ್ಥಳ ಬಿಟ್ಟು ಪರದೇಶಕ್ಕೆ ಹೋಗಿ ಕಾಲಕ್ಷೇಪ ಮಾಡುವಾ ಯಂತ ತಮ್ಮ ಜಿಂದಗಾನಿ ಯಾವತ್ತನ್ನು ತೆಗೆದುಕೊಂಡು ವಿಜಯನಗರದ ರಾಯರು ಮಹಾ ಧರ್ಮಿಷ್ಟರು ಯೀ ರಾಜ್ಯ ಕೂಡಾ ಅವರೆ ಆಳುತ್ತಾಯಿದ್ದಾರೆ ಅಲ್ಲಿಗೆ ಹೋಗುವಾ ಯಂತ ಹೊರಟುಹೋಗಿ ಆ ವಿಜಯನಗರದ ಪಟಣಕ್ಕೆ ಹೋಗಿ ಹೀಗೆ ತಿರುಗಾಡುತ್ತಾಯಿರುವ ಸಮಯದಲ್ಲಿ ಆ ಊರು ಜನರು ಯಾರೋ ಯಿಬ್ಬರು ಹೆಂಗಸರು ಬಂದು ಯಿದ್ದಾರೆಯೆಂಬುದಾಗಿ ರಾಯರು ಪರಿಯಂತ್ರ ವರ್ತಮಾನವಾದ್ದರಿಂದ ಅವರು ಯಾರು ಯಲ್ಲಿಂದ ಬಂದರು ವಿಚಾರಿಸಬೇಕು ಅವರನ ಕರಸಿಯೆಂಬದಾಗಿ ಹೇಳಿ ಆ ಹೆಂಗಸರ ಯಿಬ್ಬರನ್ನು ಕರಸಿ ಕೇಳಿದ ವಿವರ ನೀಉ ಯಾರು ಯಲ್ಲಿಂದ ಬಂದವರು ಯಾವ ದೇಶದವರು ಯಿಬ್ಬರೆ ಹೆಂಗಸರು ಯೇನು ನಿಮಿತ್ತ ಯೀ ಊರಿಗೆ ಬಂದಿರಿ ಯೆಂಬದಾಗಿ ವಿಚಾರಿಸುವಾಗ್ಯೆ ಯೀ ಹೆಂಗಸರು ಹಳಿದ ವಿವರ ನಾವಾದರೆ ವಂಗ ದೇಶದ ಅರಸುಗಳ ಮಕ್ಕಳು ನಮ್ಮ ತಂದೆ ವಂಗದೇಶದ ಗಂಗನಾಡು ಯೆಂಬ ಪಟ್ಟಣ ಆಳಿಕೊಂಡು ಯಿರುತಿದ್ದಲ್ಲಿ ಪರರಾಷ್ಟ್ರದ ಅರಸುಗಳು ದಂಡು ತೆಗೆದುಕ್ಕೆಂಡು ಬಂದು ಯುದ್ಧಾ ಮಾಡಿದಲ್ಲಿ ಅವರ ಸಂಗಡ ಲಡಾಯಿ ಮಾಡಿ ಜಯಿಸಲಾರದೆ ಅಲ್ಲಿಂದ ತನ್ನ ಸಾಮಾದಿಕರು ಹೆಂಗಸರು ಮಕ್ಕಳು ದಂಡುಸಹಿತವಾಗಿ ಫಲಾಯನವಾಗಿ ಬಂದು ಪರಸರಾಮ ಶ್ರುಷ್ಟೀಗೆ ಬರಬೇಕೆಂಬುದಾಗಿಬಂದು ಘಟ್ಟ ಕಡಶಿ ಆ ಗಟ್ಟಕ್ಕೆ ಕಡದಕಲ್ಲು ಘಟ್ಟಾ ಯಂತ ಹೆಸರಿಟ್ಟು ಘಟ್ಟದ ಕೆಳಗೆ ಬಂದು ಅಲ್ಲಿ ಮನೆಬಾಗಿಲು ಮಾಡಿಕ್ಕೊಂಡು ತೊಟಗದ್ದೇಗಳ ಮಾಡಿಸಿ ಆ ಬಳಿಕ ಅಣ್ಣಾ ತಿಮ್ಮಣ್ಣಅಜಿಲರು ಆ ಊರಿಗೆ ವಂಗ್ಯಾದಿಯೆಂಬ ಹೆಸರು ಯಿಟ್ಟು ಅಲ್ಲಿಂದ ತಿಮ್ಮಣ್ಣಜಲರು ಯೆಣ್ಣೂರುಗೆ ಬಂದರು ಯಿವರ ತಮ್ಮ ಲಕ್ಷ್ಮಣಪ್ಪನು ಅಳೆತ್ತಂಡಿಯಲ್ಲು ಮನೆಬಾಗಿಲು ಮಾಡಿಕ್ಕೊಂಡು ತ್ಮ ಊರ ಹೆಸರು ವಂಗರು ಯಂತ ಯಿಟ್ಟುಕೊಂಡು ಯೀ ಪ್ರಕಾರ ಕೆಲಉ ದಿವಸ ಯಿರುತಿರುವಾಗ್ಯೆ ತಿಮ್ಮಣ್ಣಜಲರು ಮ್ರುತಪಟ್ಟು ಹೊದ್ದರಿಂದ ಯೀ ಸಂತತಿಗಳಿಗೆ ಗಂಡಸರು ಯಾರು ಯಿಲ್ಲವಾದ ಕಾರಣ ನಾಉ ಯಿಬ್ಬರು ಹೆಂಗಸರು ಯಿರುವಾಗ್ಯೆ ಅಲ್ಲಿರುವಂತ ನಮ್ಮ ದ್ವೇಷಿಗಳು ಯಾವತ್ತು ನಮ್ಮ ಗ್ರಾಮ, ಭೂಮಿ, ಮನೆ, ಬದುಕು ಅಪಹರಿಸಿಕ್ಕೊಂಡು ಯೇನು ಆಸ್ಪದ ಕೊಡದೆ ನಿರಾಸ್ಪದ ಮಾಡಿ ಆ ಸ್ಥಳದಲ್ಲಿ ಸದಾ ನಮಗೆ ಯಿರಗೊಡದೆ ಉಪದ್ರ ಮಾಡಿದ್ದರಿಂದ ತಾಉ ಧರ್ಮಪ್ರಭುಗಳು ಯಿದ್ದೀರಿ ಆ ರಾಜ್ಯ ಕೂಡಾ ತಾವೆ ಆಳುತ್ತೀರಿ ತಮ್ಮ ಸಮೀಪಕ್ಕಾಗದು ಬಂದು ತಮ್ಮ ಬೇಟಿ ಮಾಡಿಕ್ಕೊಂಡು ನಮ್ಮ ಸುಖ ದುಖ್ಖ ಯಾವತ್ತು ಹೇಳಿಕ್ಕೊಂಡು ತಮ್ಮ ಅಪ್ಪಣೆ ಆದ ರೀತಿ ಕೇಳಿ ನಡಕೊಂಬಾ ಯೆಂಬ ಆಲೋಚನೆ ಮಾಡಿಕೊಂಡು ತಮ್ಮ ಸಮೀಪಕ್ಕೆ ಬಂದು ಯಿದ್ದೇವೆ ಯೆಂಬುದಾಗಿ ಯೀ ಹೆಂಗಸರು ಹೇಳುವಂತ ಅಭಿಪ್ರಾಯ ಯಾವತ್ತು ರಾಯರು ಕೇಳಿ ಬಹಳ ಸಂತೋಷಪಟ್ಟು ಯೀ ಹೆಂಗಸರ ಕೂಡೆ ನೀಉ ಯಾವ ಬಗಿ ಯೋಚನೆ

ಮಾಡಬೇಡ ನಿಮ್ಮ ಮನಸಾಭಿಷ್ಟ ಮಾಡಿಶಿಕೊಡುತೇನೆ ಯಂಬದಾಗಿ ಧೈರ್ಯ ದಿಲಾಸಾ ಹೇಳಿ ತನ್ನ ಮನಸ್ಸಿನಲ್ಲಿ ಆಲೋಚನೆ ಮಾಡಿದ್ದು ಯೀ ಯಿಬ್ಬರು ಹೆಂಗಸರು ವಳಗೆ ವೊಬ್ಬಳು ಕನ್ನಿಕೆಯೂ ರೂಪುಲಾವಣ್ಯಯುಕ್ತಳಾಗಿ ಅತಿ ಸಉಂದರ್ಯವಾಗಿ ಯಿದ್ದಾಳೆ ಯೀ ಹೆಣ್ಣು ತನಗೆ ವಿವಾಹ ಮಾಡಿಕೊಳಬೇಕೆಂಬ ಪ್ರಯುಕ್ತ ಯಿವರ ಜಾತಿ ನೀತಿ ಕುಲಧರ್ಮ ಗೊತ್ರ ಸೂತ್ರ ವಿಚಾರಣೆ ಮಾಡಿ ಅರಸುಗಳ ಮಕ್ಕಳು ಹೌದಾದರೆ ಮದುವೆ ಮಾಡಿಕೊಳಬೇಕು ಯಂತ ನಿಶ್ಚಯಿಸಿ ಯೀ ಕನ್ನಿಕೆ ಅಕ್ಕನ ಕೈಯ ಯಾವತ್ತು ಅಭಿಪ್ರಾಯಉ ಕೇಳಿ ಆಕೆ ರಾಜಿ ಮಾಡಿಕೊಂಡು ಅತಿ ಉಲ್ಲಾಸದಿಂದಾ ಮದುವೆ ಮಾಡಿಕೊಂಡು ಹೀಗೆ ಯಿರುವಾಗ್ಯೆ ಯೀಶ್ವರ ಕಟಾಕ್ಷದಿಂದ ಯೀತನ ಹೆಂಡತಿಗೆ ಗರ್ಭೋತ್ಪತ್ತಿಯಾಗಿ ನವಮಾಸ ನಂತರದಲ್ಲಿ ಯಿಬ್ಬರು ಗಂಡು ಮಕ್ಕಳು ಹುಟ್ಟಿದರು. ಯಿದರಲ್ಲು ಹಿರೆಯವನ ಹೆಸರು ತಿಮ್ಮಣ್ಣರಾಯ ಚಿಕ್ಕವನ ಹೆಸರು ಕಾಮಿರಾಯ ಯಂಬದಾಗಿ ಹೆಸರಿಟ್ಟು ಬಹಳ ಸಂತೋಷದಿಂದ ಅವರಿಗೆ ವಿದ್ಯಾಭ್ಯಾಸಗಳು ಮಾಡಿಸಿ ಮಕ್ಕಳು ಪ್ರಬುದ್ಧರಾದ ಮೇಲೆ ಯೀ ಮಕ್ಕಳ ದೊಡ್ಡತಾಯಿಯು ರಾಯರ ಬಳಿಗೆ ಬಂದು ಬಹಳ ದೈನ್ಯ ಉತ್ತಿಯಿಂದ ಕೇಳಿದ ವಿವರ ತಾವಾದರೆ ತಮ್ಮ ದೇಶದಿಂದ ಬಹಳ ಅವಮಾನಿಕೆಯಾಗಿ ಬಂದಂತವರು ತಮ್ಮ ದಯದಿಂದ ಯಿಷ್ಟು ಆದ ಮೇಲೆ ಯಿಬ್ಬರ ಮಕ್ಕಳ ಕರಕೊಂಡು ತಮ್ಮ ಸ್ವದೇಶಕ್ಕೆ ಹೋಗಿ ಬರಬೇಕು ಯೆಂಬಾಗ್ಯೆ ವಳ್ಳೇದು ಹಾಗೆ ಮಾಡಿ ಯಂಬದಾಗಿ ಹೇಳಿ ಹಿರೇ ಮಗ ತಿಮ್ಮಣ್ಣರಾಯಗೆ ಮೂರು ಸಾವಿರ ವರಹಾಕ್ಕೆ ಸಮನಾಗಿ ಮಂಗಲೂರ ಹೊಬಳಿ ಪೈಕಿ ಹನ್ನೆರಡು ಮಾಗಣೆ ವಿಂಗಡಿಸಿ ಜಾಗೀರು ಸನದು ಬರಕೊಟ್ಟಿದ್ದು ॥

ಅಳುವದು ಮಾಗಣೆ ೧ ಸುಳ್ಳಿಕೆರಿ ಮಾಗಣೆ ೧ ಯರಡೂರ ಮಾಗಣೆ ೧
ಯೆಣೂರ ಮಾಗಣೆ ೧ ಕೆಳದ ಮಾಗಣೆ ೧ ಪೆರಂಜದ ಮಾಗಣೆ ೧
ಅಜಿಬೆಟ್ಟು ಮಾಗಣೆ ೧ ಬೆಳ್ಳೂರ ಮಾಗಣೆ ೧ ಪಂಜಿಕಲ ಮಾಗಣೆ ೧
ಯಿರವತ್ತೂರ ಮಾಗಣೆ ೧ ಸಉಣಾಲಿ ಮಾಗಣೆ ೧ ನಾರಾವಿ ಮಾಗಣೆ ೧

ಯೀ ಪ್ರಕಾರ ಹನ್ನೆರಡು ಮಾಗಣೇಗೆ ಹಿರೆ ಮಗನ ಹೆಸರಿಗೆ ಸನ್ನದು ಬರಕೊಟ್ಟು ಚಿಕ್ಕಮಗ ಕಾಮಿರಾಯಗೆ ಬಹಾಳ ಅಂತಃಕರಣ ಮಮತೆಯಿಂದ ಮಂಗಲೂರು ಹೊಬಳಿ ಪೈಕಿ ಆರು ಸಾವಿರ ವರಹಾನ್ನ ಶೀಮೆ ಜಾಗೀರು ಸನದು ಬರಕೊಟ್ಟು ಯಿವರು ಯಿಬ್ಬರಿಗು ಬಿರುದಾವಳಿ ಕೊಟ್ಟರು ಜ್ಯೇಷ್ಟ ಪುತ್ರ ತಿಮ್ಮಣ್ಣಜಲರಿಗೆ ಸ್ವೆತಛತ್ರ ಮುಕ್ಕಣ್ಣ ಕಠಾರಿ ನಿಶಾನಿ ಪಂಚದೀವಟಿಗೆ ಉಭಯ ಚಾಮರ ಹಾಳಸು ರುಮಾಲು ಹುದಯ ಕತ್ತಿ ಗಗ್ಗರದ ಯೀಟಿ ಆಂದೋಳಿಕಾ ಆನೆ ಅಂಬಾರಿ ಕುದುರೆ ವಾಯದಳ ಅನೇಕ ದ್ರವ್ಯವ ಕೊಟ್ಟು ದೆಂಡ್ಡ ತಾಯಿ ಸಂಗಡ ಯೀ ಯಿಬ್ಬರು ಮಕ್ಕಳ ಕೊಟ್ಟು ತನ್ನ ವಳಗೆ ಮಂಗಲೂರಲ್ಲು ಅಧಿಕಾರ ಮಾಡುವವನಿಗೆ ತನ್ನ ಹೆಸರ ಪರವಾನೆ ಬರಸಿಕೊಟ್ಟು ಅತಿ ಸಂತೋಷದಿಂದ ಊರಿಗೆ ಕಳುಹಿಸಿಕೊಟ್ಟನು ಯಿವರು ಪರಶುರಾಮ ಕ್ಷೇತ್ರಕ್ಕೆ ಬಂದು ಮಂಗಲೂರ ಸಂಸ್ಥಾನದ ಅಧಿಕಾರ ಮಾಡುವವಗೆ ರಾಯರು ಬರದ ಪರವಾನೆ ಕೊಟ್ಟು ತಮಗೆ ಪೂರ್ವದಲ್ಲು ಜಾಗೀರು ಕೊಟ್ಟು ಹನ್ನೆರಡು ಮಾಗಣೆ ವಳಗೆ ಯೇಣೂರಿಗೆ ಬಂದು ಯಿದ್ದು ತನ್ನ ಸೀಮೆ ಆಳಿಕೊಂಡು ಯಿರುತ್ತಿದ್ದನು ಪ್ರಾಕು ಬೆಳತಂಗಡಿ ಯಲ್ಲು ಯಿರುವ ಲಕ್ಷ್ಮಪ್ಪ ಮಂಗರು ನಿರ್ವಂಶರಾಗಿ ಹೋದರು ಸದರಿ ತಿಮ್ಮಣ್ಣಜಲರ ತಮ್ಮ ಕಾಮಿರಾಯನು ತನಗೆ ಜಾಗೀರುಕೊಟ್ಟು ಆರು ಸಾವಿರ ವರಹಾ ಹೊನ್ನ ಶೀಮೆ ವಳಗಾಗಿ ನಂದಾಮರಾಯೆಂಬ ಜಾಗದಲ್ಲಿ ವಳ್ಳೆ ಕಾರಣಿಕ ಸ್ಥಳಯಂತ ಆತಗೆ ಅನುಭವ

ಕಂಡದರಿಂದ ಅಲ್ಲೆ ಅರಮನೆ ಮುಂತಾಗಿ ಕಟ್ಟಿಕೊಂಡು ಆರು ಸಾವಿರ ಸೀಮೆ ಅನುಭವಿಸಿಕೊಂಡು ಬರುತ್ತಿದ್ದನು. ತಿಮ್ಮಣ್ಣಾಜಿಲರು ತನ್ನ ಮೂರುಸಾವಿರ ಸೀಮೆ ಬಹಳ ದಿವಸ ಅನುಭವಿಸಿಕೊಂಡು ಬಂದು ಆ ಬಳಿಕ ಮೃತಪಟ್ಟು ಹೊದನು ಯಿವರ ಮಗ ಪಾಂಡ್ಯಪ್ಪ ಆ ಮೇಲೆ ತಿಮ್ಮಣ್ಣ ಪಾಂಡ್ಯಪ್ಪ ಹಾಗೆ ನಾಲ್ಕು ತಲೆ ಪರಿಯಂತ್ರ ಅಜಿಲರು ಬಂಗರು ಸಹಾ ಮಕ್ಕಳು ಸಂತಾನದಲ್ಲಿ ಸೀಮೆ ಪಾರಂಪರಿಯಾಗಿ ಹೆಸರು ತಿಳಿಯಬೇಕಾದ ಕಾರಣಾ ಹೆಸರು ಯರಡೆ ಯಿಟ್ಟುಕೊಂಡು ಬಂದರು ಆ ಮೇಲೆ ಐದನೆ ತಲಿ ತಿಮ್ಮಣ್ಣಾ ಅಜಲರಿಗೆ ಸೋಮವಂಶದಲ್ಲು ಹೆಣ್ಣು ತರುವ ಬಗ್ಯೆ ಆಳು ವಿಟ್ಟ ಹೊದ್ದರಿಂದ ಜ್ಯೆನರ ಕಡೆ ಹಣ್ಣು ತಂದು ಮದುವೆ ಮಾಡಿಕ್ಕೊಟ್ಟು ಕಾರಣಾ ಅಳಿಯ ಸಂತಾನದಲ್ಲೂ ಯಪ್ಪತ್ತು ತಲೆ ನಡೆದು ಬಂತು ಯಿವರು ಆಳಿಕ್ಕೊಂಡು ಯಿರುವಾಗ್ಯೆ ಉತ್ಪತ್ತಿ ಮಾಡಿದ ಬಾಬತು ಶಾಲಿವಾಹನ ಶಕ ವರುಷ ೧೪೧೧ನೇಯ ಸಾಂಮ್ಯ ಸಂವತ್ಸರದಲ್ಲು ಅಜಿಲರ ಪ್ರತಿಷ್ಟಾ ದೇವಸ್ಥಾನವೊಂದು ಜ್ಯೆನ ಬಸ್ತಿ ೧ ಸ್ತಾನಾ ೧ ದೂರ ಕಣ್ಣಪ್ಪರುಷಿ ಪ್ರತಿಷ್ಟಾ ಜನಾರ್ದನ ದೇವಸ್ಥಾನ ೧ ಅಜಿಲರು ಪ್ರತಿಷ್ಟೆ ಆಳುವದ ಪಾರಿಶ್ಚನಾಥ ಬಸ್ತಿ ೧ ಪಾಂಡವರ ಪ್ರತಿಷ್ಟಾ ಬಳಂಜಿ ಪಂಚಲಿಂಗ ದೇವಸ್ಥಾನವೊಂದು ಶಿರಾಸುರ ಪ್ರತಿಷ್ಟಾ ಶಿರಳಾಲ ಮಹಾದೇವರ ದೇವಸ್ಥಾನ ೧ ಅಜಿಲರು ಪ್ರತಿಷ್ಟಾ ಅಳುವದಂಗಡಿ ಸೊಮನಾಥ ದೇವರ ದೇವಸ್ಥಾನ ೧ ಯೀ ಪ್ರಕಾರ ದೇವಸ್ಥಾನ ಬಸ್ತಿ ಭೂತ ಸಹಾ ಕಟ್ಟಿಸ್ತರು ಆ ತರುವಾಯ ಕೆಲಉ ದಿವಸದ ಮೇಲೆ ಯೇಣೂರ ಗುಮ್ಮಟ ದೇವರ ಪ್ರತಿಷ್ಟೆ ಮಾಡಬೇಕು ಯೆಂಬ ಹಾಗೆ ಕಾರ್ಕಳದ ಹೊಬಳಿಯಲ್ಲಿ ಗುಮ್ಮಟದೇವರು ಯಿರುವುದರಿಂದ ಯಿಲ್ಲಿ ಯೇಣೂರಲ್ಲಿಯು ಯರಡು ಕಡೆಯಲ್ಲಿಯು ಗುಮ್ಮಟ ದೇವರು ಉತ್ಪತ್ತಿ ಆಗುವುದರಿಂದ ಯೇಣೂರಲ್ಲಿ ಪ್ರತಿಷ್ಟೆ ಮಾಡುವ ಬಗ್ಯೆ ಬಿಡುವುದಿಲ್ಲ ಯಂತ ತುಳುವ ರಾಜ್ಯದ ಅರಸು ಬ್ಯೆರಸಒಡೇರು ದಂಡೆತ್ತಿ ತೆಗೆದುಕೊಂಡು ಲಡಾಯಕ್ಕೆ ಬಂದಲ್ಲಿ ನಾರಾವಿ ಮಾಗಣೆಯಲ್ಲು ಅರಸುಗಳಿಗು ಅವರಿಗು ಲಡಾಯಿ ಆಗಿ ಬ್ಯೆರಸವೊಡೇರ ದಂಡ ಮುರದು ಕಾರ್ಕಳಕ್ಕೆ ಹೊಡಿ ಹೊದ್ದರಿಂದ ಆ ಮೇಲೆ ವಿವೇಕವಾಗಿ ವೇಣೂರಿನಲ್ಲಿ ಗುಮ್ಮಟ ದೇವರ ಪ್ರತಿಷ್ಟೆ ಮಾಡಿದರು ಆ ಮೇಲೆ ಕೆಲಉ ದಿವಸದಲ್ಲು ಯಿಕ್ಕೇರಿ ಸಂಸ್ತಾನಾ ನಗರದಲ್ಲು ಮೊಕರರು ಆಗಿ ಚನ್ನಬಸಪ್ಪ ನಾಯಕರು ಯಂಬ ಅರಸು ಯೀ ತುಳುರಾಜ್ಯಕ್ಕೆಲ್ಲಾ ಕಪ್ಪಗಳ ನಿರ್ನಯ ಮಾಡಿ ಯೀ ಅಜಿಲರಿಗೆ ಕಪ್ಪ 1 ಗ ೨೫೦೦೦ ಕಪ್ಪಾ ನೇಮಕಾ ಮಾಡಿಕೊಟ್ಟು ಬರುತಿದ್ದರು. ಆ ಮೇಲೆ ನಾಲ್ಕು ತಲೆ ಆದ ಮೇಲೆ ಪಾಂಡ್ಯಪ್ಪ ಅಜಿಲರಿಗೆ 1 ಗ 3000 ವರಹಾ ನಿರ್ನಯ ಮಾಡಿದರು. ಆ ಮೇಲೆ ನಾಲ್ಕು ತಲೆ ಆದ ಮೇಲೆ 1 ಗ ೪೦೦೦ ವರಹಾ ಶಂಕರದೇವಿ ಅಜಿಲರಿಗೆ ನಿರ್ನಯ ಮಾಡಿಕೊಟ್ಟು ಬಂದರು. ಆ ಮೇಲೆ ಚಿತ್ರಭಾನು ಸಂವತ್ಸರದಲ್ಲು ನವಾಬರು ಕೊಡೆಯಾಲಕ್ಕೆ ಬಂದು ಯಿರುವಾಗ್ಯೆ ಅರಸುಗಳು ಅಲ್ಲಿಗೆ ಹೊದಲ್ಲಿ ಕಂಡಗ 1 ಗ ೭೦೦೦ ನ್ನಿರ್ನಯವಾಗಿ ವೊಂದು ವರುಷ ಕೊಟ್ಟು ಯರಡನೆ ವರುಷಕ್ಕೆ ಶೆಖಲ್ಲಿ ಯಂಬವನು ಮಂಗಲೂರ ಅತಿಕಾರ ಮಾಡಿಕ್ಕೊಂಡು ಅರಸುಗಳ ಹಿಡಕರಿಸಿ ಪಹರೆಯಲ್ಲು ಯಿಟ್ಟು ಯಿವರ ಅರಮನೇಯಹೆ ಜಪ್ತಿಮಾಡಿ ಚಿನ್ನಾ ಬೆಳ್ಳಿನಾಣ್ಯಾ ಜಉಳಿ ದನಕರು ಕಂಚು ತಾಂಬ್ರ ಮುಂತಾದ ಬದುಕು ಯಾವತ್ತು 1 ಗ ೬೦೦೦ ವರಹಾನ ಬದುಕು ತರಿಸಿಕೊಂಡು ಇದರ ಮೇಲೆ ಗ ೭೦೦೦ ನಜಿರಾನೆ ಮಾಡಿಶಿ ಮನೆ ಯಾವತ್ತು ಬೇರೆ ಬೇರೆ ಬದುಕು ಮಾಡುವವರ ಕಳುಹಿಸಿಕೊಟ್ಟ ಶೀಮೆದರೊ ಬಸ್ತು ಸರಕಾರಕ್ಕೆ ದಾಖಲುಮಾಡಿ ನವಾಬರು ಬಿಟ್ಟ ಯಿನಾಮು 1 ಗ ೬೦ ಪರಿಯಂತ್ರ ಯಿನಾಮು ನಡಕೊಂಡು ಕೀಲಕ ಸಂವತ್ಸರದ ಪರಿಯಂತ್ರ ನಡಕೊಂಡು ಬಂದು ಆ ತರುವಾಯ ಯಿತಲಾಗಿ ಅದರಿಂದಲು 1 ಗ ೯ ॥ ೦೨॥ 0 ಸರಕಾರಕ್ಕೆ ಜಪ್ತಿಮಾಡಿ ಬಾಕಿ ಗ ೫೦೨ ॥೦ ಯಿನಾಮು ಯೀ ವರೇಗು ನಡಕೊಂಡು ಬರುತ್ತಾ ಯಿದೆ ಯೀಗೆ

ಕ್ರೋಧನ ಸಂವತ್ಸರದ ವೈಶಾಖ ಬಿ. ೧ಳ ವರೆಗೆ ತಿಮ್ಮಣ ಅಜಿಲರು ತಮ್ಮ ಸ್ವಥಾ ಭೂಮಿ ಮನೆ ನೋಡಿಕೊಂಡು ಸರಕಾರಕ್ಕೆ ಸಲ್ಲುವ ಹಣಕಾಸು ಕೊಟ್ಟುಕೊಂಡು ಸದರಿ 1 ಗ ೫೦೨॥೦ ವನ್ನು ನೋಡಿಕೊಂಡು ಸರಕಾರಕ್ಕೆ ಸಲ್ಲುವ ಹಣಕಾಸು ಕೊಟ್ಟುಕೊಂಡು ಸದರಿ 1 ಗ ೫೦೨॥೦ವನ್ನು ನೋಡಿಕೊಂಡು ಸರಕಾರಕ್ಕೆ ಸಲ್ಲುವ ಹಣಕಾಸು ಕೊಟ್ಟುಕೊಂಡು ಸದರಿ 1 ಗ ೫೦೨॥೦ ವನ್ನು ಕಂಪಣಿಯಿಂದ ಯಿನಾಮು ಕೊಟ್ಟಂಥಾದ್ದು ತೆಗೆದುಕೊಂಡು ಕಾಲಕ್ಷೆಪ ಮಾಡಿಕ್ಕೊಂಡು ಯಿದಾ

ರೆ ಯಿವರ ಬಿರುದಾವಳಿ ॥

ಶ್ರೀ ಮತ್ಸೋಮಕುಲಾಂಬರರಮಣಿ। ಸಾಹಿತ್ಯ ಚಿಂತಾಮಣಿ । ಮಾರಾಕಾರ ಸ್ವರೂಪ ದೇಹಸುವಣೀ। ಲೊಕೈಕ ಚೂಡಾಮಣಿ । ದುಷ್ಟಾಷ್ಟದಶದೊಶ್ಯಾಕುಂಜರನಗಾ । ನಿರ್ಭೇದ ಪಂಚಾನನಪಾಯ ತಿಮ್ಮಣ್ಣಜಿಲ ಭೂವರ ಗುಣಾ ಶ್ರೀ ಪಾರ್ಶ್ವನಾಥಸ್ಥಿರಂ । ಶ್ರೀ ಜೈನಾಮತ ಮಹಂಭೊರಾಸಿ ಚಂದಿರಂರಾದಿತಶಿಲಶಿಲಾ (ಶಿಲಶಿಲಾ) ಗುಣಉಂದಾ ಬಂದುರಂ ಕವಿ ಜಿನಾನಂದಕಂ । ದಾನ ಚಿಂತಾಮಣಿಂ ಅವನಿತಗಮಕಜಿನಾ ಉಂದ ಚಿಂತಾಮಣಿಂ ಕಾಮೀಗ್ನಿ ಜಿನ ಮನೊಹರಾರೂಪಾ ಭಾಸುರಂಗೊಮಿಗ್ನಿಸಿಧಿಸಾಧನ ಪುಣ್ಯಂ ಬಾನುರಂ ವಾದಿ ಜಿನ ವಿನುತ ಸದರ್ಮ ಸತ್ಯಕ್ಷತಂ ಬೆದಕಾಸುವಾಗ್ನಿನುತಾ ಭುವನ ಸಂರಕ್ಷಕಂ ನ್ಯಾಯ ಭಾಸುರ ರಾಜನೀತಿ ಪ್ರಕಾಶಕಂ । ಕಾಯಜ ಮಹಾಂತಾತ್ರರಸ ಭಾವ ಭಾಸಕಂ । ಯೇಕಾಂಗಟ್ಟರ ಮುಭಯಾನ್ವಯ ಸುನಿರ್ಮಲಿಂ । ಲೊಕ ಪೂಜಿತ ಗುಣತ್ರಯ ಚಾರುವೆನಲಂ ಚ -ತುರೊಪಾಯ ಪ್ರಾಪ್ತಾ ಸಕಲ ಪುರ ಶಾರ್ದಕಂನುಕ್ತ ಪಂಚಾಮಂತ್ರ ಸಾದಿತಕಾರ್ಯಶಾರ್ತಕಂ । ಯೊನಾದಿ ವೈರಿ ಸದ್ಗುಣಾ ಮನೋಹರಾಧಿ ಬೇಷಣಂ । ಮಾನಾಧಿ ವೈರಿಶದ್ವರ್ಗಾ ಸರಿಭೀಶಣಂ ಸಪ್ತಾಂಗರಾಜ್ಯ ಸುಖರಮಣೀಯರುತಕಂ । ಅಷ್ಟದಿಗ್ವಿಜಯತ್ರಿತ್ತಾಸಾರ ಲಕ್ಷ್ಮಿಪದಂ ಅಷ್ಟಗುಣ ಸುಂತುಷ್ಟ ಭೋದಾಸ್ಪದಂ । ಕುಟಜಿನ್ನಾವಿನುತ ನವನಿಧಿಸಿದ್ಧಿಸಾಧನಂ ನವರಸರಹಸ್ಯಪ್ರಾಕಾರಕ ಸುಬೋಧನಂ । ಮಲ್ಲದೇವಿ ಗರ್ಭವಾದಿ ಚಂದ್ರೊದಯಂ ಮಲ್ಲಿಕಾದಾಮನಿಭಕೀರ್ತಿ ಪುಣ್ಯೊದಯಂ । ವಿನುತ ಕಾಶೀನಾಥ ಪಾರ್ಶ್ವದಿನಾ ಚರಣಕಂ ಘನತನ್ನೊತ್ತರಮಧುರಾನಗರ ಶುಭಾಚರಣಕಂ ನುತ ದಕ್ಷಣಾ । ಮಧುರ ನಗರ ರಕ್ಷಾಮಣಿಂ ಭಾನುಕಾ ಸತ್ಯಗಾ । ಕರ್ನಜಂತಮಣಿಂ । ಸ್ಮರನಿಭಾಕುಮರಪಟಿ ಸಾಸಂಸ್ತಾನಂ । ಪರಮ ಕಾಸ್ಯಪಗೊತ್ರ ನಿರೇಜ ದಿನಕರಂ । ಪರಮಕಾದಂಬ ವಂಶಾಬುಧಿಚಂದಿರಂ (ವಿ) ನರಬಾಲಿರಾಚೆಂದ್ರಬಂದ ನಿಭ ಸಂಪದಂ । ಪರಮ ಜಿನಧರ್ಮ ಜಿನಧರ್ಮ ಸಂಪ್ರಾಪ್ತಾ ಸಚಿ- ಪ್ರಾದಂ ಉರುಜಿನ ಸಂಗನಾಯಕಾ ಪಟ್ಟಬಾಸುರಂ ವರಭವ್ಯ ಸಂದೊಹ ಹಾ ಆದ್ರಗುಣ ಬಂಧು ಸಂವರ ಪಾರ್ಶ್ವ ಜಿನನಾಥ ರಕ್ಷರಕ್ಷಾಮಣಿಂ । ಚ-ತು ಸಮುದ್ರಾದೀಶ್ವರ ರಾಯಕುಮಾರಾಯ ಬೀಮದಾಮ ವಿರಾರಜಮಾನಂ ಶ್ರೀ ವೀರ ನರಪುರೇಶ್ವರಾ ಮಾತುಲಂ ತುಳವದೇಶಮಧುರಾನಗರ ಪುಂಜಿಳಿಕಾ ದೇಶ ಪರಿಪಾಲಕಾ ಕುಮಾರ ಸಿಂಹಾಸನಾಧೀಶ್ವರಂ ಕಸ್ತೂರಿ ಕೊಲಾಹಲ ಮುಕ್ಕಣ್ಣಕಠಾರಿ ಸಾಳ್ವದೊ ಖಂಡೆಯಾಸೂರತ್ರಳಾ ಕರ್ನೂರಧೂಳಿ ವಸಂತಗುಳಿ ರತ್ನಭೂಪಣೊಯಮಾನ ಚಾಮುಂಡರಾಯ ಕುಲತಿಲಕಾ ತಉಳವ ಕುಲಸ್ತಾ ಪನಾಚಾರ್ಯ ಬಿರುದಾವಳಿ ವಿರಾರಜಮಾನಂ ಬಾಲರಾಜಾಧಿರಾಜ ನಾಮಧೇಯ ಭವ್ಯಸಿಖಾಮಣಿ ಮಹಾರಾಧಿರಾಜಂ ಭೊ ಭೊ ಪಾರಿಶ್ವಜನ ರಕ್ಷ ರಕ್ಷ ॥

◆◆◆

೨. ಪುತ್ತಿಗೆ ಮಠದ ಕೈಫಿಯತ್ತು

M 351
P - 355 - 360

ಯಾದವೇಂದ್ರ ಮುಪಾಸ್ಮಹೆ । ಧರಣಿಧರಂ ಸಂಪ್ರದ್ಯ । ದಾಮೋಧರ ಮುನಿಂ ಭಜೆ॥ ರಘುನಾಥ ಮುನಿಂ ನೌಮಿ। ಶ್ರೀವತ್ಸಾಂಕಂ ಸಮಾಶ್ರಯೆ ಶ್ರಯೆಹಂ ಗೋಪಿನಾಥಾರ್ಯ । ರಂಗನಾಥ ಮುನಿಂ ನಮಃ । ಲೊಕನಾಥ ನಮಃ ಕುರ್ಮೊ । ರಮಾನಾಥ ಮುನಿಂ ಸ್ತಮಃ । ಶ್ರೆಯೊ ಶ್ರೀವಲ್ಲಭಮುನಿಂ । ಶ್ರೀನಿವಾಸಂ ನತೋಸ್ಮಹಂ । ಉಪಾಸಿ ಶ್ರೀಮಿಧಿ ಗುರುಂ । ಗುಣ ನಿರ್ದಾರ್ಯಮಾಶ್ರಯೆ । ನಂದಯಾಮ್ಯಾನಂದನಿಧಿಂ ತೊಷಯಾಮಿ ತಪೋನಿಧಿಂ । ಪ್ರಾಣೆ ಯಾಮೆ ರಾಘುವೇಂದ್ರಂ । ಕವೀಂದ್ರಂ ದೈಶಿಕಂಶ್ರಯೆ । ರಾಘುವೇಂದ್ರ ಮುನಿಂ ವಂದೆ । ವಿಭು ದೇಂದ್ರ ಸಮಾಶ್ರಯೆ । ಶ್ರೀ ಸುರೇಂದ್ರ ಗುರುವಂದೆ ಭಕ್ತಜಾನಾ ವಿರಾಜಿತಂ ॥ ನಮ್ಮ ಉಪೇಂದ್ರತೀರ್ಥ ಶ್ರೀಪಾದಂಗಳವರು ಶ್ರೀ ವಿಠಲ ದೇವರ ಪೂಜೆಯನ್ನು ಮಾಡಿಕ್ಕೊಂಡು ಕ್ರಮಪ್ರಾಪ್ತವಾದ ಶ್ರೀಕೃಷ್ಣ ದೇವರ ಪೂಜಾರ್ಧರ್ಮಗಳನ್ನು ಮಾಡಿಕ್ಕೊಂಡು ಸಭಾಸ್ತ್ರ ಪ್ರವಚನ ಮಾಡುತ್ತ ಮಹಾ ತಪೊ ನಿಷ್ಟರಾಗಿ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಕೃಷ್ಣ ತೀರದಲ್ಲು ಶಕವರುಷ ೧೨೧೧ ನೆ ಸರ್ವದಾರಿ ಸಂವತ್ಸರ ಮಾಘು ಶು ॥ ೧೨ ಯಲ್ಲು ವೈಕುಂಠ ಯಾತ್ರೆಯನ್ನು ಮಾಡಿದರು ಅವರ ಕರಕಮಲಸಂಜಾತರಾದ ಕವಿಂದ್ರತೀರ್ಥ ಶ್ರೀಪಾದಂಗಳವರು ತೀರ್ಥಯಾತ್ರೆ ನಿಮಿತ್ತ ದೇಶಾಂತರಕ್ಕೆ ಹೊದವರು ಉತ್ತರ ದೇಶಲು ದೇವರ ಯಾತ್ರೆ ಮಾಡಿದರು ಪರೀಧಾವಿ ಸಂವತ್ಸರ ಶ್ರಾವಣ ಶು॥ ೫ ಲ್ಲು ಯಿವರ ಕರಕಮಲಸಂಜಾತರಾದ ಹಸೇಂದ್ರ ತೀರ್ಥ ಶ್ರೀಪಾದಂಗಳವರು ಪುತ್ತಿಗೆಯಲ್ಲು ಪ್ರಮಾತಿ ಸಂವತ್ಸರ ಫಾಲ್ಗುಣ ಶು ॥ ೫ ಯಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ಮಾಧವೇಂದ್ರ ತೀರ್ಥರು ಉಡುಪಿಯಲ್ಲು ಶ್ರೀಕೃಷ್ಣ ಸನ್ನಿಧಿಯಲ್ಲಿ ಪ್ಲವ ಸಂವತ್ಸರದ ಚೈತ್ರ ಶು ೧ ಯಲ್ಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ಧರಣಿಧರ ತೀರ್ಥರು ನರಶಿಹ್ಮ ಕ್ಷೇತ್ರದಲ್ಲು ರಉುದ್ರಿ ಸಂವತ್ಸರ ವೈಶಾಖ ಶು ॥ ೧ಲ್ಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ದಾಮೊದರ ತೀರ್ಥರು ಬಾಹಾಳ ತೀರ್ಥಯಾತ್ರೆ ಮಾಡಿ ದೇಶಸಂಚಾರ ಮಾಡಿಕ್ಕೊಂಡು ಕಾಶಿ ಭಾಗೀರತಿ ತೀರದಲ್ಲಿ ದೇಹ ತ್ಯಾಗವನ್ನು ವಿಷು ಸಂವತ್ಸರದ ಪುಷ್ಯ ಬಹುಳ ೫ಲ್ಲು ಮಾಡಿದರು ಅವರ ಶಿಷ್ಯರು ರಘುನಾಥ ತೀರ್ಥರು ಬಾಹಾಳ ತಪೋನಿಷ್ಟರಾಗಿ ಪಾಟ ಪ್ರವಚನ ಮಾಡಿಕ್ಕೊಂಡು ಉಡುಪಿಯಲ್ಲು ಶ್ರೀಕೃಷ್ಣ ದೇವರ ಸನ್ನಿಧಿಯಲ್ಲು ವಿಕಾರಿ ಸಂವತ್ಸರ ಚೈತ್ರ ಶು॥ ೫ಲ್ಲು ದೇವರ ಯಾತ್ರೆಯನ್ನು ಮಾಡಿದರು ಅವರ ತರುವಾಯ ಶ್ರೀವತ್ಸಾಂಕ ಸ್ವಾಮಿಗಳವರು ಯಾತ್ರೆ ನಿಮಿತ್ಯ ಹೊರಟು ಹೊದವರು ರಾಮೇಶ್ವರದಲ್ಲು ಸಿದ್ದಾರ್ತಿ ಸಂವತ್ಸರ ಭಾದ್ರಪದ ಶು॥ ೭ರಲ್ಲು ದೇಹತ್ಯಾಗವನ್ನು ಮಾಡಿದರು ಅವರ ಶಿಷ್ಯರು ಗೋಪಿನಾಥ ತೀರ್ಥರು ಬಹಳ ದೇಶಗಳಲ್ಲು ತೀರ್ಥ ಯಾತ್ರೆ ಮಾಡಿಕ್ಕೊಂಡು ಗೊಕುಲ ಬ್ರುಂದಾವನ ಕ್ಷೇತ್ರದಲ್ಲು ಚಿತ್ರ ಚಿ-ತ್ರಭಾನು ಸಂವತ್ಸರ ಶ್ರಾವಣ ಬಹುಳ ೫ಲ್ಲು ದೇವರ ಯಾತ್ರೆಯನ್ನು ಮಾಡಿದರು ಅವರ ಶಿಷ್ಯರು ರಂಗನಾಥ ತೀರ್ಥ ಶ್ರೀಪಾದಂಗಳವರು ಉಡಿಪಿಯಲ್ಲು ಶ್ರೀಕೃಷ್ಣ ದೇವರ ಸನ್ನಿಧಿಯಲ್ಲು ದೇಹತ್ಯಾಗವನ್ನು ಪರಿಧಾವಿ ಸಂವತ್ಸರ ಆಶ್ವೀಜ ಬಹುಳ 30ಯಲ್ಲು ದೇಹತ್ಯಾಗವನ್ನು ಮಾಡಿದರು ಅವರ ಕರಕಮಲಸಂಜಾತರಾದ ಲೊಕನಾಥ ತೀರ್ಥ ಶ್ರೀಪಾದಂಗಳವರು ಗೊದಾವರಿ ತೀರದಲ್ಲು ದೇಹತ್ಯಾಗವನ್ನು ಶುಕ್ಲ ಸಂವತ್ಸರ ಅಶ್ವೀಜ ಶು ॥ ೫ ಯಲ್ಲು ಮಾಡಿದರು ಅವರ ಶಿಷ್ಯರು ರಾಮನಾಥ ತೀರ್ಥರು ಪುತ್ತಿಗೆಯಲ್ಲು ಜಯ ಸಂವತ್ಸರ ಚೈತ್ರ ॥ ಬ ೫ ಲ್ಲು ದೇವರ ಯಾತ್ರೆ ಮಾಡಿದರು । ಅವರ ಕರಕಮಲಸಂಜಾತರಾದ ಶ್ರೀ ಮಲ್ಲಭತೀರ್ಥಪಾದಂಗಳವರು ಬಹಾಳ

ತರುವಾಯ ಸುದಾಮಂಗಳವನ್ನು ತಪೋನಿಷ್ಟರಾಗಿ ಯಿದ್ದು ಉಡುಪಿಯಲ್ಲು ಶ್ರೀ ಕೃಷ್ಣ ಸನ್ನಿಧಿಯಲ್ಲು ಶ್ರೀಮುಖ ಸಂವತ್ಸರ ವೈಶಾಖ ಬಹುಳ 30ಯಲ್ಲು ಶ್ರೀದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ಶ್ರೀನಿವಾಸ ತೀರ್ಥರು ಉಡುಪಿಯಲ್ಲು ಪರಾಭವ ಸಂವತ್ಸರ ಜೇಷ್ಟ ಶು|| ೧ ಯಲ್ಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ಶ್ರೀನಿಧಿ ತೀರ್ಥ ಶ್ರೀಪಾದಂಗಳವರು ಉಡುಪಿಯಲ್ಲು ದೇವರ ಯಾತ್ರೆ ಮಾಡಿದರು ಯಿವ ಸಂವತ್ಸರ ಚೈತ್ರ ಶು||೫ ಲ್ಲು ಅವರ ಶಿಷ್ಯರು ಆನಂದನಿಧಿತೀರ್ಥರು ಪುತ್ತಿಯಲ್ಲು ವಿಕಾರಿ ಸಂವತ್ಸರ ಮಾಘ ಬಹುಳ ೫ ಲ್ಲು ದೇವರ ಯಾತ್ರೆ ಮಾಡಿದರು | ಅವರ ಶಿಷ್ಯರು ತಪೋನಿಧಿ ತೀರ್ಥರು ಉಡುಪೆಯಲ್ಲು ಕ್ಷಯ ಸಂವತ್ಸರದ ಮಾಘ ಬ 30 ಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ರಾಘವೇಂದ್ರತೀರ್ಥರು ಶ್ರೀಮದಲ್ಲು ಖಗ ಸಂವತ್ಸರ ಚೈತ್ರ ಬಹುಳ ೫ಲ್ಲು ದೇವರ ಯಾತ್ರೆ ಮಾಡಿದರು ಆವರ ಕರಕಮಲಸಂಜಾತರಾದ ಕವಿಂದ್ರ ಸ್ವಾಮಿಗಳವರು ಬಹಾಳ ವಿದ್ವಾಂಸರು ಬಹಾಳ ತರುವಾಯ ಪಾಟ ಪ್ರವಚನೆ ಮಾಡಿಕ್ಕೊಂಡು ಯಿದ್ದು ಪುತ್ತಿಗೆಯಲ್ಲು ಕ್ಷಯ ಸಂವತ್ಸರ ವೈಶಾಖ ಶು || ೧೦ ಯಲ್ಲು ದೇವರ ಯಾತ್ರೆಯನ್ನು ಮಾಡಿದರು ಅವರ ಶಿಷ್ಯರು ರಾಘವೇಂದ್ರ ಸ್ವಾಮಿಗಳವರು ಬಹು ದೊಡ್ಡ ವಿದ್ವಾಂಸರು ಬಹು ಸ್ವಾಮಿಗಳಿಗೆ ಬಹಳಾ ತರುವಾಯ ಪಾಠ ಹೇಳಿಕ್ಕೊಂಡು ಸಕಲ ದೇಶ ಸಂಚಾರ ಮಾಡಿಕ್ಕೊಂಡು ಮಹಾರಾಜಾಧಿಗಳಿಂದ ವಿದ್ವಾಂಸರಿಂದ ಸಹಾ ಮಾನಿತರಾಗಿ ಗಜಾಂಕಾದಿಗಳ ಸಂಪಾದಿಸಿ ಬಹಾಳ ದಿವ್ಯ ಶಾಸ್ತ್ರ ಪ್ರವಚನೆ ಮಾಡಿಕ್ಕೊಂಡು ಯಿದ್ದು ಪುತ್ತಿಗೆಯಲ್ಲು ನಂದನ ಸಂವತ್ಸರ ಆಷಾಢ ಶು || ೧ ಲ್ಲು ವೈಕುಂಠಯಾತ್ರೆಯನ್ನು ಮಾಡಿದರು ಅವರ ಶಿಷ್ಯರು ವಿಭುವೇಂದ್ರ ಸ್ವಾಮಿಗಳು ಉಡುಪಿ ಯಲ್ಲು ಜಯ ಸಂವತ್ಸರ ಜೇಷ್ಟ ಶು || ೫ಲ್ಲು ದೇವರ ಯಾತ್ರೆ ಮಾಡಿದರು ಅವರ ಶಿಷ್ಯರು ಅಸುರೇಂದ್ರ ತೀರ್ಥ ಶ್ರೀಪಾದಂಗಳವರು ಯಾತ್ರ ನಿಮಿತ್ತಿಕಾ ಕಾಸಿಗೆ ಹೊರಟು ಹೊಗುವಾಗ್ಯೆ ನಾಗಪುರಿಯಲ್ಲು ನದೀ ತೀರದಲ್ಲು ಸಉಂಮ್ಯ ಸಂವತ್ಸರ ಫಾಲ್ಗುಣ ಶು ||೧೨ ಯಲ್ಲು ದೇವರ ಯಾತ್ರೆ ಮಾಡಿದರು ಯಂತ ಉಪೇಂದ್ರ ತೀರ್ಥ ಶ್ರೀಪಾದಂಗಳವರ ಆರಭ್ಯ ಗುರುಗಳ ಪಾರಂಪರ್ಯ ಬರಶಿಕೊಟ್ಟ ಕೈಪಿಯತು ನಾಮೆ ||

◆◆◆

೩. ಕುಂದಾಪೂರೆ (ಧರ್ಮಸ್ಥಳ) ಕೈಫಿಯತ್ತು

M-353

P- 461 - 465

ಶ್ರೀ ಧರ್ಮಸ್ಥಳದ ದೇವಸ್ಥಾನದ ದೇವರು ನಿರ್ಮಾಣವಾಗಿ ಯಷ್ಟು ವರುಷವಾಯಿತು ಆ ದೇವರು ಯಾರಿಗೆ ಪ್ರಸನ್ನರಾದರು ಆ ದೇವಸ್ಥಾನಕ್ಕೆ ಬ್ರಾಹ್ಮರ ಪೂಜಾ ಯಾವತ್ತು ಜಾತಿಯವರು ನಡಕೊಳ್ಳುತ್ತಾಯಿದ್ದಂತೆ ಜೈನ ಜಾತಿಯವರು ಹುಕುವಕು ನಡ ಉದಕ್ಕೆ ಕಾರಣವೇನು ಜೈನರ ಜಾತಿಯವರ ದೇವಸ್ಥಾನದಲ್ಲಿ ಬ್ರಾಹ್ಮರ ಪೂಜಾ ಆಗುವುದಕ್ಕೆ ಸಬಿಬಿಯೇನು ಯೀ ಬಗ್ಯೆ ಚೆನ್ನಾಗಿ ವಿಚಾರಿಸಿ ಆ ಬಗ್ಯೆ ಕೈಫಿಯತು ಬರಸಿ ಕಳುಹಿಸುವಂತೆ ಅಪ್ಪಣೆ ಬಂದ ಪ್ರಕಾರ ಧರ್ಮಸ್ಥಳದ ಕುಮಾರೈ ಹೆಗ್ಗಡೆರಿಗೆ ಕರಿಸಿ ಸ್ಥಳದ ಕೈಫಿಯತು ವಿಚಾರಿಸಿದಲ್ಲಿ ತಮಗೆ ತಿಳಿದಷ್ಟು ಅನುಭವ ಬರಶಿ ಕೊಡುತ್ತೇನೆ ಯಂಬದಾಗಿ ಹೇಳಿ ಹೆಗ್ಗಡೆ ಮಜಕೂರನು ಸ್ಥಳದ ಕೈಫಿತು ಬರಸಿದ ವಿವರಾ -

ಧರ್ಮಸ್ಥಳದಲ್ಲಿ ಪ್ರಾಕು ಜಯಿನ ಜಾತಿ ಅಮ್ಮುದೇವಿ ಬಲ್ಲಾಳತಿಯವರಿಗೆ ಪ್ರಸನ್ನರಾಗಿ ದುರ್ಗಾಂಶ ಕಾಳರ್ಕಾಯಿಯೆಂಬ ಅಮ್ಮಾರವರ ಹೆಸರು ಯೀಚೆಗೆ ಕನ್ಯಾಕುಮಾರಿಯೆಂಬ ಪ್ರಸಿದ್ಧ ಹೆಸರು ಉಳ್ಳ ಅಮ್ಮನವರು ಸದರಿ ಬಲ್ಲಾಳತಿಯವರಿಗೆ ರಾತ್ರಿ ಕಾಲ ಸ್ವಪ್ನದಲ್ಲು ಬಂದು ನಾಉಯಿದೆ ನೆಲ್ಲಾಡಿ ಬೀಡಿನಲ್ಲಿ ವಾಸವಾಗಿಯಿರುತ್ತೇನೆ ಯೀ ಸ್ಥಳದಲ್ಲಿ ಮಂಚಾನಯಿಟ್ಟು ದೀಪಾ ಹಚ್ಚಿ ಪೂಜೆ ಮಾಡಿಕೊಂಡುನಿ ಬಾಹದು ಯೀ ಬೀಡಿನ ಸಮೀಪದಲ್ಲಿ ಬದಲು ಬೀಡಿನ ಕಟ್ಟಕೊಂಡು ಅಲ್ಲೆ ಯದ್ದು ನಿತ್ಯಗಟ್ಲೆ ಶೇವೆ ಮಾಡುತ್ತಾ ಬರುವದು ಮುಂದೆ ನಿಮ್ಮ ಸಂತಾನ ಪಾರಂಪರ್ಯವಾಗಿ ಸೇವೆ ತೆಗೆದುಕೊಳ್ಳುತ್ತೇವೆ ಕಾರ್ಯ ಕಾರಣ ಬಹಳವಧೆಯಂಬ ರೀತಿ ಸ್ವಪ್ನದಲ್ಲು ಕನ್ನಿಕೆರೂಪವಾಗಿ ಕಾಣಿಸಿಕ್ಕುಂಡು ಅಪ್ಪಣೆ ಆದ ಪ್ರಕಾರ ಬಲ್ಲಾಳತಿಯವರು ತಾಉ ಯಿದ್ದ ಬೀಡು ಅಮ್ಮನವರಿಗೆ ಬಿಟ್ಟುಕೊಟ್ಟು ಆ ಸಮೀಪದಲ್ಲ ತಾಉ ಯಿರತಕ್ಕ ಬಗ್ಯೆ ಬದಲು ಬೀಡು ಕಟ್ಟಿಕೊಂಡು ಅಲ್ಲೆ ಯಿದ್ದು ಅಮ್ಮನವರಿಗೆ ಮಂಚ್ಛಾಯಿಟ್ಟು ದೀಪಾ ಹಚ್ಚಿ ಆಗುವ ಶೇವೆ ನಿತ್ಯದಲ್ಲಿ ತಮ್ಮ ಕೈಯಿಂದಲೆ ಮಾಡುತ್ತಾ ಬರುತ್ತಾಯಿದ್ದಲ್ಲಿ ಆ ಮೇಲೆ ಕೆಲಉ ವರುಷದ ಮೇಲೆ ಶ್ಯಾವಿವಾಹನ ಶಕ ವರುಷ ೧೪೩೬ನೆ ಖರ ಸಂವತ್ಸರದಲ್ಲು ಉಡುಪಿನ ಸೊದೆ ಮಠದ ವಾದಿರಾಜ ಸ್ವಾಮಿಯವರು ಯೀ ಧರ್ಮಸ್ಥಳದ ಮಾರ್ಗವಾಗಿ ಬಂದಲ್ಲಿ ಯೀ ಸ್ಥಳದಲ್ಲಿ ನಾಳಿನ ದಿವಸ ನಿಂತು ಬಿಕ್ಷಾ ತೆಗೆದುಕ್ಕೊಂಡು ಹೋಗಬೇಕೆಂದು ಸದರಿ ಬಲ್ಲಾಳತಿಯು ಹೇಳಿಕೊಂಡಲ್ಲಿ ಸ್ವಾಮಿಗಳವರು ಯೀ ಸ್ಥಳ ದೈವೀಕ ಆದ್ದರಿಂದಾ ಯೀ ಸ್ಥಳದಲ್ಲಿ ದೇವತಾ ಪ್ರತಿಷ್ಟೆ ಮಾಡಿದರೆ ಬಿಕ್ಷಾ ತೆಗೆದುಕೊಳ್ಳಬಹುದು ಯೆಂಬುದಾಗಿ ಹೇಳಿದ್ದರಿಂದಾ ಆ ರಾತ್ರಿಯಲ್ಲು ಬಲ್ಲಾಳತಿ ಯವರು ಸ್ವಾಮಿಗಳವರು ಯೀ ಪ್ರಕಾರ ಹೇಳುತ್ತಾರೆ ಯೀ ಬಗ್ಯೆ ಯಾವ ಪ್ರಕಾರ ಮಾಡಬೇಕು ಯಂತ ಅಪ್ಪಣೆ ಆಗ ಬೇಕೆಂಬುದಾಗಿ ಪ್ರಾರ್ಥನೆ ಮಾಡಿಕೊಂಡಲ್ಲಿ ರಾತ್ರಿ ಸ್ವಪ್ನದಲ್ಲು ನೀಉ ಚಿಂತೆ ಮಾಡುವರು ಕೆಲಸವಿಲ್ಲಾ ಸ್ವಾಮಿಗಳಿಗೆ ಭಿಕ್ಷಾ ಆಗುವ ಸನ್ನಾಹ ಮಾಡಿಸಿ ನಾಉ ಕದಿರೆಯಿಂದ ದೇವರ ತಂದು ಪ್ರತಿಷ್ಠೆ ಮಾಡುತೇವೆ ಯೀ ಸಮಾಚಾರ ಅವರಿಗೆ ಹೇಳಿದಲ್ಲಿ ಅವರು ವಡಂಬಟ್ಟು ನಿಲ್ಲುತ್ತಾರೆ ನಾಉ ದೇವರು ತಂದು ಗರ್ಭಗ್ರಹಾ ನಿರ್ಮಾಣಾ ಮಾಡಿ ಪ್ರತಿಷ್ಟೆ ಮಾಡುತೇವೆ ನಮಗು ಯೀ ದೇವರ ಯಡ ಭಾಕದಲ್ಲಿ ವಿಂಗಡ ಗರ್ಭಗ್ರಹ ಕಟ್ಟಿ ಪ್ರತಿಮಾ ರೂಪದಲ್ಲಿ ಮೂರ್ತಿ ಮಾಡಿಸಿಕೊಟ್ಟು ಶ್ರೀ ದೇವರಿಗೆ ತಮಗೆ ಸಹಾ ಬ್ರಾಹ್ಮರ ಕೈಯಿಂದಲೆ ಪೂಜೆ ಮಾಡಿಸುವದು ಮುಂದೆ ಕಾರ್ಯ ಕಾರಣಉ ಬಹಳ ನಡೆಯುತ್ತದೆ ಯಂಬದಾಗಿ ಸ್ವಪ್ನದಲ್ಲು ಅಪ್ಪಣೆ ಆದ ಪ್ರಕಾರ ಅದೆ ರಾತ್ರಿಯಲ್ಲು ಅಮ್ಮನವರು ಶ್ರೀ ಮಂಜುನಾಥ

ದೇವರ ಲಿಂಗಾ ತಂದು ಪ್ರತಿಷ್ಟೆ ಮಾಡಿದರು ಅರುಣೋದಕ್ಕೆ ಯೆದ್ದು ನೋಡುವಾಗ್ಯೆ ಶ್ರೀ ದೇವರು ಗರ್ಭಗ್ರಹ ಸಹಾ ಪ್ರತಿಷ್ಟೆ ಆಗಿಯಿದ್ದರು. ಆ ಮೇಲೆ ಸ್ವಾಮಿಗಳವರಿಗೆ ಕರತಂದು ದೇವರು ಪ್ರತಿಷ್ಠೆ ಆಗಿಯಿದ್ದಾರೆ. ತಾವು ಯೀ ಸ್ಥಳದಲ್ಲು ಬಿಕ್ಷಾ ತೆಗೆದುಕೊಳ್ಳಬೇಕು ಯಂಬದಾಗಿ ಹೇಳಿಕೊಂಡಲ್ಲಿ ಅವರು ಬಂದು ಬಿಕ್ಷಾ ತೆಗೆದುಕೊಂಡು ಮುಂದೆ ಹೋದರು. ಆ ಬಳಿಕೆ ಬಲ್ಲಾಳತಿಯವರು ಶ್ರೀ ದೇವರ ಯಡದ ಭಾಗದಲ್ಲಿ ಗರ್ಭಗ್ರಹ ಕಟ್ಟಿಶಿ ಅಮ್ಮಾನವರ ಪ್ರತಿಮೆ ಪ್ರತಿಷ್ಟೆ ಮಾಡಿ ಶ್ರೀ ದೇವರಿಗೆ ಅಮ್ಮನವರಿಗೆ ಸಹಾ ಬ್ರಹ್ಮರ ಕೈಯಿಂದಾ ಪೂಜೆ ಮಾಡಿಸುತ್ತಾ ಬಂದರು. ಆ ಮೇಲೆ ಕಾರ್ಯಕಾರಣಾ ನಡಸುವ ಬಗ್ಯೆ ಹಳತಾಯ ಯಂಬ ಗಣಕ್ಕೆ ಪ್ರಧಾನಿಕೆ ನೇಮಕಾ ಮಾಡಿಸಿಯದೆ ಆತಗು ಪ್ರತ್ಯೇಕವಾಗಿ ವೊಂದು ಸ್ಥಾನಉ ಕಟ್ಟಿಸಿ ಕೊಟ್ಟು ನಿತ್ಯ ಗಟ್ಲೆ ದಿನಮುಂತಾಗಿ ನಡಸುವದು ಸ್ಥಳಕ್ಕೆ ಕಾಣಿಕೆ ಕಪ್ಪ ಬಹಳವಾಗಿ ಬರುತದೆ ವ್ಯಾಜ್ಯಗಳು ಬರುತದೆ ಯಿದನೆಲ್ಲಾ ನಿಯತವಾಗಿ ತೀರಿಸಿ ದೇವತಾ ಸೇವೆ ಧರ್ಮ ಸಹಾ ಸಾಂಗವಾಗಿ ದಿನ ದಿನಕ್ಕೆ ಅತಿಶಯವಾಗಿ ನಡಕ್ಕೆಂಡು ಬರುತ್ತಾ ಬಾಹದು ಯಂಬದಾಗಿ ಬಲ್ಲಾಳತಿಯವರಿಗೆ ಅಪ್ಪಣೆ ಆದ ಪ್ರಕಾರ ಕೆಲಉ ವರುಷ ನಡದು ಬಂದಲ್ಲಿ ಸದರಿ ಹಳತಾಯನಿಂದಾ ದೇವತಾ ಸೇವೇಗೆ ಧರ್ಮಕ್ಕೆ ಸಹಾ ಕಾಣಿಕೆ ಕಪ್ಪ ಬರುವುದಕ್ಕೆ ವಿಳಂಬವಾದ್ದರಿಂದಾ ಯೀತನ ಪ್ರದಾನಿಕೆ ಬಗ್ಯೆ ಅಣ್ಣಪ್ಪಾ ಯಂಬ ಗಣಕ್ಕೆ ಗುತ್ತು ಮಾಡಿಶಿ ಅಧೆಯೀತಗೆ ಪ್ರತ್ಯೇಕ ಸ್ತಾನಾ ಕಟ್ಟಿಶಿ ನಡೆವ ಕಟ್ಲೆ ನಡಶಿದ್ದಲ್ಲಿ ಅತಿಶಯ ಹರಿಕೆ ಕಾಣಿಕೆ ಬರುತದೆ ಸ್ಥಳದಲ್ಲಿ ಧರ್ಮ ಸಾಂಗವಾಗಿ ನಡಸಿಕೊಂಡು ಬರತಕ್ಕ ಬಗ್ಯೆ ನಾಲ್ಕು ಜನ ಬುದ್ಧಿವಂತರಿಗೆ ಗೊತ್ತು ಮಾಡಿಯಿಟ್ಟು ಅವರ ಮುಖದಲ್ಲಿ ನಡೆಸಿಕ್ಕೊಂಡು ಬರುವದು ಯಂದು ದರುಶನದಲ್ಲು ಅಪ್ಪಣೆ ಆದ ಪ್ರಕಾರ ಪಾರಂಪರ್ಯ ನಡೆದು ಬರುತ್ತದೆ ಶ್ರೀ ದೇವರ ಶೇವೆ ಧರ್ಮ ಸಹಾ ಸಾಂಗವಾಗಿ ನಡಶಿಕ್ಕುಂಡು ಬರತಕ್ಕ ಬಗ್ಯು ಬಂದಂಥಾ ಹರಿಕೆ ಕಾಣಿಕೇಯು ತೆಗೆದುಕ್ಕೊಂಡು ಸ್ತಳಕ್ಕೆ ಬಂದಂತಾ ವ್ಯಾಜ್ಯಗಳು ನಿಯತವಾಗಿ ತೀರಿಸುವ ಬಗ್ಯೆ ಸಹಾ ನಾಲ್ಕು ಜನ ಬುದ್ಧಿವಂತರಿಗೆ ಅಪ್ಪಣೆ ಪ್ರಕಾರ ಗೊತ್ತಾಗಿ ನಡದು ಬಂದ ವಿವರಾ

೧. ಬಳ್ಳಾಳತಿ ಪಾರಂಪರೆ ನಡೆದು ಬಂದ ಕುಮಾರ ಹೆಗ್ಗಡೆ ಜಯಿನ ಜಾತಿ ಜನ

೨. ಸ್ತಳದ ಕದೀಮು ಜನದಲ್ಲು

೧. ಅಜಿರಿ ಬಂಟ ಮಾನಾದಿಕ ಜಾತಿ ಮೊದಲಾದ ಮನೆಮತಜನ (ಮನೆಯರ)

೧. ಮಣ್ಣೊಣಿತಾಯ ಯಂಬ ಶಿವಳ್ಳಿ ಬ್ರಾಹ್ಮಣ ನಾಲ್ಕನೆ ಮನೆಜನ

೩. ಯಡಬಲದಲ್ಲಿಯಿದ್ದಂತಾವರು

೧. ಯರಡನೆ ಮನೆ ದೆಲಂಪಾಡಿಯೆಂಬ ಸ್ತಾನಿಕ ಜಾತಿ ಜನ.

೧. ಮೂರನೆ ಮನೆ ಕೋಟಣ್ಣಾಯೆಂಬ ಜಯಿನ ಜಾತಿ ಜನ.

೧. ಆಯಿದನೆ ಮನೆ ಕಂಬಳಿ ಬಂಟಯೆಂಬ ಜಯಿನ ಜಾತಿ ಜನ

ಯೀ ಬಗೆ ಆರು ಜನ ದೇವತಾ ಶೇವೇಗೆ ಅನುಕೂಲವಾಗಿ ನಡಕೊಳ್ಳಬೇಕು ಯೀ ಜನದಲ್ಲಿ ವಿಶೇಷ ಉತ್ಸಹ ದಿವಸದಲ್ಲಿ ದರುಶನಾ ಬರುವಂತಾ ಜನ ಸ್ಥಾನೀಕ ದೇಲಂಪಾಡಿ ಜನ ೧ ಜೈನ ಕೊಟಣ್ಣ ಜನ ೧ ಯೀ ಎರಡು ಜನದ ಮೇಲೆ ದರುಶನಾ ಬಂದು ಆಗುವ ಧರ್ಮ ಮುಂತಾದ ಕಟ್ಟು ಕಟ್ಲೆ ಬಗ್ಯೆ ಅಪ್ಪಣೆ ಆಗುತ್ತಾಯಿಧೆ ಯೀ ಪ್ರಕಾರದ ಅನುಭವಯಿದ್ದದನ್ನು ಬರಸಿದ್ದೇನೆಂಬುದಾಗಿ ಹೆಗ್ಗಡೆ ಮಜಕೂರನು

ಬರಶಿಯಿದ್ದಾನೆ ದಿವ್ಯ ಚಿತ್ತಕ್ಕೆ ಪರಾಂಬರಿಕೆಯಿರಬೇಕು ಯೀ ಸ್ಥಳಾ ನಿರ್ಮಾಣವಾಗಿ ಬಲ್ಲಾಳತಿಗೆ ಸ್ವಪ್ನವಾದಂತಾ ವರುಷ ಯಿಂಥಾವದೆಂಬುದು ಗೊತ್ತು ಕಾರಿಬೋದಿಲ್ಲಾ ಪೂರ್ವದಲ್ಲಿ ಬರದು ಹಾಕಿದಂತಾ ಪುಸ್ತಕಯಿದ್ದದ್ದು ಬಲ್ಯಾದವರ ಕಾವಾಲು ವಳಗೆ ಹೋಗಿಯಿದೆ ಯೀಚೀಗೆ ಶ್ರೀ ಮಂಜುನಾಥ ದೇವರು ಪ್ರತಿಷ್ಟಸ್ವಾದೆ ಸ್ವಾಮರಾಯರು ಬಂದು ಆದಂತಾ ವರುಷ ಶಖ ಸಹಾ ತಿಳಿದಂತಾದ್ದು ಸದರಿ ಬರದು ಯಿದೆ ಯೀ ವಿವರ ದಿವ್ಯಚಿತ್ತಕ್ಕೆ ಪರಾಯಿರಿಕೆಯಿರಬೇಕು.

◆◆◆